ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮಾರ್ಚ್ 2019 ಬೆಲೆ ರೂ.5/-

**2019 ಮಾರ್ಚ್ 16 ರಿಂದ 20 ರ ವರೆಗೆ**
**ತಿರುಮಲ ಶ್ರೀ ವೆಂಕಟೇಶ್ವರ ಸ್ವಾಮಿಯವರ**
**ತೆಪ್ಪೋತ್ಸವಗಳು**





ತಿರುಮಲೆ ತಿರುಪತಿ ದೇವಸ್ಥಾನಗಳು

ಶ್ರೀ ಲಕ್ಷ್ಮೀ ದೇವಿ ಅಮ್ಮನವರು

ಮಾತೃಶ್ರೀ ತರಿಗೊಂಡ ವೆಂಗಮಾಂಬ

# ತರಿಗೊಂಡ
# ಶ್ರೀ ಲಕ್ಷ್ಮೀನರಸಿಂಹ ಸ್ವಾಮಿಯವರ ಬ್ರಹ್ಮೋತ್ಸವಗಳು

## 13-03-2019 ರಿಂದ 21-03-2019 ರ ವರೆಗೆ





**13-03-2019 ಬುಧವಾರ**
ಹಗಲು: ಧ್ವಜಾರೋಹಣ
ರಾತ್ರಿ: ಹಂಸವಾಹನ

**14-03-2019ಗುರುವಾರ**
ಹಗಲು: ಮುತ್ತಿನಚಪ್ಪರವಾಹನ
ರಾತ್ರಿ: ಹನುಮದ್ವಾಹನ

**15-03-2019 ಶುಕ್ರವಾರ**
ಹಗಲು: ಕಲ್ಪವೃಕ್ಷವಾಹನ
ರಾತ್ರಿ: ಸಿಂಹವಾಹನ

**16-03-2019 ಶನಿವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ದೊಡ್ಡಶೇಷವಾಹನ

**17-03-2019 ಭಾನುವಾರ**
ಹಗಲು: ತಿರುಚ್ಚಿ ಉತ್ಸವ
ರಾತ್ರಿ: ಗಜವಾಹನ

**18-03-2019 ಸೋಮವಾರ**
ಹಗಲು: ತಿರುಚ್ಚಿ ಉತ್ಸವ
ಸಾಯಂಕಾಲ: ಸರ್ವಭೂಪಾಲವಾಹನ
ರಾತ್ರಿ: ಗರುಡವಾಹನ

**19-03-2019 ಮಂಗಳವಾರ**
ಹಗಲು: ರಥೋತ್ಸವ
ರಾತ್ರಿ: ಧೂಳಿ ಉತ್ಸವ

**20-03-2019 ಬುಧವಾರ**
ಹಗಲು: ಸೂರ್ಯಪ್ರಭವಾಹನ
ರಾತ್ರಿ: ಚಂದ್ರಪ್ರಭವಾಹನ, ಅಶ್ವವಾಹನ

**21-03-2019 ಗುರುವಾರ**
ಹಗಲು: ವಸಂತೋತ್ಸವ, ಚಕ್ರಸ್ನಾನ
ರಾತ್ರಿ: ಧ್ವಜಾವರೋಹಣ







ಅನಾಶ್ರಿತಃ ಕರ್ಮಫಲಂ ಕಾರ್ಯಂ ಕರ್ಮ ಕರೋತಿ ಯಃ ।
ಸ ಸಂನ್ಯಾಸೀ ಚ ಯೋಗೀ ಚ ನ ನಿರಗ್ನಿರ್ನ ಚಾಕ್ರಿಯಃ ॥

- (ಶ್ರೀ ಮದ್ಭಗವದ್ಗೀತೆ ಅಧ್ಯಾಯ - 6, ಶ್ಲೋಕ -1)

ಕರ್ಮದ ಫಲಕ್ಕಾಗಿ ಹಂಬಲಿಸದೆ, ಕರ್ತವ್ಯವೆಂದು ಕರ್ಮವನ್ನು ಮಾಡುವವನೇ ನಿಜವಾದ ಸನ್ಯಾಸಿ ಮತ್ತು ಕರ್ಮಯೋಗಿ. ಹೊರತು ಸುಮ್ಮನೆ ಅಗ್ನಿ ಹೋತ್ರ ಮೊದಲಾದ ಕರ್ಮವನ್ನು ಬಿಟ್ಟವನೂ ಯಾವ ಸತ್ಕರ್ಮಗಳನೂ ಮಾಡದವನೂ ಅಲ್ಲ.



ಮುರಳೀಯ ನಾದವ ಕೇಳಿ ।
ಬನ್ನಿರಿ ಮಧುರಾನಾಥನು ಮುರಳಿಯನೂದಲು ॥
ಸುರಿವುದಾನಂದಜಲ ನಯನದಲಿ ಸುರಿವುದಾನಂದ ಜಲ
ಕಂಗೊಳಿಸುವ ಬೆಳದಿಂಗಳ ಸೊಬಗಿಲಿ ।
ತಂಗಾಳಿಯ ಸುಖದಿ ಶ್ರೀ ರಂಗನ
ಶಾಮಲಾಂಗನು ತನ್ನ ಕೋಮಲ ಕರದಲಿ॥
ಆ ಮುರಳಿಯ ಪಿಡಿಯೆ ಹೃದಯದಲಿ ಪ್ರೇಮವು ತುಂಬುವುದು
ಪಂಚ ಬಾಣದ ಪಿತ ಮುರಳಿಯ ಮಧುರಸ ॥
ಪಂಚಲೆಮಗೆ ರೋಮಾಂಚವಾಗುವುದು
ರಜನೀಕಾಂತನ ಕುಂದಲಿ ಜನಿಸಿ ॥ ವ್ರಜಜನಗಳಿಗಧಿಕ ಪ್ರಸನ್ನನ

- ಶ್ರೀ ವಿದ್ಯಾ ಪ್ರಸನ್ನ ತೀರ್ಥರು

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ಅಹಮಸ್ಮ್ಯ ಪರಾಧಚಕ್ರವರ್ತೀ ಕರುಣೇ ತ್ವಂ ಚ ಗುಣೇಷು ಸಾರ್ವಭೌಮಿ ।
ವಿದುಷೀ ಸ್ಥಿತಿಮಿದೃಶೀಂ ಸ್ವಯಂ ಮಾಂ ವೃಷಶೈಲೇಶ್ವರ ಪಾದಸಾತ್ಕುರು ತ್ವಮ್ ॥೩೦॥

ಓ ದಯೆಯೇ, ನಾನು ಅಪರಾಧಗಳಿಗೆಲ್ಲ ಚಕ್ರವರ್ತಿ. ನೀನಾದರೋ ಭಗವಂತನ ಗುಣಗಳಿಗೆಲ್ಲ ಚಕ್ರವರ್ತಿನಿ. ನನ್ನ ಆಳ್ವಿಕೆಗೆ ಒಳಪಟ್ಟ ಪಾಪಗಳು ಹೇಗೆ ಅಸಂಖ್ಯಾತವಾದವೋ ಹಾಗೆಯೇ ನಿನ್ನ ಆಳ್ವಿಕೆಗೆ ಒಳಪಟ್ಟ ಭಗವಂತನ ಗುಣಗಳೂ ಅಸಂಖ್ಯಾತವಾದವು. ಯಾವುದಾದರೊಂದು ದೇಶಕ್ಕೆ ಸ್ವತಂತ್ರರಾಗಿ ಇಬ್ಬರು ಚಕ್ರವರ್ತಿಗಳು ಇರುವುದು ಆಪತ್ತಿಗವಕಾಶ ಕೊಟ್ಟಂತೆ. ಆದ್ದರಿಂದ, ನಮ್ಮಿಬ್ಬರ ಬಲಾಬಲಗಳನ್ನು ಸ್ವತಃ ತಿಳಿದುಕೊಂಡಿರುವ ನೀನು ಸಾರ್ವಭೌಮಿಯಾಗಿರುವುದರಿಂದ ನಿನ್ನ ಸ್ಥಿತಿಯನ್ನು ಬಯಸುವ ನನ್ನನ್ನು ಜಯಿಸಿ - ಅಂದರೆ - ನನ್ನ ಪಾಪಗಳು ಫಲವನ್ನು ಕೊಡಲಾರದಂತೆ ಮಾಡಿ, ನಿನ್ನ ಪತಿಯಾದ ತಿರುಮಲೆಯರಸನ ತಿರುವಡಿಗಳಲ್ಲಿ ನನ್ನನ್ನು ಕೊಂಡು ಸೇರಿಸಬೇಕು. ಇದೇ ನಾನು ಕೋರುವ ಫಲ.

ಅತ್ಯಂತ ಸಮರ್ಥಳಾದ ಓರ್ವಸಾರ್ವಭೌಮಿಯು (ಚಕ್ರವರ್ತಿ ಪತ್ನಿಯು) ತನ್ನ ಪತಿಗೆ ವಿರೋಧಿಯಾದ ರಾಜನನ್ನು ಜಯಿಸಿ. ಅವನನ್ನು ತನ್ನ ಪತಿಯ ಪಾದಗಳಲ್ಲಿ ತಂದು ಹೇಗೆ ಕೆಡಹುವಳೋ ಹಾಗೆಯೇ ದಯಾದೇವಿ ಕೂಡ ಮಾಡಬೇಕೆಂಬುದೇ ಇಲ್ಲಿನ ಪ್ರಾರ್ಥನೆ.

ಸಾರ್ವಭೌಮಿಯಾದವಳು ಬಲವಿಲ್ಲದ ಒಬ್ಬ ಸಣ್ಣ ರಾಜನನ್ನು ಗೆದ್ದರೆ ಯಾವ ಹಿರಿಮೆಯೂ ಇಲ್ಲ. ತನಗೆ ಸಮಬಲನಾದ ಒಬ್ಬ ದೊಡ್ಡ ಚಕ್ರವರ್ತಿಯನ್ನು ಗೆದ್ದರೆ ಆಗ ಹಿರಿಮೆ. ಆದರಿಂದಲೇ ಕವಿಯು ಇಲ್ಲಿ ತಮ್ಮನ್ನು ಅಪರಾಧ ಚಕ್ರವರ್ತಿಯನ್ನಾಗಿ ಹೇಳಿರುವುದು. "ಅಪರಾಧ ಚಕ್ರವರ್ತೀ" ಎಂಬ ಪದಕೆ ಮೂರು ವಿಧವಾದ ಅರ್ಥವನ್ನು ಹೇಳಬಹುದು. ಅಪರಾಧವೆಂಬ ಚಕ್ರವನ್ನು ತಿರುಗಿಸುವವನೆಂದೂ, ಅಪರಾಧಗಳ ಸಮೂಹಗಳ ಮಧ್ಯದಲ್ಲಿ ಇರುವವರೆಂದೂ, ಅಪರಾಧಗಳಿಗೆ ರಾಜನೆಂದೂ ಹೇಳಬಹುದು. ದಯಾದೇವಿಯೂ ಕೂಡ ತಾನು ಮುಂದೆ ನುಗ್ಗಿ ತನಗೆ ಪರಿಕರವಾದ ಭಗವಂತನ ಇತರ ಗುಣಗಳನ್ನು ಸಹಕರಿಸಿಕೊಂಡು ಅಪರಾಧಿಯನ್ನು ಜಯಿಸುವಳು. ಅಂದರೆ, ಆ ಪಾಪಗಳ ಫಲವಾದ ದಂಡನೆಯನ್ನು ತಪ್ಪಿಸಿ, ಅವನನ್ನು ಕಾಪಾಡುತ್ತಾಳೆ. ಜಯಿಸಲ್ಪಟ್ಟವನನ್ನು ತನ್ನ ನೆಲೆಗೆ ಕರೆದುಕೊಂಡು ಹೋಗುವಂತೆ ಅವನನ್ನು ತನ್ನ ನೆಲೆಯಾದ ತಿರುಮಲೆಗೆ ಕರೆದುಕೊಂಡು ಹೋಗುವಳು. "ವೃಷಶೈಲೇಶ್ವರಪಾದಸಾತ್ಕುರು" ಎಂಬ ಪದದಿಂದ ಮುಂದಿನ ದಶಕದಲ್ಲಿ ಪ್ರಾರ್ಥಿಸಲ್ಪಡುವ ತಿರುಮಲೆಯ ತಪ್ಪಲಿನ ವಾಸವನ್ನು ಆಚಾರ್ಯರು ಇಲ್ಲಿ ಸೂಚಿಸಿರುತ್ತಾರೆ.

ಇಲ್ಲಿ ಈಶ್ವರನಿಗೆ ಪ್ರತಿಪಕ್ಷಿಯಾದ ಅಪರಾಧಿಯನ್ನು ಜಯಿಸುವುದೂ, ಜೀವನಿಗೆ ಸರ್ವೇಶ್ವರನ ತಿರುವಡಿಗಳನ್ನು ಆಶ್ರಯಿಸುವುದೂ ಲಾಭವು.



ಮೂರನೆಯ ದಶಕವು ಮುಗಿದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಸಂಪುಟ - 49 ಸಂಚಿಕೆ -10

ಶ್ರೀ ವಿಳಂಬಿನಾಮ ಸಂವತ್ಸರ
ಮಾಘ - ಫಾಲ್ಗುಣ ಮಾಸ
ಸಂಚಿಕೆ

## ಮಾರ್ಚ್ 2019






## ವಿಷಯಸೂಚಿಕೆ


ಸಂಪಾದಕೀಯ 6

ಹಸಿರುತೋರಣ

ಸಪ್ತಗಿರಿ ನಂದನವನದಲ್ಲಿ ಮಹಾಶಿವರಾತ್ರಿ 7
- ಕೆ. ನರಸಿಂಹಮೂರ್ತಿ

ಹೋಳಿರೇ ಹೋಳಿ 12
- ಶ್ರೀಮತಿ.ಸುಮಚಂದ್ರಶೇಖರ್

ಶ್ರೀಮಾತಾ ಲಲಿತಾಂಬಿಕಾಯೈ ನಮಃ 17
- ಬಿ. ಆರ್. ಶ್ರೀಕಂಠಯ್ಯ

ಆರೋಗ್ಯ ದಿವ್ಯಾಮೃತ ತ್ರಿಫಲ 23
- ಶ್ರೀಮತಿ

ಕೇನೋಪನಿಷತ್ 25
- ಶ್ರೀಮತಿ. ಎ.ಗೀತಾ ವೀರರಾಘವನ್

ಕೈಲಾಸ ವಾಸ ಗೌರೀಶ ಈಶ.... 31
- ಪ್ರಣವ

ಗುರುಸಾರ್ವಭೌಮರು 35
- ಡಾ|| ಗುರುರಾಜ ಪೋಲೀಶೆಟ್ಟಿಹಳ್ಳಿ

ಬುದ್ಧಿ ನಾಶದಿಂದ ಸರ್ವನಾಶ 37
- ಡಿ.ಎಸ್.ಭೂಮಿಕ

ಸು-ಭದ್ರಾ 39
- ಶ್ರೀಮತಿ.ಎಸ್.ಕಲ್ಯಾಣಿ

ವೈಕುಂಠ ದ್ವಾರಪಾಲಕರಿಗೆ ಶಾಪ 41
- ಡಿ.ಎಸ್.ಬದ್ರಿನಾಥ್

ಭಾವಿಸಮೀರ ಶ್ರೀ ವಾದಿರಾಜರು 44
- ಶ್ರೀಮತಿ. ಕೆ.ವಿ.ಪದ್ಮಾವತಿ

ತಿರುಪತಿ ಶ್ರೀವೆಂಕಟೇಶ್ವರ 49
- ದಿ||ಬಿ.ಎನ್.ಶ್ರೀನಿವಾಸನ್

ತಲಿಗೊಂಡ ಶ್ರೀಲಕ್ಷ್ಮೀ ನರಸಿಂಹಸ್ವಾಮಿ 51
- ಶ್ರೀಮತಿ.ಎಸ್.ಸುರೇಖ


ಮುಖಚಿತ್ರ - ಶ್ರೀ ವೇಂಕಟೇಶ್ವರ ಸ್ವಾಮಿಯವರ ತೆಪ್ಪೋತ್ಸವ ,ತಿರುಮಲೆ
ಹಿಂಬದಿಚಿತ್ರ - ಶ್ರೀ ಲಕ್ಷ್ಮೀ ಅಮ್ಮನವರು


**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್ ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಡಾ||ಕೆ.ರಾಧಾರಮಣ ಎಮ್.ಎ.ಎಮ್.ಫಿಲ್.ಪಿಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ ಆರ್.ವಿ. ವಿಜಯಕುಮಾರ್, ಐ.ಎ.ಐ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.
ಶ್ರೀ ಪಿ.ಶಿವಪ್ರಸಾದ್ ತಿ.ತಿ.ದೇ., ತಿರುಪತಿ.

**ವಿಶ್ರಾಂತಿ ಚಿತ್ರಕಾರರು**

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
**www.tirumala.org** ಮೂಲಕ
ವೀಕ್ಷಿಸಬಹುದು.



ಸಪ್ತಗಿರಿಯಲ್ಲಿ ಪ್ರಕಟವಾಗುವ
ಲೇಖನಗಳಲ್ಲಿನ ಅಭಿಪ್ರಾಯಗಳು
ಸಂಪಾದಕವರ್ಗದ, ಪತ್ರಿಕೆಯ,
ಅಭಿಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ



ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org

# ಸಂಪಾದಕೀಯ

## ಶರಣು ಶಂಕರ ಶಂಭೋ.....

"ದ್ರಾರಿದ್ರಯ ದುಃಖ ದಹನಾಯ ನಮಃ ಶಿವಾಯ"

ಪ್ರಪಂಚದಲ್ಲಿನ ಮನುಷ್ಯರ ಜೀವನದ ವಿಧಿ ವಿಧಾನಗಳನ್ನು ಪರಿಶೀಲಿಸಿದ ಮಹಾಜ್ಞಾನಿಗಳು ಪರಮಾತ್ಮ ಒಬ್ಬನೇ ಎಂದು, ಸೃಷ್ಟಿ, ಸ್ಥಿತಿ, ಲಯಗಳನ್ನು ನಿರ್ವಹಿಸುವವರು . ಬ್ರಹ್ಮ, ವಿಷ್ಣು, ಮಹೇಶ್ವರರೆಂದು ಹಿಂದುಗಳ ನಂಬಿಕೆ. ಅನಂತವಾದ ಈ ವಿಶ್ವಕ್ಕೆ ಆಧಾರವಾದ ಪರಮಾತ್ಮ ಪರಿಸ್ಥಿತಿಯ ಅನುಸಾರವಾಗಿ ಹಲವು ರೂಪಗಳನ್ನು ತಾಳುತ್ತಾನೆಂದು , ವಿವಿಧ ಆಕೃತಿಗಳಾಗಿ ಪೂಜಿಸುವುದು ಭಾರತೀಯರಾದ ನಮಗೆ ಅನಾದಿಕಾಲದಿಂದಲೂ ಬರುತ್ತಿರುವ ಸಂಪ್ರದಾಯ, ಆಚಾರ. ಶ್ರೀ ಮನ್ನಾರಾಯಣನೇ ಪರಿಸ್ಥಿತಿಗೆ ತಕ್ಕಂತೆ ಅನೇಕ ಅವತಾರಗಳನ್ನು ತಳೆಯುತ್ತಾನೆಂದೂ, ವಿಶ್ವವೆಲ್ಲಾ ವ್ಯಾಪ್ತನಾಗಿರುತ್ತಾನೆಂದು ನಮ್ಮೆಲ್ಲರ ಧೃಡವಾದ ವಿಶ್ವಾಸ.

ಶಿವನನ್ನು ಲಯಕಾರನೆಂದು ಹೇಳಿದರೂ ಶಿವತತ್ತ್ವ ನಿರಾಡಂಬರತೆಗೂ, ಆಧ್ಯಾತ್ಮಿಕ ಸುಸಂಪನ್ನತೆಗೂ ಉದಾಹರಣೆ. ಆತ ಅಭಯಪ್ರದನೆಂಬ ವಿಷಯ ಅಕ್ಷರಶಃ ಸತ್ಯ, ನಿಷ್ಕಲ್ಮಷ ಭಕ್ತಿಯಿಂದ ಯಾರು ಯಾವ ವರವನ್ನು ಕೇಳಿದರೂ ಹಿಂದೂ ಮುಂದೂ ಯೋಚಿಸದೇ ಆ ವರವನ್ನು ನೀಡುವವನಾದ್ದರಿಂದ ಅವನನ್ನು "ಭೋಳಾಶಂಕರ" ನೆನ್ನುತ್ತೇವೆ. ಕೇವಲ ಜಲಾಭಿಷೇಕದಿಂದಲೇ ತೃಪ್ತಿಗೊಂಡು ಭಕ್ತರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ.ಮನಃ ಪೂರ್ವಕವಾಗಿ ಅವನನ್ನು ನೆನೆದು ಪೂಜಿಸಿದರೆ ಸಾಕು,ಮೃತ್ಯುಂಜಯತ್ವವನ್ನೂ ಕರುಣಿಸುತ್ತಾನೆ.

ವೇದಶಾಸ್ತ್ರಜ್ಞರು ಶಿವನನ್ನು ಲಯಾಧಿಪತಿಯಾಗಿ ಏಕೆ ಕರೆದರೆಂದು ಪಾಮರರಾದ ನಮಗೆ ಧರ್ಮಸಂದೇಹ ಉಂಟಾಗುತ್ತದೆ. ಹುಟ್ಟಿದಾಗಿನಿಂದಲೂ ಕಾಮ, ಕ್ರೋಧ, ಲೋಭಾದಿ ಅರಿಷಡ್ವರ್ಗಗಳ ದುರ್ಗಣ, ದುರ್ವ್ಯಸನಗಳಲ್ಲಿ ಸಿಲುಕಿ ಒದ್ದಾಡುವ ಮನುಜರಲ್ಲಿ ಪಾಪಗಳನ್ನು, ಕೆಟ್ಟಗುಣಗಳನ್ನು ಆತ ಲಯಗೊಳಿಸುತ್ತಾನೆ. ಅದಕ್ಕೆ ಆತ "ವಿಷಕಂಠ" ನಾಗಿ ಅಮೃತವನ್ನು ನೀಡಿದ್ದರೆ ಅರ್ಥ-ಪರಮಾರ್ಥ.

ಮಸಣದಲ್ಲೇ ನಿವಸಿಸುತ್ತಾ ಗಜಚರ್ಮವನ್ನು ಧರಿಸಿ, ಆದಿಭಿಕ್ಷುವಾಗಿ ಆತ ಕಂಡು ಬರುವುದರಲ್ಲಿ ಒಂದು ಅದ್ಭುತವಾದ ಸಂದೇಶವಡಗಿದೆ. ಪ್ರತಿಯೊಬ್ಬ ಮನುಷ್ಯನೂ "ಭಿಕ್ಷುಕನೇ" ಪ್ರಾಪಂಚಿಕ ಸುಖಗಳು, ವ್ಯವಹಾರಗಳು, ಸಂಪಾದಿಸುವ ಹಂತವನ್ನು ದಾಟಿದರೆ ಎಲ್ಲರೂ ಆ ಪರಮೇಶ್ವರನನ್ನು "ಮೃತ್ಯುಂಜಯತ್ವದ ಭಿಕ್ಷೆಯನ್ನು ಬೇಡುತ್ತಾರೆ. ಅದೇ "ಮೋಕ್ಷ". ಬದುಕು ಆಡಂಬರ ರಹಿತವಾಗಿ ಸಾಗಬೇಕೆಂಬುದರ ಸಂಕೇತ ಗಜಚರ್ಮಧಾರಣೆ.

ಹಬ್ಬ ಹರಿದಿನಗಳಲ್ಲಿ ಭಗವಂತನನ್ನು ಪೂಜಿಸುವುದು, ಆಚಾರ ಸಂಪ್ರದಾಯಗಳನ್ನು ಪಾಲಿಸುವುದು ಸರಿಯಾದರೂ ಅದರ ಹಿಂದೆ ಅಡಗಿರುವ ಭಗವಂತನ ಪವಿತ್ರವಾದ ಸಂದೇಶವನ್ನು ಅರ್ಥಮಾಡಿಕೊಂಡು ಅದಕ್ಕೆ ಸರಿಯಾಗಿ ಬದುಕನ್ನು ತಿದ್ದಿ ಕೊಳ್ಳುವುದು ಮತ್ತಷ್ಟು ಅಭಿನಂದನೀಯವಾದುದು. ಆ ಹಂತಕ್ಕೆ ಸೇರಿದರೆ ಮನುಷ್ಯ "ಮಹರ್ಷಿ"ಯಾಗುತ್ತಾನೆ. ಪಂಚಮುಖನಾದರೂ,ಪರಮಶಿವನಾದರೂ, ಪಂಕಜನಾಭನಾದರೂ ಮನುಜರಿಂದ ಇದನ್ನೇ ಬಯಸುತ್ತಾರೆ.

ಮಾರ್ಚ್ ೪, ಮಹಾಶಿವರಾತ್ರಿ. ಆ ಪುಣ್ಯ ದಿನದಂದು ಪರಮಶಿವನಿಗೆ ಅಭಿಷೇಕ ಮಾಡುವುದರೊಂದಿಗೆ ಆತನ ನಾಮ ಸ್ಮರಣೆ ಎಂಬ ಅಭಿಷೇಕದೊಂದಿಗೆ ನಮ್ಮನ್ನು ನಾವು ಪವಿತ್ರರನ್ನಾಗಿಸಿಕೊಳ್ಳುತ್ತೇವೆ. ಇಲ್ಲಿಯವರೆಗೂ ನಮಗೆ ತಿಳಿದೋ, ತಿಳಿಯದೆಯೋ ಮಾಡಿದ ಮಹಾಪಾಪಗಳನ್ನು, ಮನಸ್ಸಿಗೆ ಅಂಟಿಕೊಂಡಿರುವ ಮಾಲಿನ್ಯವನ್ನು ಪ್ರಕ್ಷಾಳನೆ ಮಾಡಿಕೊಂಡು ಆ ಮಹಾದೇವನಿಗೆ ಹತ್ತಿರವಾಗೋಣ.

ತಿರುಪತಿಯಲ್ಲಿನ ಶ್ರೀ ಕಪಿಲೇಶ್ವರಸ್ವಾಮಿ ದೇವಾಲಯದಲ್ಲಿ "ಮಹಾಶಿವರಾತ್ರಿಯ" ಉತ್ಸವಗಳು, ಶ್ರೀ ಕಪಿಲೇಶ್ವರಸ್ವಾಮಿಗೆ ಬ್ರಹ್ಮೋತ್ಸವಗಳು ತಿರುಮಲೆ ತಿರುಪತಿ ದೇವಸ್ಥಾನದವರು ಅತ್ಯಂತ ವೈಭವದಿಂದ ನಡೆಸುತ್ತಾರೆ. ವಿವಿಧ ವಾಹನಗಳಲ್ಲಿ ಬಂದು ಭಕ್ತರನ್ನೆಲ್ಲಾ ಅನುಗ್ರಹಿಸುತ್ತಾನೆ. ಮಹಾಶಿವರಾತ್ರಿಯ ದಿನದಂದು "ವಿಶೇಷ ಪೂಜೆ"ಗಳನ್ನು ನಡೆಸುತ್ತಾರೆ.

ಶ್ರೀ ಕಪಿಲೇಶ್ವರನನ್ನು ದರ್ಶಿಸಿಕೊಂಡು ನಮ್ಮಲ್ಲಿನ ಕಲ್ಮಷವನ್ನು ತೊಳೆದುಕೊಂಡು ಪುನೀತರಾಗೋಣ. ಆ ಪಶುಪತಿ ನಮ್ಮೊಳಗಿನ ಅಂಧಕಾರವೆಂಬ ಪಶುತ್ವವನ್ನು ಲಯಗೊಳಿಸಿ "ಜ್ಞಾನವನ್ನು ಪ್ರಸಾದಿಸಬೇಕೆಂದು ಬಯಸುತ್ತಾ ಆ ಮಹಾಶಿವನನ್ನು ಭಕ್ತಿ ಶ್ರದ್ಧೆಗಳಿಂದ ಸ್ಮರಿಸೋಣ....

"ತನ್ಮೈಮನಶ್ಶಿವ ಸಂಕಲ್ಪಮಸ್ತು"



# ಸಪ್ತಗಿರಿ ನಂದನವನದಲ್ಲಿ ಮಹಾ ಶಿವರಾತ್ರಿ

ತೆಲುಗು ಮೂಲ: ಜೆ. ಬಾಲಸುಬ್ರಹ್ಮಣ್ಯಂ

ಅನುವಾದ: ಕೆ. ನರಸಿಂಹಮೂರ್ತಿ

ವಾಸುದೇವ ಇತಿ ವಾಮ ದೇವ ಇ -
ತ್ಯಸ್ತಿ ಕಲ್ಪಕ ಮಹಿರುಹ ದ್ವಯಂ
ಯದ್ಯಹಿಮಾ 'ಸುಮ' ಭೇದ ಸಂಭವಃ
ನಾಸ್ತ್ಯಥಾಪಿ ಫಲಭೇದ ಸಂಭವಃ

**- ಅಪ್ಪಯ್ಯ ದೀಕ್ಷಿತರು**

ಏಳೇಳು ಲೋಕಗಳಲ್ಲಿ, ಅತ್ತ ಮೇಲಿನ ಲೋಕದವರೂ, ಇತ್ತ ಕೆಳ ಲೋಕದವರೂ ಅಸೂಯೆಪಡುವಂತಹ ಅದ್ಭುತವಾದ ಸುಂದರವಾದ ಲೋಕವೆಂದರೆ ಅದು ಭೂಲೋಕ! ಅವರೆಲ್ಲರ ಈರ್ಷ್ಯೆಗೆ, ಅಸೂಯೆಗೆ ಕಾರಣವಾದರೂ ಏನೋ ಎಂದರೆ.

ಅತ್ಯಂತ ರಮಣೀಯವಾದ,ಮಹಿಮಾನ್ವಿತವಾದ ಎರಡು ಕಲ್ಪವೃಕ್ಷಗಳು ಈ ಸುಂದರವಾದ ಭೂಲೋಕದಲ್ಲಿ ನೆಲೆಗೊಂಡಿರುವುದೇ ಇದಕ್ಕೆ ಮುಖ್ಯಕಾರಣ.

ಮೊದಲ ಕಲ್ಪವೃಕ್ಷದ ಹೆಸರು ವಾ 'ಸು' ದೇವ. ಎರಡನೇ ಕಲ್ಪವೃಕ್ಷದ ಹೆಸರೇ ವಾ'ಮ'ದೇವ! ಈ ದಿವ್ಯ ವೃಕ್ಷಗಳೆರಡೂ ಭಕ್ತರ ಕೋರಿಕೆಗಳನ್ನು ತೀರಿಸುವುದರಲ್ಲಿ ಒಂದರ ಮೇಲೊಂದರಂತೆ ಯಾವುದೇ ಹೊರತಾಗಲಾರವು.ನಿಜವಲ್ಲವೇ?ಪರಸ್ಪರ ಪ್ರತಿಸ್ಪರ್ಧಿಸುತ್ತಲೇ ಇರುತ್ತವೆ.ಈ ದಿವ್ಯವೃಕ್ಷಗಳಿಗೆರಡಕ್ಕೂ 'ಸುಮ' ಭೇದವಾಗಲೀ, ಫಲಭೇಧವಾಗಲೀ ಇಲ್ಲವೇ ಇಲ್ಲ. ಅಖಂಡವಾದ ಪುಣ್ಯ ಭಾರತಭೂಮಿಯಲ್ಲಿ ಸರ್ವತ್ರ ವ್ಯಾಪಿಸಿರುವ ಈ ಪಾರಿಜಾತಗಳೆರಡೂ ಭಕ್ತರಿಗೆ ನಿರಂತರವಾಗಿ ಕೋರಿದ್ದನ್ನು ನೀಡುತ್ತಲೇ ಇರುತ್ತವೆ.

ಪ್ರಮುಖವಾಗಿ ಸಪ್ತಗಿರಿ ನಂದನವನದಲ್ಲಂತೂ ಸರೇಸರಿ!

ಮುಖ್ಯವಾದ ಇನ್ನೊಂದು ವಿಷಯವೇನೆಂದರೆ ವಾಸುದೇವ ಕಲ್ಯಾಣವು ಎಲ್ಲಿ ಜರುಗಿದರೂ ವಾಮದೇವನೇ ಮದುವೆಯ ಹಿರಿಯ, ಹಾಗೆಯೇ ವಾಮದೇವನ ಮದುವೆಗೆ ವಾಸುದೇವನೇ ಮುಖ್ಯಸ್ಥ ವಿಚಿತ್ರವಾಗಿದೆಯಲ್ಲವೇ!!

### ಶೇಷಾಚಲದಲ್ಲಿ 'ಮಹಾಶಿವರಾತ್ರಿ'

ಶೇಷಾಚಲದಲ್ಲಿ ನೆಲೆನಿಂತಿರುವ ವಾಸುದೇವನೆಂಬ ಕಲ್ಪವೃಕ್ಷ ನಾಗಾಭರಣನಾದ ಶ್ರೀನಿವಾಸನೇ! ಅಲ್ಲದೇ ಈ ಕ್ಷೇತ್ರದಲ್ಲಿ ಪಾಲಕನಾದ ವಾಮದೇವನೆಂಬ ಕಲ್ಪವೃಕ್ಷವಿದೆ. ಅದೇ 'ರುದ್ರ' ನೆಂದು ಕರೆಯಲ್ಪಡುವ ಸಾಕ್ಷಾತ್ ಪರಮ ಶಿವನು! ನಿರಂತರವಾಗಿ ಭಗವಂತನ ಆಲಯವನ್ನು ರಕ್ಷಿಸುವ ರುದ್ರನು ನಿತ್ಯವೂ ತನ್ನ ಆಲಯದಲ್ಲಿ ಪೂಜೆಗಳನ್ನು ಸ್ವೀಕರಿಸುವುದೊಂದೇ ಅಲ್ಲದೇ ತಿರುಮಲೆ ಕ್ಷೇತ್ರದಲ್ಲಿ ಪ್ರಮುಖವಾಗಿ ಮಹಾಶಿವರಾತ್ರಿ ಪರ್ವ ದಿನದಂದು ಏಕಾದಶರುದ್ರ ನಮಕ-ಚಮಕಾದಿ ವೇದ ಮಂತ್ರಗಳಿಂದ ಅಭಿಷೇಕಗಳನ್ನು ಸ್ವೀಕರಿಸುತ್ತಾನೆ. ಇದು ನಿಜವೇ ಎಂದರೆ ಅಕ್ಷರಹ ಸತ್ಯಕ್ಕೆ ಸತ್ಯ.

ಮಹಾಶಿವರಾತ್ರಿ ಹಬ್ಬದಂದು ಬೆಳಗ್ಗೆ 9.00 ಗಂಟೆಗೆ ತಿರುಮಲೆ ಶ್ರೀ ವೇಂಟೇಶ್ವರ ಸ್ವಾಮಿಯ ಆಲಯದಿಂದ ಅರ್ಚಕರು, ಆಲಯದ ಅಧಿಕಾರಿಗಳು ಮಂಗಳವಾದ್ಯಗಳೊಂದಿಗೆ

ಮೆರವಣಿಗೆಯಲ್ಲಿ ಹೊರಟು ಗೋಗರ್ಭತೀರ್ಥ (ಪಾಂಡವ ತೀರ್ಥ) ದಲ್ಲಿರುವ ಕ್ಷೇತ್ರಪಾಲಕರಾದ ರುದ್ರನನ್ನು ಏಕಾದಶ ನಮಕ ಚಮಕಗಳಿಂದ ಮಂತ್ರಗಳಿಂದ ರುದ್ರಾಭಿಷೇಕ, ನಿವೇದನೆಗಳನ್ನು ನೆರವೇರಿಸುತ್ತಾರೆ. ಶ್ರೀ ವೇಂಕಟೇಶ್ವರನ ಸನ್ನಿಧಾನದಲ್ಲಿ ಜರಗುವ ಮಹಾಶಿವರಾತ್ರಿ ವೇದಿಕೆಯಲ್ಲಿ ಅನೇಕ ಮಂದಿ ಪಾಲ್ಗೊಂಡು ದರ್ಶನ ಪಡೆದುಕೊಳ್ಳುವುದು ವಿಶೇಷ.

**ಶೇಷಾಚಲದ ಮೂಲದಲ್ಲಿ ಮಹಾಶಿವರಾತ್ರಿ**

ತಿರುಮಲೇಶನು "ಉಪತ್ಯಕಾಪ್ರದೇಶಸ್ಥ ಶಿವಧ್ಯಾತ ಮೂರ್ತಯೇ ನಮಃ"ಎಂಬ ಹೆಸರಿನಿಂದ ಅರ್ಚಿಸಲ್ಪಡುತ್ತಿದ್ದಾನೆ. ಅಂದರೆ ಪರ್ವತದ ಕೆಳಭಾಗದಲ್ಲಿರುವ ಶಿವನಿಂದ ಧ್ಯಾನಿಸಲ್ಪಡುವವನು ಎಂದು ಅರ್ಥ. ತಿರುಮಲೆ ಪರ್ವತದ ಕೆಳಗಿರುವ ಶ್ರೀಕಪಿಲೇಶ್ವರನಿಂದ ಸ್ತುತಿಸಲ್ಪಡುವವನು ಎಂದರ್ಥ.

ಪಾತಾಳಲೋಕದಲ್ಲಿ ಕಪಿಲಮಹರ್ಷಿ ಪೂಜಿಸಿದ ಶಿವ ಲಿಂಗವು ಬೆಳೆಯುತ್ತಾ ವೇಂಕಟಾಚಲ ಪರ್ವತಾ ಮೂಲದಲ್ಲಿ ಸ್ವಯಂಭೂ ಕ್ಷೇತ್ರವಾದ ಶ್ರೀ ಕಾಮಾಕ್ಷಿ ಶ್ರೀ ಕಪಿಲೇಶ್ವರ ಗುಹಾಲಯದಲ್ಲಿ ನೆಲೆಸಿದೆ. ಶಿವಲಿಂಗದೊಂದಿಗೆ ಪಾತಾಳದ ಭೋಗವತಿಗಂಗೆ ಹೊರಚಿಮ್ಮಿದ್ದಾಳೆ. ಅದೇ "ಕಪಿಲತೀರ್ಥ" ವೆಂದು ಹೆಸರು ಪಡೆದಿದೆ. ಇದು ವೇಂಕಟಾಚಲದಿಂದ ಧುಮ್ಮಿಕ್ಕುವ ತೀರ್ಥಜಲಗಳು ಸಮ್ಮೇಳೈಸುವ ಧಾರೆಯಾಗಿ ಸಕಲ ಪಾಪಹಾರಿಣಿಯೆಂಬ ಪ್ರಸಿದ್ಧಿ ಹೊಂದಿದೆ. ತಿರುಮಲೆಗೆ ಬರುವ ಯಾತ್ರಿಕರು ಮೊದಲು ಬ್ರಹ್ಮ ಗೋವಾಗಿ, ವಿಷ್ಣುವು ಗೋಪಾಲಕನಾಗಿ ಸ್ವತಃ ಹರಿಯೇ ಕ್ಷೀರಾಭಿಷೇಕ ಮಾಡಿದ ಈ ಶ್ರೀ ಕಪಿಲೇಶ್ವರ ಶಿವಲಿಂಗವನ್ನು ಸಂದರ್ಶಿಸಬೇಕೆಂದು ಕ್ಷೇತ್ರ ನಿಯಮವೂ ಇದೆ. ತಿರುಮಲೆ ತಿರುಪತಿ ದೇವಸ್ಥಾನದ ಈ ಶಿವಾಲಯವು ನಿತ್ಯ ಅಭಿಷೇಕ, ಅರ್ಚನೆ, ನಿವೇದನೆಗಳಿಂದ ಭಕ್ತಿ ಜಂಗುಳಿಯನ್ನು ಹೊಂದಿರುವುದೊಂದೇ ಅಲ್ಲದೇ ಪ್ರತ್ಯೇಕವಾಗಿ ಮಹಾಶಿವರಾತಿಯಂದು ಶ್ರೀಕಪಿಲೇಶ್ವರನಿಗೆ ಅದ್ದೂರಿಯಾಗಿ ಬ್ರಹ್ಮೋತ್ಸವಗಳು ಆಚರಿಸಲ್ಪಡುತ್ತವೆ. ಮಹಾಶಿವರಾತ್ರಿಯಂದು ರಾತ್ರಿ ನಡೆಯುವ ಬೆಳ್ಳಿ ನಂದೀಶ್ವರ ವೈಭವ, ಮರುದಿನದ ಕಾಮಾಕ್ಷಿ - ಶ್ರೀಕಪಿಲೇಶ್ವರರ ಕಲ್ಯಾಣೋತ್ಸವ ಸಡಗರವು ವರ್ಣಾನಾತೀತ!

ಶ್ರೀ ಕಪಿಲೇಶ್ವರನ ಅನುಗ್ರಹದಿಂದಲೇ ಪದ್ಮಾವತಿ - ಶ್ರೀನಿವಾಸರ ಕಲ್ಯಾಣವು ಏರ್ಪಟ್ಟಿತೆಂದು ವೇಂಕಟಾಚಲದ ಪುರಾಣೋಕ್ತಿ!

**ದಕ್ಷಿಣ ಕೈಲಾಸದಲ್ಲಿ "ಮಹಾಶಿವರಾತ್ರಿ"**

ತಸ್ಯ ದಕ್ಷಿಣಕೈಲಾಸನಾಮಕಂ ಸ್ಥಾನಮುತ್ತಮಮ್
'ಕಾಳಹಸ್ತಿ' ತಿ ವಿಖ್ಯಾತಂ ಶಿರೋದೇಶಃ ಪ್ರಕೀರ್ತಿತಂ
ವೇಂಕಟಾಚಲ ಮಹಾತ್ಯ್ಮ - ಬ್ರಹ್ಮಾಂಡಪುರಾಣಂ

ದಕ್ಷಿಣ ಕೈಲಾಸವೆಂಬ ಬಿರುದನ್ನು ಪಡೆದಿರುವ "ಶ್ರೀ ಕಾಳಹಸ್ತಿ" ಕ್ಷೇತ್ರ ಕೂಡಾ ಶೇಷಾಚಲ ಪರ್ವತದ ಶೀರೋಭಾಗ ಪ್ರಾಂತ್ಯದಲ್ಲಿ ನೆಲೆಗೊಂಡಿದೆ.

ಪಂಚಭೂತಲಿಂಗಗಳಲ್ಲಿ "ವಾಯುಲಿಂಗ" ವೆಂದು ಹೆಸರು ಪಡೆದಿರುವ ಇಲ್ಲಿನ ಈಶ್ವರನು ಶ್ರೀ ಎಂದರೆ ಜೇಡರ ಹುಳು, ಕಾಳ ಎಂದರೆ ಸರ್ಪ ಮತ್ತು ಹಸ್ತಿ ಎಂದರೆ ಆನೆ ಮುಂತಾದ ಜೀವಿಗಳಿಂದಲೂ ಸಹಾ ಅರ್ಚಿಸಲ್ಪಟ್ಟು ಅವುಗಳಿಗೆ ಮುಕ್ತಿಯನ್ನು ಕೊಟ್ಟಿದ್ದಾನೆ. ಅವುಗಳ ಹೆಸರಿನಿಂದಲೇ "ಶ್ರೀ ಕಾಳಹಸ್ತೀಶ್ವರ" ನೆಂಬ ಸಾರ್ಥಕ ನಾಮಧೇಯದಿಂದ ಸ್ವಯಂ ಪ್ರಕಟಗೊಂಡು ನೆಲೆಸಿರುವ ದಿವ್ಯಕ್ಷೇತ್ರವಿದು. ಇಲ್ಲಿನ ಪಾರ್ವತಿದೇವಿಯು 'ಜ್ಞಾನ ಪ್ರಸೂನಾಂಬಿಕೆ'ಯಾಗಿ ಭಕ್ತರಿಗೆ ಜ್ಞಾನವನ್ನು, ಇಷ್ಟಾರ್ಥಗಳನ್ನು ಪ್ರಸಾದಿಸುತ್ತಿದ್ದಾಳೆ. ಹಿಂದೆ ಕಣ್ಣಪ್ಪನೆಂಬ ಬೇಡರ ಭಕ್ತನೊಬ್ಬನು ಸತತವಾಗಿ ಶುಭ್ರ ಜಲದಿಂದ ಅಭಿಷೇಕಗೈದು, ಬೇಟೆಯಾಡಿದ ಮಾಂಸವನ್ನೆ ಶಿವನಿಗೆ ನಿವೇದಿಸಿದ್ದಾನೆ.ಆ ಭಕ್ತನನ್ನು ಪರೀಕ್ಷಿಸಿದ ಶಿವ ಆತನ ಎರಡೂ ಕಣ್ಣುಗಳನ್ನು ಸ್ವೀಕರಿಸಿ ಆ ಕುರುಡನಿಗೆ ಮೋಕ್ಷವನ್ನೇ ಅನುಗ್ರಹಿಸಿದ್ದಾನೆ. ಅಂದಿನಿಂದ ಭಕ್ತರು ಆತನನ್ನು "ಬೇಡರ ಕಣ್ಣಪ್ಪ" ನೆಂದೇ ಕರೆಯುತ್ತಾರೆ.

ಪಾರ್ವತಿದೇವಿಯ ಕೇಶರಾಶಿ ಸುಗಂಧಿತವಾಗಿದೆಯೆಂಬ ಪರಮೇಶ್ವರನ ವಾದವನ್ನೇ ಆಕ್ಷೇಪಿಸಿದ "ನತ್ಕೀರ" ನೆಂಬ ಕವಿ ಶಿವನ ಶಾಪದಿಂದ ಕುಷ್ಠರೋಗಿಯಾಗಿದ್ದಾನೆ. ತನ್ನ ಅಜ್ಞಾನವನ್ನು ಮನ್ನಿಸಬೇಕೆಂದು ಶರಣಾದ ನತ್ಕೀರನಿಗೆ ಶಿವನು ಕೈಲಾಸಕ್ಕೆ ಹೋಗೆಂದೂ, ಅಲ್ಲಿ ಶಾಪ ವಿಮೋಚನೆ



ಯಾಗುವುದೆಂದೂ ಶಿವನು ಆಜ್ಞಾಪಿಸಿದ್ದಾನೆ. ಸುಬ್ರಹ್ಮಣ್ಯ ಸ್ವಾಮಿಯ ಮಾರ್ಗದರ್ಶನದಂತೆ ನತ್ಕೀರನು ಕೈಲಾಸ ಸದೃಶ ವಾದ ಶ್ರೀಕಾಳಹಸ್ತಿ ಕ್ಷೇತ್ರವನ್ನು ಸಂದರ್ಶಿಸಿ ಶಾಪ ವಿಮೋಚನೆಗೊಂಡಿದ್ದಾನೆ.

ಸತತವಾಗಿ ಬಗೆಬಗೆಯ ಸೇವೆಗಳಿಂದ, ರಾಹು - ಕೇತು ದೋಷಗಳ ಪೂಜೆಯಿಂದ, ಕಲ್ಯಾಣೋತ್ಸವಗಳಿಂದ ವಿರಾಜಿಸುತ್ತಿರುವ ಶ್ರೀ ಕಾಳಹಸ್ತಿ ಕ್ಷೇತ್ರವನ್ನು ನಿತ್ಯವೂ ಸಾವಿರಾರು ಜನ ಸಂದರ್ಶಿಸುತ್ತಾರೆ. ವಿಶೇಷವಾಗಿ ಮಹಾಶಿವರಾತ್ರಿ ಸಂದರ್ಭದಲ್ಲಿ ತಿರುಮಲೆ ಶ್ರೀ ವೇಂಕಟೇಶ್ವರಸ್ವಾಮಿ ದೇವಸ್ಥಾನದವರು ಜ್ಞಾನಪ್ರಸೂನಾಂಬಿಕೆ ಮತ್ತು ಶ್ರೀ ಕಾಳ ಹಸ್ತೀಶ್ವರನಿಗೆ ವಸ್ತ್ರಗಳನ್ನು ಸಮರ್ಪಿಸುತ್ತಾರೆ. ಸ್ವರ್ಣಮುಖಿ ನದಿ ತೀರದಲ್ಲಿ ದಕ್ಷಿಣಕಾಶಿಯಾಗಿ ನೆಲೆಗೊಂಡಿರುವ ಶ್ರೀಕಾಳ ಹಸ್ತೀಶ್ವರ ಕ್ಷೇತ್ರವೆಂಬ ಬಿರುದು ಶ್ರೀ ವೇಂಕಟಾಚಲ ಕ್ಷೇತ್ರದಲ್ಲಿ ಕಂಡು ಬರುವ ಕಾರಣದಿಂದಾಗಿ ತಿರುಮಲೆಗಿಂತಲೂ ಈ ಕ್ಷೇತ್ರ ಪ್ರಾಚೀನವಾದುದೆಂದು ಸಾಬೀತು ಗೊಳಿಸಬಹುದು.

## ಭೂಕೈಲಾಸದಲ್ಲಿ "ಮಹಾಶಿವರಾತ್ರಿ"

'ಪ್ರಸಿದ್ಧಃ ಪುಚ್ಛದೇಶೋಯಂ 'ಶ್ರೀಶೈಲ' ಇತಿ ವಿಶ್ರುತಃ
ಶ್ರೀಶೈಲಸ್ಯ ಪ್ರದೇಶೀಸ್ಮಿನ್ ನೀಲಕಂಠಾಶ್ರಮೇ ಶುಭೇ"
- ವೇಂಕಟಾಚಲ ಮಹಾತ್ಮೆ - ಬ್ರಹ್ಮಾಂಡಪುರಾಣಂ

ಒಂದು ಯೋಜನದಷ್ಟು ವಿಸ್ತೀರ್ಣದಿಂದ, ಮೂವತ್ತು ಯೋಜನೆಗಳಷ್ಟು ಉದ್ದವಾಗಿ ವ್ಯಾಪಿಸಿರುವ ಸರ್ಪಾಕಾರದ ಬೆಟ್ಟ ಈ ಶೇಷಾಚಲ ಶಿರೋಭಾಗದಲ್ಲಿ ಶ್ರೀ ವೇಂಕಟೇಶನೂ, ಬಾಲದ ಭಾಗದಲ್ಲಿ ಶ್ರೀ ಶೈಲದ ಮಲ್ಲಿಕಾರ್ಜುನನು ನೆಲೆಸಿರುವರೆಂದು ಪ್ರತೀತಿ.

ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಎರಡನೇಯದಾದ ಮಲ್ಲಿಕಾರ್ಜುನ ಮಹಾಲಿಂಗ ರೂಪನಾಗಿ ಪರಮೇಶ್ವರನೂ ಹಾಗೆಯೇ ಅಷ್ಟಾದಶ ಶಕ್ತಿಪೀಠಗಳಲ್ಲಿ ಭ್ರಾಮರಿಶಕ್ತಿ ರೂಪಿಣಿಯಾಗಿ ಪಾರ್ವತಿದೇವಿ ನೆಲೆಸಿರುವ ದಿವ್ಯಕ್ಷೇತ್ರ ಶ್ರೀಶೈಲ.

ಪರ್ವತನೆಂಬ ಭಕ್ತನ ಕೋರಿಕೆಯ ಮೇರೆಗೆ ಶ್ರೀಪರ್ವತವೆಂಬ ಹೆಸರಿನಿಂದ ಇಲ್ಲಿ ನೆಲೆಸಿರುವ ಲಿಂಗ ರೂಪಿ ಭೋಳಾಶಂಕರನು, ತದನಂತರ 'ಚಂದ್ರಾಮತಿ' ಯೆಂಬ ಭಕ್ತೆಯ ಕೋರಿಕೆಯಂತೆ ಆಕೆಯನ್ನು ಮಲ್ಲಿಗೆಯ ಹಾರವಾಗಿ ಧರಿಸಿ ಶ್ರೀಗಿರಿಮಲ್ಲಿಕಾರ್ಜುನನಾಗಿ ನೆಲೆಗೊಂಡಿದ್ದಾನೆ. ಹಾಗೆಯೇ ಪಾರ್ವತಿದೇವಿ ಕೈಲಾಸದಿಂದ ಶಿವನನ್ನು ಅರಸುತ್ತಾ ಬಂದು ಭೂಲೋಕದಲ್ಲಿದ್ದ "ಅರುಣಾಸುರ"



ನೆಂಬ ರಾಕ್ಷಸನನ್ನು ಭ್ರಮರರೂಪದಲ್ಲಿ ಸಂಹರಿಸಿ ಭ್ರಾಮರಿ ಶಕ್ತಿ ಪೀಠೆಯಾಗಿ ಶ್ರೀಮಲ್ಲಿಕಾರ್ಜುನನ ಹಿಂದೆಯೇ ನೆಲೆ ನಿಂತಿದ್ದಾಳೆ.

ಜಗದ್ಗುರುಗಳಾದ ಶ್ರೀ ಶಂಕರಾಚಾರ್ಯರು ಈ ಕ್ಷೇತ್ರದಲ್ಲಿ 'ಶಿವಾನಂದಲಹರಿ' ಎಂಬ ಸ್ತೋತ್ರವನ್ನೂ, ಇನ್ನು ಅನೇಕ ರಚನೆಗಳನ್ನು ಮಾಡಿದ್ದಾರೆಂದು ನಂಬಿಕೆ!

ಹೀಗೆ ಭೂಕೈಲಾಸವಾಗಿ ಹೆಸರುವಾಸಿಯಾದ ಶ್ರೀ ಶೈಲಕ್ಷೇತ್ರದಲ್ಲಿ ನಿರಂತರವಾಗಿ ಆದಿದಂಪತಿಗಳಾದ ಶ್ರೀ ಭ್ರಮರಾಂಬಿಕ ಮತ್ತು ಶ್ರೀ ಮಲ್ಲಿಕಾರ್ಜುನ ಸ್ವಾಮಿಗೆ ನಿತ್ಯ ಸೇವೆಗಳು, ವಾರೋತ್ಸವಗಳು, ಶರನ್ನವರಾತ್ರಿಗಳೊಂದಿಗೆ "ಮಹಾಶಿವರಾತ್ರಿ". ಪರ್ವದಿನದಂದು ಉತ್ಸವಗಳು, ಮೆರವಣಿಗೆಗಳು ನಿರ್ವಹಿಸಲ್ಪಡುತ್ತವೆ. ಪ್ರಧಾನವಾಗಿ ಮಹಾ ಶಿವರಾತ್ರಿ ದಿನದಂದು ಶ್ರೀಮಹಾಲಿಂಗೋದ್ಭವ ಕಾಲದಲ್ಲಿ ಜಾವ ಜಾವಕ್ಕೆ ಮಹಾನ್ಯಾಸಪೂರ್ವಕ ರುದ್ರಾಭಿಷೇಕಗಳು ಘನವಾಗಿ ನಿರ್ವಹಿಸಲ್ಪಡುತ್ತವೆ. ಆ ದಿನ ಮಧ್ಯರಾತ್ರಿ ಕಗ್ಗತ್ತಲಲ್ಲಿ ಗರ್ಭಗುಡಿ ಗೋಪುರದ ಸುತ್ತೂ 'ಪಾಗಾ' ಎಂದು ಕರೆಯಲ್ಪಡುವ ವಸ್ತ್ರವನ್ನು ದಿಗಂಬರನಾದ ಪದ್ಮಶಾಲಿ ಭಕ್ತನು ಸುತ್ತಿ ಕಟ್ಟುವುದು ತುಂಬಾ ವಿರಳವಾದ ವಿಶೇಷವಾದ ಸಂಪ್ರದಾಯ! ದಿನಕ್ಕೆ ಒಂದು ಗಜದ ಲೆಕ್ಕದಂತೆ ಒಂದು ವರ್ಷಕ್ಕೆ 365 ಗಜದ ವಸ್ತ್ರವನ್ನು ಆ ಭಕ್ತನು ಸ್ವಯಂ ತಾನೇ ನೇಯ್ದು ಮಹಾ ಶಿವರಾತ್ರಿ ದಿನ ತಾನೇ ಸ್ವತಃ ಸುತ್ತುತ್ತಾನೆ. ಶ್ರೀ ವೇಂಕಟೇಶನು ಮಹಾಶಿವರಾತ್ರಿಯಂದು ಶ್ರೀ ಭ್ರಮರಾಂಬಿಕಾ ಸಮೇತ ಶ್ರೀ ಮಲ್ಲಿಕಾರ್ಜುನ ಸ್ವಾಮಿಯವರಿಗೆ ವಸ್ತ್ರಗಳನ್ನು ಸಮರ್ಪಿಸುವುದು ಆಚಾರವಾಗಿ ನಡೆದು ಬಂದಿರುವ ಪದ್ಧತಿ.

## ನಂದಿ ಮಂಡಲದಲ್ಲಿ ಮಹಾಶಿವರಾತ್ರಿ

ಶ್ರೀ ಶೈಲಕ್ಷೇತ್ರದ ಸಮೀಪದಲ್ಲೇ ಮಹಾನಂದಿಕ್ಷೇತ್ರವು ಸ್ಥಿತಗೊಂಡಿದೆ. ಹಿಂದೆ 'ನಂದಿ' ಯೆಂಬ ಭಕ್ತನು ಶಿವನನ್ನು ಮೆಚ್ಚಿಸಿ, ಈ ಪ್ರಾಂತ್ಯವೆಲ್ಲಾ ನಂದಿಮಂಡಲವಾಗಿ ಶಿವನು ಪ್ರತ್ಯಕ್ಷವಾದ ಸ್ಥಳವು ತನ್ನ ಹೆಸರಿನಲ್ಲಿ ನೆಲೆಗೊಳ್ಳಬೇಕೆಂದು ಕೋರುತ್ತಾನೆ. ಆ ಭಕ್ತನ ಕೋರಿಕೆ ಮೇರೆಗೆ ಪರಮೇಶ್ವರನು



"ಮಹಾನಂದಿ ಪರಮೇಶ್ವರ" ನೆಂಬ ಹೆಸರಿನಿಂದ ಪಾರ್ವತಿಯು 'ಕಾಮೇಶ್ವರಿ' ಯೆಂಬ ಹೆಸರಿನಿಂದ ವಾಸವಾಗಿದ್ದಾರೆ. ಮಹಾನಂದಿ ಕ್ಷೇತ್ರದ ಸುತ್ತಲೂ ನವನಂದಿಗಳು ಸ್ಥಿತವಾಗಿರುವುದರಿಂದ ನವನಂದಿಯೆಂಬ ಹೆಸರಿನಿಂದಲೂ, ನಂದಿಮಂಡಲವೆಂಬ ಹೆಸರಿನಿಂದಲೂ ಈ ಕ್ಷೇತ್ರ ನೇಮಕಗೊಂಡಿದೆ. ಈ ಕ್ಷೇತ್ರದ ನಿತ್ಯೋತ್ಸವಗಳೊಂದೇ ಅಲ್ಲದೇ 'ಮಹಾಶಿವರಾತ್ರಿ' ಸಂದರ್ಭದಲ್ಲಿ ಆಚರಿಸುವ ಬ್ರಹ್ಮೋತ್ಸವಗಳಲ್ಲಿ ಸಹಸ್ರಾರು ಭಕ್ತರು ಪಾಲ್ಗೊಳ್ಳುತ್ತಾರೆ.

## 'ನಾರಾಯಣವರ'ದಲ್ಲಿ ಮಹಾಶಿವರಾತ್ರಿ

ಶ್ರೀ ಪದ್ಮಾವತಿ ಶ್ರೀನಿವಾಸರ ಪರಿಣಯ ವೇದಿಕೆಯೇ ಈ ನಾರಾಯಣವರ. ಇದು ಒಂದಾನೊಂದು ಕಾಲದಲ್ಲಿ ಆಕಾಶರಾಜನ ರಾಜಧಾನಿ! ಆಲಯಗಳ ನಗರ! ಐದು ಸಾವಿರ ವರ್ಷಗಳ ಹಿಂದೆ ಮುಕ್ಕೋಟಿ ದೇವತೆಗಳ ಸಂಗಡ ತೆರಳಿ ಬಂದ ಶ್ರೀನಿವಾಸ ಆಕಾಶರಾಜನ ಸುಪುತ್ರಿ ಪದ್ಮಾವತಿಯನ್ನು ವರಿಸಿದ ದಿವ್ಯಸ್ಥಳ ಈ ನಾರಾಯಣವರ. ಈ ಕಲ್ಯಾಣ ವೈಭೋಗದ ಕುರುಹಾಗಿ ಶ್ರೀ ಕಲ್ಯಾಣ ವೇಂಕಟೇಶ್ವರ



ಸ್ವಾಮಿಯ ದೇವಾಲಯ ನೆಲೆಯೂರಿರುವ ದಿವ್ಯಕ್ಷೇತ್ರ ನಾರಾಯಣವರ. ಮುಕ್ಕೋಟಿ ದೇವತೆಗಳು ಪ್ರತ್ಯಕ್ಷವಾಗಿ ನಡೆದಾಡಿದ ಪುಣ್ಯ ಭೂಮಿಯಿದು.

ಕಲ್ಯಾಣ ದಂಪತಿಗಳಾದ ಶ್ರೀಪದ್ಮಾವತಿ-ಶ್ರೀನಿವಾಸರು ಅರಿಶಿನ ವಸ್ತ್ರದೊಂದಿಗೆ ದರ್ಶನ ಪಡೆದ ಶ್ರೀ ಶಕ್ತಿವಿನಾಯಕಸ್ವಾಮಿಯ ಗುಡಿ, ಶ್ರೀ ಚಂಪಕವಲ್ಲಿ ಸಮೇತ ಶ್ರೀ ಪರಾಶರೇಶ್ವರ ದೇವಾಲಯ, ಶ್ರೀ ಮರಕತಾಂಬಿಕಾ ಸಮೇತ ಶ್ರೀ ಅಗಸ್ತ್ಯೇಶ್ವರ ಆಲಯ, ಶ್ರೀ ಕಲ್ಯಾಣ ವೀರಭದ್ರೇಶ್ವರ ದೇವಾಲಯ, ಶ್ರೀ ಅವನಾಕ್ಷಮ್ಮನ ಗುಡಿ ಮುಂತಾದ ಪ್ರಾಚೀನ ದಿವ್ಯಕ್ಷೇತ್ರಗಳು ಇಂದಿಗೂ ಅಂದಿನಂತಹುದೇ ವೈಭವ - ಉತ್ಸವಗಳಿಂದ ಗೋಚರಿಸುತ್ತಿದೆ.

ನಾರಾಯಣವರದಲ್ಲಿಯ ಶ್ರೀ ಕಲ್ಯಾಣ ವೇಂಕಟೇಶ್ವರಸ್ವಾಮಿಯ ಆಲಯ ದೊಂದಿಗೆ ಮೇಲಿನ ದೇವಸ್ಥಾನಗಳಲ್ಲಿಯೂ ಸಹಾ ತಿ.ತಿ. ದೇವಸ್ಥಾನ ಪರ್ಯವೇಕ್ಷಣದಲ್ಲಿ ಅಂಗರಂಗ ವೈಭವೋಪೇತವಾಗಿ, ಭಕ್ತ ಜನ ಮಂದಾರವಾಗಿ ಕಳೆಗಟ್ಟಿವೆ. ಪ್ರಮುಖವಾಗಿ "ಮಹಾಶಿವರಾತ್ರಿ" ಹಬ್ಬದ ದಿನ ಆಯಾ ಗುಡಿಗಳಲ್ಲಿ ಮಹಾನ್ಯಾಸ ರುದ್ರಾಭಿಷೇಕಗಳು, ಅರ್ಚನೆಗಳು, ಬ್ರಹ್ಮೋತ್ಸವಗಳು ಶ್ರೀನಿವಾಸನ ಪರ್ಯವೇಕ್ಷಣನದಲ್ಲಿ ಇಂದಿಗೂ ನಡೆದು ಬರುತ್ತಿರುವುದು ಬಹು ವಿಶೇಷ!

## ತೊಂಡವಾಡ ಕ್ಷೇತ್ರದಲ್ಲಿ ಮಹಾಶಿವರಾತ್ರಿ

ತಿರುಮಲೆ ಕ್ಷೇತ್ರದ ಕೊಂಚ ದೂರದಲ್ಲಿ ಉತ್ತರ ದಿಕ್ಕಿನಲ್ಲಿ ಸುವರ್ಣಮುಖಿ ನದಿತೀರದಲ್ಲಿ ಶ್ರೀ ಅಗಸ್ತ್ಯೇಶ್ವರ ಸ್ವಾಮಿ ಕ್ಷೇತ್ರವಿದೆ. ಇದನ್ನು "ರುದ್ರ ಪಾದದಮುಕ್ಕೋಟಿಕ್ಷೇತ್ರ" ಎಂದು ಕೂಡಾ ಕರೆಯುತ್ತಾರೆ. ಅಗಸ್ತ್ಯ ಮಹರ್ಷಿ ಪ್ರತಿಷ್ಠಿತ "ಮಹಾಶಿವಲಿಂಗ"ದ ಪಕ್ಕದಲ್ಲೇ ಪಾರ್ವತಿದೇವಿ 'ಆನಂದವಲ್ಲಿ' ಯೆಂಬ ಹೆಸರಿನಿಂದ ನೆಲೆಸಿದ್ದಾಳೆ.



ನೂತನ ವಧು - ವರರಾದ ಶ್ರೀ ಪದ್ಮಾವತಿ - ಶ್ರೀನಿವಾಸರು ಆದಿವರಾಹ ಕ್ಷೇತ್ರವಾದ ತಿರುಮಲೆಗೆ ಬರುವಾಗ ತೊಂಡವಾಡದಲ್ಲಿರುವ ಅಗಸ್ತ್ಯ ಮಹರ್ಷಿಯನ್ನು ಸಂದರ್ಶಿಸುತ್ತಾರೆ. ಲೋಪಾಮುದ್ರೆ - ಅಗಸ್ತ್ಯ ದಂಪತಿಗಳು ಅವರಿಗೆ ಆತಿಥ್ಯವನ್ನು ನೀಡುತ್ತಾ "ಸ್ವಾಮಿ! ಶ್ರೀನಿವಾಸ! ನೂತನ ದಂಪತಿಗಳು ಆರು ತಿಂಗಳುಗಳವರೆಗೆ ತೀರ್ಥಕ್ಷೇತ್ರಗಳಿಗೆ ಯಾತ್ರೆ ಮಾಡುವಂತಿಲ್ಲ. ಅಲ್ಲಿಯವರೆಗೂ ನಮ್ಮ ಆತಿಥ್ಯವನ್ನು ಅಂಗೀಕರಿಸಿ ತದ ನಂತರ ವರಾಹಕ್ಷೇತ್ರಕ್ಕೆ ಹೋಗಬಹುದು" ಎಂದು ವಿನಂತಿಸಿದ್ದಾರೆ. ಆ ಮುನಿ ದಂಪತಿಗಳ ಆಜ್ಞೆ ಮೇರೆಗೆ ಇಲ್ಲಿ ಬಿಡಾರಹೂಡಿದ ಗುರುತಿಗಾಗಿ ಇಲ್ಲಿ ಶ್ರೀ ಕಲ್ಯಾಣ ವೇಂಕಟೇಶ್ವರ ಆಲಯದೊಂದಿಗೆ ಶ್ರೀನಿವಾಸಮಂಗಾಪುರ ನೆಲೆಗೊಂಡಿದೆ. ತಿ.ತಿ.ದೇವಸ್ಥಾನದ ನಿರ್ವಹಣೆಯಲ್ಲಿರುವ ಶ್ರೀನಿವಾಸಮಂಗಾಪುರ, ಕ್ಷೇತ್ರಕ್ಕೆ ಹತ್ತಿರದಲ್ಲೇ ಶ್ರೀ ಪದ್ಮಾವತಿ ಶ್ರೀನಿವಾಸರು ಸಂದರ್ಶಿಸಿದ ತೊಂಡವಾಡ ಶ್ರೀ ಆನಂದ ವಲ್ಲಿ ಸಮೇತ ಶ್ರೀ ಅಗಸ್ತ್ಯೇಶ್ವರ ಈ ಕ್ಷೇತ್ರವನ್ನು ಭಕ್ತಾದಿಗಳು ಸಂದರ್ಶಿಸಬಹುದು.

ಆಂಧ್ರಪ್ರದೇಶದ ದೇವದಾಯ ಶಾಖೆಯ ನೇತೃತ್ವ ದಲ್ಲಿರುವ ಈ ಪ್ರಮುಖವಾದ ಕ್ಷೇತ್ರದಲ್ಲಿ ನಿತ್ಯಾಭಿಷೇಕ, ಅರ್ಚನೆ,- ಆರಾಧನೆಗಳು "ಮಹಾಶಿವರಾತ್ರಿ" ಸಂದರ್ಭದಲ್ಲಿ ಉತ್ಸವಗಳು ಮತ್ತಷ್ಟೂ ವಿಜೃಂಭಣೆಯಿಂದ ಜರಗುತ್ತವೆ.

**"ತಲಕೋನ" ಕ್ಷೇತ್ರದಲ್ಲಿ ಮಹಾಶಿವರಾತ್ರಿ**

ಇವಷ್ಟೇ ಅಲ್ಲದೇ ಸಪ್ತಗಿರಿಯ ತೆಕ್ಕಿಯಲ್ಲಿ ನಿಖರವಾಗಿ ವೇಂಕಟಾದ್ರಿಯ ಹಿಂಭಾಗದಲ್ಲಿ ನೆಲೆಸಿರುವ ಪ್ರಸಿದ್ಧ ಕ್ಷೇತ್ರ "ತಲಕೋನ" ಭೋರ್ಗರೆಯುವ ಜಲಪಾತಗಳಿಂದ, ಪ್ರಕೃತಿ ರಮಣೀಯ ದೃಶ್ಯಗಳಿಂದ ಅಲಂಕೃತಗೊಂಡಿರುವ ತಲಕೋನ ಕ್ಷೇತ್ರದಲ್ಲಿ ಶ್ರೀ ಸಿದ್ಧೇಶ್ವರಸ್ವಾಮಿ ಶಿವಲಿಂಗದೊಂದಿಗೆ 'ಸಿದ್ಧೇಶ್ವರಿ' ತಾಯಿಗೂ ನಿತ್ಯವೂ ಅರ್ಚಿಸಲ್ಪಡುವುದೊಂದೇ ಅಲ್ಲದೇ ವಿಶೇಷ ರೀತಿಯಲ್ಲಿ ಜರಗುವ "ಮಹಾಶಿವರಾತ್ರಿ" ಅಭಿಷೇಕಾರ್ಚನೆಗಳಲ್ಲಿಯೂ ಸಹಾ ಭಕ್ತರು ಮಿಂದೇಳುತ್ತಿದ್ದಾರೆ.

ಹಾಗೆಯೇ ಶ್ರೀ ಶುಕಮಹರ್ಷಿ ಆಶ್ರಮ ಪ್ರಾಂತ್ಯ ವಾದುದು ತಿರುಚಾನೂರು, ಶ್ರೀ ಪದ್ಮಾವತಿ ಅಮ್ಮನವರ ದಿವ್ಯ ಕ್ಷೇತ್ರವಾದ ತಿರುಚಾನೂರಿಗೆ ಮಾರುದೂರದಲ್ಲಿ 'ಯೋಗಿ ಮಲ್ಲವರ'ಯೆಂಬ ಕ್ಷೇತ್ರವುಂಟು. ಶ್ರೀ ಶುಕಮಹರ್ಷಿಯ ತಾತನಾದ ಪರಾಶರ ಮಹರ್ಷಿ ಪ್ರತಿಷ್ಠಾಪಿತ ಯೋಗಿಮಲ್ಲಾವರದ 'ಶ್ರೀ ಪರಾಶರೇಶ್ವರ ಸ್ವಾಮಿ' ನಿರಂತರವಾಗಿ ಅಭಿಷೇಕ ಅರ್ಚನೆಗಳೊಂದಿಗೆ ವಿಶೇಷವಾಗಿ 'ಮಹಾಶಿವರಾತ್ರಿ'ಯಂತಹ ಪರ್ವ ದಿನಗಳಲ್ಲಿ ಮಹಾನ್ಯಾಸ ಪೂರ್ವಕ ರುದ್ರಾಭಿಷೇಕಗಳಿಂದ ಆರಾಧಿಸಲ್ಪಡುತ್ತಿರುವ ಈ ಕ್ಷೇತ್ರ ಭಕ್ತ ಜನರಿಂದ ತುಂಬಿ ತುಳುಕುತ್ತಿರುತ್ತದೆ.

ಹೀಗೆ ಸಪ್ತಗಿರಿ ಪರಿಧಿಯಲ್ಲಿ ನೆಲೆಗೊಂಡಿರುವ ಅನೇಕಾನೇಕ ಶೈವಕ್ಷೇತ್ರಗಳಲ್ಲಿ 'ಮಹಾಶಿವರಾತ್ರಿ' ಪರ್ವದಿನ ವೇಳೆಯಲ್ಲಿ "ಓಂ ನಮಃ ಶಿವಾಯ-ಹರಹರ ಮಹಾದೇವ" ಎಂಬಂತಹ ನಾಮಸ್ಮರಣೆಗಳು ಪ್ರತಿಧ್ವನಿಸುತ್ತಿರುತ್ತದೆ.

ಅಷ್ಟೇ ಅಲ್ಲ ಅಭಿನ್ನವಾಗಿ ಒಬ್ಬರೇ ಆಗಿರುವ ವಾಸುದೇವ-ವಾಮ ದೇವರಲ್ಲಿ ಒಬ್ಬರು ಮಹಾರಮಣನಾದರೆ ಮತ್ತೊಬ್ಬರು ಉಮಾರಮಣನು!



ಒಬ್ಬನು ಶೇಷಶಾಯಿಯಾದರೆ ಮತ್ತೊಬ್ಬನು ನಾಗಾಭರಣ. ಒಬ್ಬರು ತ್ರಿಪುರಾಸುರನ ಹುಟ್ಟಡಗಿಸಿದರೆ ಮತ್ತೊಬ್ಬರು ಮುರಾಸುರನನ್ನು ಸಂಹಾರಗೈದವರು. ಇವರಲ್ಲೊಬ್ಬರು ಬಾಣಾಸುರನಿಗೆ ಶತ್ರುವಾದರೆ ಮತ್ತೊಬ್ಬರು ಅಸಮ ಬಾಣನಾದ ಮನ್ಮಥನಿಗೆ ವೈರಿಯು. ಹೀಗೆ ಕುಂದಿಲ್ಲದ, ಸರಿಸಾಟಿಯಿಲ್ಲದೆ ದಿವ್ಯ ಲಕ್ಷಣಗಳಿಂದ ವಿರಾಜಿಸುತ್ತಿರುವ 'ವಾಸುದೇವ' 'ವಾಮ ದೇವ' ಇಬ್ಬರನ್ನು ಹೀಗೆ ಸ್ತುತಿಸುತ್ತಾ ನಮನ ಮಸ್ತಕರಾಗೋಣ!

ನಮ್ಮ ರಮಣ ಮಹಾರಮಣ
ಫಣಧರತಲ್ಪಂ - ಫಣಾಧರಕಲ್ಪಂ
ಪುರಮಥನಂ - ಮುರಮಥನಂ
ವಂದೇ ಬಾಣಾರಿ ಮಸಮಬಾಣಾರೀಂ

**- ಅಪ್ಪಯ್ಯ ದೀಕ್ಷಿತರು**

**॥ ಓಂ ಹರಯೇ ನಮಃ ಶಿವಾಯ॥**

# ಹೋಳಿರೇ ಹೋಳಿ



'ಹೋಳಿ ಹುಣ್ಣಿಮೆ ಸಾರುವ ಅಪೂರ್ವ ಸಂದೇಶ ವೆಂದರೆ 'ಲೋಕಕಲ್ಯಾಣಕ್ಕಾಗಿ ನಿನ್ನನ್ನು ನೀನು ಬಲಿ ಕೊಡುವುದೇ ಬದುಕಿನ ಸಾರ್ಥಕತೆ'. ಕಾಮ - ಮನ್ಮಥ - ದಹಿಸಿ ಹೋದದ್ದೇ ಲೋಕಕಲ್ಯಾಣಕ್ಕಾಗಿ ಹಾಗೂ ಅವನು ಮತ್ತೆ ಹುಟ್ಟಿ ಬಂದದ್ದೇ ಲೋಕ ಕಲ್ಯಾಣಕ್ಕಾಗಿ. ಅವನಿಲ್ಲದೆ ಸೃಷ್ಟಿಯೇ ಇಲ್ಲ. ಇಂತಹ ಮಹಿಮನಾದ ಮನ್ಮಥನ ಮಹಾತ್ಯಾಗದ ಸ್ಮರಣೆಯೇ ಹೋಳಿ ಹುಣ್ಣಿಮೆ'.

"ಹೋಳಿ ಹುಣ್ಣಿಮೆ' ಫಾಲ್ಗುಣ ಮಾಸದ ಫಾಲ್ಗುಣ ಹುಣ್ಣಿಮೆಗೆ ಪರಿಪೂರ್ಣವಾಗಿ ಅರ್ಪಿತ. ಹೋಳಿ ಹುಣ್ಣಿಮೆಯೆಂದು ದೇಶದ ಉತ್ತರಭಾಗದಲ್ಲಿ ಕೃಷ್ಣ- ರಾಧೆ ಗೋಪಿಕಾ ಸ್ತ್ರೀಯರ ಸ್ಮರಣೆ ನಡೆದರೆ ದಕ್ಷಿಣ ಭಾರತದಲ್ಲಿ ರತಿ - ಮನ್ಮಥರ ಪೂಜೆ ನಡೆಯುತ್ತದೆ. ಹೋಳಿ ಹುಣ್ಣಿಮೆಯ ಜನಪ್ರಿಯ ಹೆಸರು 'ಕಾಮದಹನ', ಈ ಪೌರ್ಣಿಮೆಯ ಪ್ರಧಾನ ಅಂಶ ಕಾಮನನ್ನು ಅಗ್ನಿಗೆ ಅರ್ಪಿಸುವುದು. ಆದ್ದರಿಂದ ಈ ಹುಣ್ಣಿಮೆಯನ್ನು 'ಹುತಾಶಿನಿ ಪೌರ್ಣಿಮೆ' ಎಂದೂ ಕರೆಯುತ್ತಾರೆ. ಹುತಾಶನಿ ಎಂದರೆ 'ಅಗ್ನಿ' ಎಂದರ್ಥ. ಕಾಮನ ಅಂತ್ಯದ ಪ್ರತೀಕವಾಗಿ ದಹನಕ್ರಿಯೆ ನಡೆಸಿದರೆ ಕಾಮನು ಮತ್ತೆ ಹುಟ್ಟಿ ಬಂದುದಕ್ಕೆ ರಂಗು ರಂಗಿನ ಬಣ್ಣದಾಟವಾಡಿ ಸಂಭ್ರಮಿಸುವ ಜನಪದ ಹಬ್ಬವಿದು. ಸುಖ - ದುಃಖಗಳ ಸಂಗಮ. ಅಳು - ನಗು ಬದುಕಿನಲ್ಲಿ ಸಹಜ ಎಂಬುದನ್ನು ಸ್ಮರಿಸುವುದರ ಸಂಕೇತ.

## ಹೋಳಿಹಬ್ಬ

'ಹೋಳಿ ಹಬ್ಬ' ನಮ್ಮ ಸಾಂಸ್ಕೃತಿಕ - ಪ್ರಾಕೃತಿಕ ಮಹತ್ವದ ಹಬ್ಬ. ಪೌರಾಣಿಕ, ಐತಿಹಾಸಿಕ, ಸಾಂಸ್ಕೃತಿಕ ಮಹತ್ವವನ್ನು ತನ್ನಲ್ಲಿ ಹುದುಗಿಸಿಕೊಂಡಿರುವ ಈ ಹಬ್ಬ ಸರ್ವರಿಗೂ ಪ್ರಿಯ. ಹೋಳಿ ಎಂದಾಕ್ಷಣ ಎಲ್ಲರ ಹೃದಯದಲ್ಲಿ ಬಣ್ಣದ ಲೋಕ ತೆರೆದುಕೊಳ್ಳುತ್ತದೆ. ಹೋಳಿ ಎಂದರೆ ಬಣ್ಣ.

## ಬಣ್ಣವೆಂದರೆ ಸಂಭ್ರಮ -ಸಡಗರ

ಸೊಬಗು - ಸಂತಸ. ಬಡವ-ಬಲ್ಲಿದ ಎಂಬ ಭೇದ-ಭಾವವಿಲ್ಲದೆ ಎಲ್ಲರನ್ನೂ ತನ್ನ ಉತ್ಸಾಹ ಮಹಾಪೂರದಲ್ಲಿ ಕೊಚ್ಚಿಕೊಂಡು ಹೋಗುವ ನಮ್ಮ ಸುಂದರ ಸಾಂಪ್ರದಾಯಿಕ ಪರ್ವ. ಬಣ್ಣಗಳ ಅರ್ಥವೇ ಖುಷಿ. ಮನುಷ್ಯ ಬದುಕಿನಲ್ಲಿ ವರ್ಷದಲ್ಲಿ ಒಮ್ಮೆಯಾದರೂ ಎಲ್ಲವನ್ನು ಮರೆತು ಖುಷಿ ಪಡಬೇಕು ಎಂಬುದನ್ನು ಬಿಂಬಿಸುವ ಹಾಗೆ ಹೋಳಿ ಹಬ್ಬದ ಆಚರಣೆ ಇದೆ. ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ. ಮಡಿ ಮೈಲಿಗೆಗಳ ಗೋಜಿಲ್ಲ. ಇದು ಜನ ಸಾಮಾನ್ಯರ ಹಬ್ಬ. ರಂಗು ರಂಗಿನ ಬಣ್ಣಗಳೊಳಗೆ ಮುಳುಗೆದ್ದು ಸಂಭ್ರಮಿಸುವ ಹಬ್ಬ. ಪರಸ್ಪರ ಬಣ್ಣ ಹಚ್ಚುತ್ತ, ಹಿಂದಿನ ದ್ವೇಷ ಮರೆತು ಒಂದಾಗುತ್ತ ಸಂಭ್ರಮಿಸುವ ಹೋಳಿ, ಪ್ರಕೃತಿಯಲ್ಲಿನ ಹೊಸ ಚೈತನ್ಯ ತುಂಬುವ ಋತುಗಳ ರಾಜ ವಸಂತನಾಗಮನದ ಸೂಚಕವೂ ಹೌದು. ಶರಧೃತುವಿನ ಚಳಿಗೆ ಮೈಮನ ಮುದುಡಿಕೊಂಡ ಜೀವ ಜಂತುಗಳಿಗೆ ಬಿಸಿ ನೀಡಿ, ಹೊಸ ಉತ್ಸಾಹ ತುಂಬುವ ಹೋಳಿಯು ಮೂಲತಃ ಅಗ್ನಿ ಆರಾಧನೆಯ ಹಬ್ಬ. 'ಹೋಳಿ' ಎಂಬ ಶಬ್ಧವು ಸಂಸ್ಕೃತ 'ಹೋಲಿ' ಎಂಬ ಶಬ್ದದಿಂದ ಬಂದಿದೆ. ಹೋಲಿ

- ಶ್ರೀಮತಿ. ಸುಮಚಂದ್ರಶೇಖರ್



ಎಂಬುದರ ಗ್ರಾಂಥಿಕ ಅರ್ಥ ಕಾಮನಹಬ್ಬ, ಓಕುಳಿ, ಎಸೆಯುವುದು, ಬೆಂಕಿ, ಜ್ವಾಲೆ, ಬಲಿ, ಆಹುತಿ, ಎಂದಿದೆ. ಈ ಅರ್ಥಗಳಿಗೆ ಸಂಬಂಧಿಸಿದಂತೆ ಪೌರಾಣಿಕ ಕಥನಗಳು ಸಾಕಷ್ಟಿವೆ.

## ಹೋಲಿಕಾ ದಹನ

ಒಂದು ಪೌರಾಣಿಕ ಕಥಾನಕದ ಪ್ರಕಾರ ರಾಕ್ಷಸ ರಾಜ ಹಿರಣ್ಯಕಶಿಪು ವಿನ ತಂಗಿ ಹೋಲಿಕಾಳ ದಹನ ಪ್ರಸಂಗವಿದು. ಹಿರಣ್ಯಕಶಿಪು ಮಹಾಬಲಾಢ್ಯ ರಾಕ್ಷಸ ರಾಜ. ದೇವರುಗಳೆಂದರೆ ಉರಿದು ಬೀಳುತ್ತಿದ್ದ.ಹಿರಣ್ಯಕಶಿಪು ಭೂಮಿಯ ಮೇಲೆ ದೇವಪೂಜೆ,ಯಜ್ಞ- ಯಾಗಾದಿಗಳು ನಡೆಯಬಾರದೆಂದು ಕಟ್ಟಪ್ಪಣೆ ಹೊರಡಿಸಿದ. ಆದರೆ ವಿಚಿತ್ರ ಎಂದರೆ ಅವನ ಮಗ ಪ್ರಹ್ಲಾದ ವಿಷ್ಣು ಭಕ್ತ. ನಿತ್ಯ ವಿಷ್ಣು ನಾಮಸ್ಮರಣೆಯಲ್ಲಿ ತೊಡಗಿರುತ್ತಿದ್ದ. ತಂದೆ ದೇವರುಗಳ ವಿರುದ್ಧ ಇದ್ದರೆ ಮಗ ದೇವರುಗಳ ಪರ ಆಗಿದ್ದ. ಇದು ತಂದೆ ಹಿರಣ್ಯಕಶಿಪುವಿಗೆ ತುಂಬ ತಲೆನೋವಾಗಿತ್ತು. ಪರಿಪರಿಯಾಗಿ ಬುದ್ಧಿ ಹೇಳಿದರೂ ಮಗ ಪ್ರಹ್ಲಾದ ಕೇಳಲಿಲ್ಲ. ರಾಕ್ಷಸರಾಜ ಹಿರಣ್ಯಕಶಿಪು ದೈವಭಕ್ತ ಮಗನನ್ನು ತನ್ನ ವೈರಿ ಎಂದೇ ಬಗೆದ. ಏನೆಲ್ಲ ಹಿಂಸೆ ನೀಡಲಾರಂಭಿಸಿದ. ಆದರೂ ಮಗ ಪ್ರಹ್ಲಾದ ಅಂಜಲಿಲ್ಲ, ಅಳುಕ ಲಿಲ್ಲ. ಆಗ ತಂದೆ ಕೊನೆಯದಾಗಿ ಹೆತ್ತ ಮಗನನ್ನೇ ಕೊಂದು ಹಾಕಲು ನಿರ್ಧ ರಿಸಿದ.

ರಾಕ್ಷಸ ರಾಜ ತನ್ನ ಮಗನನ್ನು ಕೊಲ್ಲುವುದನ್ನು ಬಿಟ್ಟು ಬೇರೆ ದಾರಿಯೇ ಇಲ್ಲ ಎಂದು ಕೊಂಡ. ಕೊಲ್ಲುವ ಬಗೆಯನ್ನು ಕುರಿತು ಯೋಚಿಸಿದ. ಆಗ ಅವನಿಗೆ ಅವನ ತಂಗಿ ಹೋಲಿಕಾ ನೆನಪಾದಳು. ತಂಗಿ ಹೋಲಿಕಾಗೆ ಮುಟ್ಟಿ ದ್ದೆಲ್ಲಾ ಭಸ್ಮವಾಗುವ ದೇವರ ವರವಿತ್ತು.ಮಗನನ್ನು ಸುಟ್ಟು ಭಸ್ಮ ಮಾಡಲು ತಂಗಿ ಹೋಲಿಕಾಳಿಗೆ ಹೇಳಿದ. ಒಂದು ದಿನ ಹೋಲಿಕಾ ಪ್ರಹ್ಲಾದನನ್ನು ಸುಟ್ಟು ಭಸ್ಮ ಮಾಡಲು ಎತ್ತಿಕೊಂಡು ತನ್ನ ಮಡಿಲಿಗೆ ಹಾಕಿಕೊಂಡಳು. ಆದರೆ ಅಲ್ಲೊಂದು ವಿಚಿತ್ರ ನಡೆಯಿತು.ಮಗ ಪ್ರಹ್ಲಾದ ಸುಟ್ಟು ಭಸ್ಮವಾಗದೇ ಹೋಲಿ ಕಾಳೇ ಭಸ್ಮವಾಗಿ ಹೋದಳು. ಈ ಅದ್ಭುತ ಘಟನೆಯ ಸ್ಮರಣೆಗಾಗಿಯೇ ಹೋಳಿ ಹಬ್ಬವನ್ನು ಆಚರಿಸಲಾಗುತ್ತದೆ ಎನ್ನಲಾಗಿದೆ.

## ದುಂಡಾ ರಾಕ್ಷಸಿ

ಕೃತಯುಗದ ಕಥೆಯಿದು. ರಘುರಾಜನ ರಾಜ್ಯದಲ್ಲಿ ವಿಚಿತ್ರ ಪ್ರಕರಣವೊಂದು ಎಲ್ಲರ ನಿದ್ದೆಗೆಡಿಸಿತು.ಆಡಲು ಹೋದ ಮಕ್ಕಳು ತಿರುಗಿ ಬಾರದೆ ಹೋದರು. ಕೆಲವು ಮಕ್ಕಳು ಗಾಯಗಳೊಂದಿಗೆ ಮರಳಿದರು. ಇದು ನಿತ್ಯ ನಡೆಯಿತು. ಕಾರಣ ಪ್ರಜೆಗಳು ರಾಜನಲ್ಲಿ ಮೊರೆಯಿತ್ತರು.ಮಕ್ಕಳನ್ನು ಉಳಿಸಿಕೊಡಬೇಕೆಂದು ಪರಿಪರಿಯಾಗಿ ಬೇಡಿಕೊಂಡರು. ಆಗ ರಾಜ ತನ್ನ ಸೇನಾಧಿಪತಿಯನ್ನು ಕರೆದು ಆ ರಾಕ್ಷಸನನ್ನು ವಧಿಸಲು ಆದೇಶ ನೀಡಿದ. ಅದೇ ಸಮಯ ದಲ್ಲಿ ರಾಜನ ಆಸ್ಥಾನಕ್ಕೆ ನಾರದರು ದಯ ಮಾಡಿಸಿದರು. ನಡೆದ ವಿಷಯವನ್ನು ಕೇಳಿದ ನಾರದರು ರಾಜನಿಗೆ ಹೇಳಿದರು "ಇವಳು ದುಂಡಾ ರಾಕ್ಷಸಿ. ಅವಳನ್ನು ಸೈನಿಕರಿಂದಾಗಲಿ,ಯಾವುದೇ ವೀರ ರಿಂದಾಗಲಿ ಕೊಲ್ಲಲು ಸಾಧ್ಯವಿಲ್ಲ. ಕೀಟಲೆ ಗಳಿಂದ ಮಾತ್ರ ಅವಳನ್ನು ಊರು ಬಿಟ್ಟು



ಓಡಿಸಲು ಸಾಧ್ಯ. ಅವಳಿಗೆ ಮಕ್ಕಳ ಅವಾಚ್ಯ ಶಬ್ದಗಳೆಂದರೆ ಆಗುವುದಿಲ್ಲ."

ನಾರದರು ದುಂಡಾರಾಕ್ಷಸಿಯನ್ನು ಊರು ಬಿಟ್ಟು ಓಡಿಸಲು ಮಕ್ಕಳು ಏನು ಮಾಡಬೇಕು ಎಂಬುದನ್ನು ತಿಳಿಸಿದರು. ಅದರಂತೆ ರಾಜನು ಊರ ಮಕ್ಕಳನ್ನು ಹಾಗೂ ಅವರ ಹೆತ್ತವರನ್ನು ಕರೆಯಿಸಿ ನಾರದರು ಹೇಳಿದ್ದನ್ನೆಲ್ಲ ಹೇಳಿದರು. ಮಕ್ಕಳು ಜಾಗೃತರಾದರು.ಊರಿನ ಬೀದಿ ಬೀದಿಗಳಲ್ಲಿ ಅಲೆದು ಕಟ್ಟಿಗೆ, ಬೆರಣಿ, ಸುಡುವಂತಹ ಒಣಗಿದ ವಸ್ತುಗಳನ್ನು ತಂದು ಊರಿನ ತುಂಬೆಲ್ಲ ಅಲ್ಲಲ್ಲಿ ಗುಡೆ ಹಾಕಿದರು ಬೆಂಕಿ ಹಚ್ಚಿದರು. ಅದರ ಸುತ್ತು ಹಾಕುತ್ತ ಅವಾಚ್ಯ ಮಾತುಗಳನ್ನು ಹೇಳತೊಡಗಿದರು ರಾಕ್ಷಸಿ ಕೋಪದಿಂದ ಹೊರಗೆ ಬಂದಳು. ನೋಡಿದಲ್ಲೆಲ್ಲಾ ಬೆಂಕಿಯ ಜ್ವಾಲೆಗಳೇ ಕಾಣತೊಡಗಿದವು. ಮಕ್ಕಳ ಬಾಯಿಂದ ಕೆಟ್ಟ ಕೆಟ್ಟ ಬೈಗುಳುಗಳು ಕಿವಿಗೆ ಅಪ್ಪಳಿಸತೊಡಗಿದವು. ದುಂಡಾ ರಾಕ್ಷಸಿಗೆ ಅಲ್ಲಿ ನಿಲ್ಲಲಾಗಲಿಲ್ಲ ಓಡತೊಡಗಿದಳು.ಮಕ್ಕಳು ಬೆಂಕಿ ಹತ್ತಿದ ಕಟ್ಟಿಗೆಗಳನ್ನು ತೆಗೆದುಕೊಂಡು ಅವಳತ್ತ ಓಡಿದರು.ಓಡಿದಳು ಓಡಿದಳು ರಾಜ್ಯದ ಗಡಿಯನ್ನೇ ದಾಟಿ ಹೋದಳು. ದುಂಡಾ ರಾಕ್ಷಸಿಯನ್ನು ಓಡಿಸಿದುದರ ನೆನಪಿಗಾಗಿ ಹಾಗೂ ಅವಳು ಮತ್ತೊಮ್ಮೆ ಬಾರದೆ ಇರಲಿ ಎಂದು ಪ್ರತಿವರ್ಷ ಬೆಂಕಿಯನ್ನು ಹಚ್ಚಿ ಅದರ ಸುತ್ತಲೂ ಕುಣಿಯುತ್ತ ಅವಾಚ್ಯ ಶಬ್ದಗಳ ಹಾಡು ಹೇಳುವ ಪದ್ಧತಿ ಬೆಳೆದು ಬಂದಿತು.ಆದರ ಆಚರಣೆಯ ಮುನ್ನಡೆಯೇ ಇಂದಿನ ಹೋಳಿ.ಈಗಲೂ ಪಡ್ಡೆ ಹುಡುಗರು ಹೋಳಿಯ ಸುತ್ತಲೂ ಕುಣಿಯುತ್ತ 'ಕಾಮಣ್ಣನ ಮಕ್ಕಳು ಕಳ್ಳ ಮಕ್ಕಳು' ಎಂಬಂತಹ ಹಾಡುಗಳನ್ನು ಹೇಳುತ್ತ, ಬೊಬ್ಬೆ ಹೊಡೆಯುತ್ತಾರೆ.

**ಓಕುಳಿಯಾಟದ ಅನುಭೂತಿ**

ಪೌರಾಣಿಕ ಆಧಾರಗಳಲ್ಲಿ ಹೆಚ್ಚು ಜನಪ್ರಿಯ ಹಾಗೂ ಅನುಕರಣೀಯ ಕಥನವೆಂದರೆ ಅದು ಕಾಮದಹನದ ಕಥೆ. ಮಗಳು ದಾಕ್ಷಾಯಣಿ ಶಿವನನ್ನು ಪತಿಯನ್ನಾಗಿ ಆರಿಸಿಕೊಂಡಿದ್ದು, ತಂದೆ ದಕ್ಷಬ್ರಹ್ಮನಿಗೆ ಹಿಡಿಸಲಿಲ್ಲ. ಒಂದು ಸಾರಿ ದಕ್ಷಬ್ರಹ್ಮಯಜ್ಞವನ್ನು ಮಾಡುತ್ತಿದ್ದಾಗ ಎಲ್ಲರನ್ನೂ ಕರೆದರೂ ಶಿವ ಹಾಗೂ ದಾಕ್ಷಾಯಣಿಯನ್ನು ಕರೆಯಲಿಲ್ಲ. ಅದು ಮಗಳಿಗೆ ಕೋಪ ತರಿಸಿತು. ಶಿವನು ಬೇಡವೆಂದರೂ ಕೇಳದೆ ಯಜ್ಞ ನಡೆಯುವ ಸ್ಥಳಕ್ಕೆ ಹೋಗುತ್ತಾಳೆ. ಅಲ್ಲಿ ಅವಳಿಗೆ ತಂದೆಯಿಂದ ಅಪಮಾನವಾದಾಗ ಅವಳು ರೋಷಾವೇಷದಿಂದ ಯಜ್ಞಕುಂಡದಲ್ಲಿ ಬಿದ್ದು ಪ್ರಾಣ ಕಳೆದುಕೊಳ್ಳುತ್ತಾಳೆ. ಅದನ್ನು ಅರಿತ ಶಿವನು ಯಜ್ಞದ ಸ್ಥಳಕ್ಕೆ ಬಂದು ಎಲ್ಲವನ್ನೂ ಧ್ವಂಸ ಮಾಡಿ ಹಿಮಾಲಯಕ್ಕೆ ಹೋಗಿ ಘೋರ ತಪಸ್ಸಿಗೆ ಕುಳಿತುಕೊಳ್ಳುತ್ತಾನೆ. ನಂತರ ದಾಕ್ಷಾಯಣಿ ಪರ್ವತರಾಜನ ಮಗಳಾಗಿ ಜನಿಸುತ್ತಾಳೆ.ತೇಜೋವತಿ ಆದ ಮಗಳಿಗೆ ಪರ್ವತ ರಾಜನು ಸಂತಸದಿಂದ ಉಮಾ ಎಂದು ಹೆಸರಿಟ್ಟು ಅಕ್ಕರೆಯಿಂದ ಬೆಳೆಸುತ್ತಾನೆ. ಒಂದು ದಿನ ಅಲ್ಲಿಗೆ ಬಂದ ನಾರದರು ಉಮಾಳನ್ನು ನೋಡಿ, ಅವಳು ಶಿವನ ಹೆಂಡತಿ ಎಂಬುದನ್ನು ಅರಿತು, ಅವಳನ್ನು ಹಿಮಾಲಯದಲ್ಲಿ ಶಿವನ ಪೂಜೆಗೆ ಕಳಿಸಲು ಹೇಳುತ್ತಾರೆ.ಅದರಂತೆ ಪರ್ವತರಾಜ ಮಗಳನ್ನು ಶಿವನ ಸೇವೆಗೆ ಕಳಿಸಿಕೊಡುತ್ತಾನೆ.

> **ದುಂಡಾ ರಾಕ್ಷಸಿಯನ್ನು ಓಡಿಸಿದುದರ ನೆನಪಿಗಾಗಿ ಹಾಗೂ ಅವಳು ಮತ್ತೊಮ್ಮೆ ಬಾರದೆ ಇರಲಿ ಎಂದು ಪ್ರತಿವರ್ಷ ಬೆಂಕಿಯನ್ನು ಹಚ್ಚಿ ಅದರ ಸುತ್ತಲೂ ಕುಣಿಯುತ್ತ ಅವಾಚ್ಯ ಶಬ್ದಗಳ ಹಾಡು ಹೇಳುವ ಪದ್ಧತಿ ಬೆಳೆದು ಬಂದಿತು.ಆದರ ಆಚರಣೆಯ ಮುನ್ನಡೆಯೇ ಇಂದಿನ ಹೋಳಿ.**

ಈ ಮಧ್ಯೆ ರಾಕ್ಷಸ ರಾಜ ತಾರಕಾಸುರ ಬಲಾಢ್ಯನಾಗಿ ದೇವಲೋಕದ ಮೇಲೆ ದಾಳಿ ಇಡುತ್ತಾನೆ. ಇಂದ್ರಾದಿ ದೇವತೆಗಳೆಲ್ಲ ದೇವಲೋಕ ಬಿಟ್ಟು ಹೆದರಿ ಓಡಿ ಹೋಗುತ್ತಾರೆ. ತಾರಕಾಸುರನ ಸಂಹಾರ 'ಶಿವನ ಮಗನಿಂದ ಮಾತ್ರಸಾಧ್ಯ' ಎಂದು ಬ್ರಹ್ಮ ಹೇಳುತ್ತಾನೆ.ಆದರೆ ಶಿವನು ತಪಸ್ಸಿಗೆ ಕುಳಿತಿದ್ದಾನೆ. ಮೇಲಾಗಿ ಇನ್ನೂ ಮದುವೆಯೇ ಆಗಿಲ್ಲ. ಅಂದಾಗ ಶಿವನಿಗೆ ಮಗನು ಹುಟ್ಟುವುದು ಹೇಗೆ? ಮೇಲಾಗಿ ಘೋರ ತಪಸ್ಸಿಗೆ ಕುಳಿತಿರುವ ಮಹಾ ದೇವನನ್ನು ಎಬ್ಬಿಸುವುದಾದರೂ ಹೇಗೆ? ತಪಸ್ಸಿಗೆ ಅಡ್ಡಿಯುಂಟು ಮಾಡಿ, ಆ ರುದ್ರ ಪ್ರತಾಪಿಯನ್ನು ಎಬ್ಬಿಸುವ ಧೈರ್ಯ ಯಾರಿಗಿದೆ? ಮುಕ್ಕಣ್ಣನು ಕೋಪದ ಭರದಲ್ಲಿ ಹಣೆಗಣ್ಣು ತೆರೆದರೆ ಮುಂದಿರುವುದೆಲ್ಲವೂ ಸುಟ್ಟು ಭಸ್ಮವಾಗುತ್ತದೆ. ಆದರೂ ದೇವತೆಗಳಿಗೆ ಬಂದಿರುವ ಸಂಕಟ ನಿವಾರಣೆಗಾಗಿ ಕಾಮದೇವ ಶಿವನನ್ನು ತಪಸ್ಸಿನಿಂದ ಎಬ್ಬಿಸುವ ಕಾರ್ಯಕ್ಕೆ ಮುಂದಾದ. ಸರ್ವ ಜೀವಿಗಳನ್ನು ಕಂಗೆಡಿಸಿ ಬಿಡುವ ಕಾಮದೇವ ಮನ್ಮಥರಾಜ.ಮನಸ್ಸನ್ನು ಚಂಚಲಗೊಳಿಸುವುದು ಮನ್ಮಥರಾಜನಿಗೆ ತುಂಬ ಸರಳ. ವಿಭಿನ್ನ ಬಗೆಯ ಹೂವುಗಳ ಬಾಣ ಹೂಡಿ ನೇರವಾಗಿ ಶಿವನಿಗೆ ಗುರಿಯಿಟ್ಟು ಹೊಡೆಯಲಾರಂಭಿಸಿದ.ಕಾಮದೇವನು ಹೂ ಬಾಣಗಳು ಶಿವನ ಚಿತ್ತವನ್ನು ಘಾಸಿಗೊಳಿಸಿದವು.ಪರಶಿವನ ಕೋಪ

**ಹೋಳಿ ಹಬ್ಬದ ಆಚರಣೆಯ ತಯಾರಿ ಮಹಾಶಿವರಾತ್ರಿಯ ಮಾರನೇ ದಿನದಿಂದಲೇ ಆರಂಭವಾಗುತ್ತದೆ. ಹೋಳಿಯನ್ನು ಸಾಮಾನ್ಯವಾಗಿ ಎರಡು ದಿನ ಆಚರಿಸುತ್ತಾರೆ. ಮೊದಲ ದಿನ ಕಾಮದಹನವಾದರೆ ಎರಡನೇ ದಿನ ಬಣ್ಣ.**

ನೆತ್ತಿಗೇರಿತ್ತು. ತನ್ನ ಹಣೆಗಣ್ಣು ತೆರೆದೇ ಬಿಟ್ಟ.ಮನ್ಮಥ ಕ್ಷಣ ಮಾತ್ರದಲ್ಲಿ ಸುಟ್ಟು ಭಸ್ಮವಾದ.

ದೇವತಾಕಾರ್ಯಕ್ಕಾಗಿ ಕಾಮದೇವನು ತನ್ನ ಪ್ರಾಣವನ್ನೇ ಅರ್ಪಿಸಿದ.ಆದರೆ ಗಂಡನನ್ನು ಕಳೆದುಕೊಂಡ ಹೆಂಡತಿ ರತಿಗೆ ಆ ಆಘಾತವನ್ನು ತಡೆದುಕೊಳ್ಳಲಿಕ್ಕೆ ಆಗ ಲಿಲ್ಲ.ದುಃಖಿಸುತ್ತ ತನ್ನ ಮಾಂಗಲ್ಯಭಾಗ್ಯ ಉಳಿಸಿ ಕೊಡ ಬೇಕೆಂದು ಶಂಕರನಿಗೆ ಶರಣು ಬಂದಳು. ಸದಾ ಭಕ್ತ ಪ್ರಿಯ ಶಂಕರನು ಎಲ್ಲವನ್ನೂ ತಿಳಿದುಕೊಂಡ ಕಾಮನ ಮೇಲೆ ಕರುಣೆ ಮೂಡಿತು. ಶರಣು ಬಂದ ಕಾಮನ ಹೆಂಡತಿಯನ್ನು ಗಂಗಾಧರ ಬರಿಗೈಯಿಂದ ಕಳಿಸಲಿಲ್ಲ. 'ನಿನ್ನ ಗಂಡ ನಿನಗೆ ದೊರೆಯುತ್ತಾನೆ ಆದರೆ ಅನಂಗನ ರೂಪದಲ್ಲಿ ಅವನಿಗೆ ದೇಹವಿಲ್ಲ ಆದರೆ ಪ್ರತಿವರ್ಷ ಫಾಲ್ಗುಣ ಮಾಸದ ಹುಣ್ಣಿಮೆಯ 5 ನೇ ಅಂದರೆ ರಂಗಪಂಚಮಿಯಂದು ಒಂದು ದಿನ ಮಾತ್ರ ನಿನ್ನ ಗಂಡನನ್ನು ದೈಹಿಕವಾಗಿ ನೋಡಿ ಆನಂದಿಸಬಹುದು' ಎಂದು ಹೇಳಿ ಕಳಿಸುತ್ತಾನೆ. ಲೋಕ ಕಲ್ಯಾಣಕ್ಕಾಗಿ ಪರ್ವತರಾಜನ ಮಗಳು ಉಮಾ ಮತ್ತು ಮಹೇಶ್ವರರ ಮದುವೆ ಫಾಲ್ಗುಣ ಹುಣ್ಣಿಮೆಯ ದಿನ ನಡೆಯುತ್ತದೆ. ಮನ್ಮಥ ಅನಂಗನಾಗಿ ಸಕಲ ಜೀವಿ ಜಂತುಗಳಲ್ಲಿ ಸೇರಿಕೊಳ್ಳುತ್ತಾನೆ. ರಂಗ ಪಂಚಮಿಯ ದಿನ ದೇಹ ಪಡೆದ ಮನ್ಮಥ ರತಿಯೊಂದಿಗೆ ಸುಖಿಸಿ, ರಂಗಿನಾಟವಾಡಿ ಮರಳುತ್ತಾನೆ. ಅಂದಿನಿಂದ ಅನಂಗ-ಕಾಮನು-ಸರ್ವ ಜೀವಿಗಳಲ್ಲಿ ಅದರಲ್ಲೂ ಮಾನವರಲ್ಲಿ ಸದಾ ಜಾಗೃತನಾಗಿದ್ದಾನೆ.ಶಿವನು ಕಾಮನನ್ನು ದಹಿಸಿದ ಪ್ರಸಂಗದ ಸ್ಮರಣೆಯೇ ಹೋಳಿ.

ಹೋಳಿಯ ಆಚರಣೆಗೆ ಅತ್ಯಂತ ಪ್ರಾಚೀನ ಇತಿಹಾಸವಿದೆ.12ನೇ ಶತಮಾನಕ್ಕಿಂತಲೂ ಮೊದಲೇ ಇದ್ದ ರಾಜ ಜೀಮೂತವಾನನಿಂದ ಹೋಳಿ ಆಚರಣೆ ನಡೆದುಕೊಂಡು ಬಂದಿದೆ ಎನ್ನಲಾಗಿದೆ.ವಿಜಯನಗರದರಸರೂ ಹೋಳಿಯ ಆಚರಣೆಯನ್ನು ಅತ್ಯಂತ ಸಂಭ್ರಮದಿಂದ ಆಚರಿಸುತ್ತಿದ್ದರು. ಕನಕದಾಸರ 'ಮೋಹನ ತರಂಗಿಣಿ'ಯಲ್ಲಿ ಕಾಮನ ಹಬ್ಬದ ವರ್ಣಣೆಯಿದ್ದು,ಇದಕ್ಕೆ ವಿಜಯನಗರದರಸರ ಹೋಲಿ ಆಚರಣೆಯೇ ಪ್ರೇರಣೆ ಎಂದರೆ ತಪ್ಪಲ್ಲ. ಬಂಗಾಳದಲ್ಲೂ ಹೋಳಿಯು ಸಂಭ್ರಮದ ಹಬ್ಬವಾಗಿದ್ದು,ರವೀಂದ್ರನಾಥ ಠಾಗೋರ್‌ರ ಅನೇಕ ಕಾವ್ಯಗಳಲ್ಲಿ ಹೋಳಿಯ ಸುಂದರ ವರ್ಣನೆಗಳಿವೆ.

ಹೋಳಿ ಹಬ್ಬದ ಆಚರಣೆಯ ತಯಾರಿ ಮಹಾಶಿವರಾತ್ರಿಯ ಮಾರನೇ ದಿನದಿಂದಲೇ ಆರಂಭವಾಗುತ್ತದೆ. ಹೋಳಿಯನ್ನು ಸಾಮಾನ್ಯವಾಗಿ ಎರಡು ದಿನ ಆಚರಿಸುತ್ತಾರೆ. ಮೊದಲ ದಿನ ಕಾಮದಹನವಾದರೆ ಎರಡನೇ ದಿನ ಬಣ್ಣ. ರಂಗಿನಾಟದ ಹೆಸರು ಕೇಳಿದರೆ ಸಾಕು ಎಲ್ಲರ ಮನಗಳು ಪುಳಕಗೊಳ್ಳುತ್ತದೆ. ಹೋಳಿಯ ಉತ್ತಮ ಇನ್ನೂ ಎಳೆಂಟು ದಿನಗಳಿರುವಾಗಲೇ ಮಾರುಕಟ್ಟೆಯಲ್ಲಿ ಸಪ್ತವರ್ಣದ ಬಣ್ಣದ ಪುಡಿಗಳು, ಬಣ್ಣದ ನೀರು ತುಂಬುವ ಬಲೂನುಗಳು, ಪಿಚಕಾರಿಗಳ ಮಾರಾಟ ಭರದಿಂದ ನಡೆದಿರುತ್ತದೆ.

ಹೋಳಿ ಹಬ್ಬದ ಮೊದಲ ದಿನ ಅಂದರೆ ಹುಣ್ಣಿಮೆಯ ದಿನ ಸುಂದರವಾದ ಮಂಟಪದಲ್ಲಿ ಕಾಮದೇವನನ್ನು ಪ್ರತಿಷ್ಠಾಪಿಸುತ್ತಾರೆ.ಮೊದಲೇ ತಂದು ಗುಡ್ಡೆ ಹಾಕಿದ ಕುರುಳು, ಕಟ್ಟಿಗೆಗಳಿಗೆ ರಾತ್ರಿ ಹತ್ತು - ಹತ್ತೂವರೆವರೆಗೆ ಬೆಂಕಿ ಹಚ್ಚುತ್ತಾರೆ. ಆ ಬೆಂಕಿಯಲ್ಲಿ ಕಾಮನ ಮೂರ್ತಿಯನ್ನು ತಂದು ಹಾಕುತ್ತಾರೆ. ಇದೇ ಕಾಮದಹನ ಕ್ರಿಯೆ.ಉರಿಯುತ್ತಿರುವ ಬೆಂಕಿಯ ಸುತ್ತ ಹಾಡು ಹೇಳುತ್ತ ಕುಣಿಯುತ್ತಾರೆ. ಆ ಬೆಂಕಿಯಲ್ಲಿ ಕಡಲೆ ಸುಟ್ಟು



ತಿನ್ನುತ್ತಾರೆ. ಇದರಿಂದ ಹಲ್ಲುಗಳು ಗಟ್ಟಿಯಾಗುತ್ತದೆ ಎಂಬ ನಂಬಿಕೆ ಇದೆ.

### ಒಲವಿನ ಬಣ್ಣ

ಕೃಷ್ಣಪರಮಾತ್ಮನ ಬಾಲ್ಯದಲ್ಲಿ ನಡೆದ ಪ್ರಸಂಗವಿದು. ನಂದಗೋಕುಲದಲ್ಲಿ ಬಾಲಕೃಷ್ಣನು ರಾಧೆ ಹಾಗೂ ಗೋಪಾಲಕರೊಂದಿಗೆ ಬೆಳೆಯುತ್ತಿದ್ದಾಗ ತಾಯಿ ಯಶೋದೆಯನ್ನು ಕೇಳಿದನಂತೆ 'ಅಮ್ಮಾ ನಾನೇಕೆ ಕಪ್ಪು, ರಾಧೆ ಏಕೆ ಬೆಳ್ಳಗೆ? ಎಂದು ಪ್ರಶ್ನಿಸುತ್ತಾನೆ. ಆಗ ಯಶೋದೆ 'ನಿನಗೆ ಬೇಕಾದ ಬಣ್ಣಗಳನ್ನು ತಂದು ರಾಧೆಯ ಮೇಲೆ ಎರಚಿ ಬಿಡು ಎಲ್ಲ ಸರಿ ಹೋಗುತ್ತದೆ ಎಂದು ತಮಾಷೆ ಮಾಡಿದಳಂತೆ. ತಾಯಿಯ ಮಾತಿನಿಂದ ಪ್ರೇರಿತನಾದ ಕೃಷ್ಣ ಬಣ್ಣಗಳನ್ನು ತಂದು ರಾಧೆಯ ಮೇಲೆ ಎರಚಿದನಲ್ಲದೇ ಗೋಕುಲದಲ್ಲಿ ಓಕುಳಿ ಆಟ ಆಡಿದನಂತೆ. ಅದರ ಸೂಚಕವಾಗಿಯೇ ಹೋಳಿ ಹುಣ್ಣಿಮೆಯಂದು ಬಣ್ಣ ಓಕುಳಿ ಆಡುವುದು ಜಾರಿಗೆ ಬಂದಿತು ಎಂದೂ ಹೇಳಲಾಗಿದೆ.

ಹೋಳಿಯ ಆಚರಣೆಯ ನಿಜವಾದ ಖುಷಿ ಇರುವುದು ಬಣ್ಣದಾಟದಲ್ಲಿ. ಈ ದಿನ ಯಾರು ಯಾರಿಗೆ ಬೇಕಾದರೂ ಬಣ್ಣ ಹಚ್ಚಬಹುದು. ಬಣ್ಣದ ಮೋಹಕ್ಕೆ ಮರುಳಾಗದವರಾರು? ಎಲ್ಲರೂ ತಂತಮ್ಮ ಕೈಯಲ್ಲಿ ಬಗೆ ಬಗೆಯ ಬಣ್ಣ ಹಿಡಿದು ಪರಸ್ಪರರಿಗೆ ಬಣ್ಣ ಹಚ್ಚುತ್ತ, ಸಹೋದರತೆಯ ಭಾವನೆಯಿಂದ ಅಪ್ಪಿ ಕೊಳ್ಳುತ್ತ ಸಂಭ್ರಮಿಸುತ್ತಾರೆ. ಯುವಕರ ಗುಂಪು ತಮಟೆ ಬಾರಿ ಸುತ್ತ, ಕುಣಿಯುತ್ತ ಬೀದಿಯಲ್ಲಿ ಮೆರವಣಿಗೆ ಹೊರಟು ಪ್ರತಿ ಮನೆಯವರನ್ನು ಆತ್ಮೀಯತೆಯಿಂದ ಹೊರಗೆ ಕರೆದು, ಬಣ್ಣ ಹಚ್ಚಿ ಆಶೀರ್ವಾದ ಪಡೆಯುತ್ತಾರೆ. ಬಣ್ಣ ಅಭಿವೃದ್ಧಿ ಮತ್ತು ಖುಷಿಯ ಪ್ರತೀಕ. ಪ್ರತಿಯೊಬ್ಬರ ಬದುಕು ಪ್ರಗತಿ ಪಥದಲ್ಲಿ ಸಾಗುತ್ತಿರಲಿ ಎಂಬ ಆಶಯವೇ ಇಲ್ಲಿದೆ.ಹಿಂದಿನ ದ್ವೇಷಾಸೂಯೆಗಳನ್ನು ಮರೆತು ಒಂದಾಗಿ ಉತ್ಸಾಹದಿಂದ ಬಣ್ಣ ಆಡುವ ಸಂತಸದ ದಿನವಿದು.

ಹೋಳಿಯ ವಸಂತನಾಗಮನದ ಮುಂಬೆಳಗು, ಪ್ರಕೃತಿ ಹೊಸ ಚೈತನ್ಯ ಪಡೆಯುವ ಈ ಸಮಯದಲ್ಲಿ ಸರ್ವ ಜೀವಿಗಳು ನವ ಚೈತನ್ಯ ಪಡೆದು ಸಂಭ್ರಮಿಸುತ್ತವೆ. ನಾವೂ ಶುದ್ಧ ಮನಸ್ಕರಾಗಿ, ಕಾಮನನ್ನು ದಹಿಸೋಣ. ಆತ್ಮೀಯತೆಯಿಂದ ಪರಸ್ಪರ ಬಣ್ಣ ಹಚ್ಚಿಕೊಂಡು ಸಂಭ್ರಮಿಸೋಣ.



# ಸಪ್ತಗಿರಿ ವಾಸ

ಏ ಸಪ್ತಗಿರಿ ವಾಸ
ನಿನಗೆ ಪ್ರಿಯ ಅಲ್ಲವೇ ಶ್ರಾವಣ ಮಾಸ?
ಶ್ರೀ ಶ್ರೀನಿವಾಸ, ಸಪ್ತಗಿರಿ ವಾಸ
ಮಾಡಿಕೋ ಎನ್ನಯ ದೇಹ ನಿನ್ನ ನಿವಾಸ

ವಂದಿಪೆ ನಿನಗೆ ಸಪ್ತಗಿರಿ ವಾಸ
ಕಂಡೆನು ಒಂದು ಸುಂದರ ಕನಸ
ನನ್ನ ನಿವಾಸದಲ್ಲಿತ್ತು ನಿನ್ನೆ ನಿನ್ನ ವಾಸ
ಇದರಿಂದ ಎನಗಾಯಿತು ಅತ್ಯಂತ ಸಂತಸ

ತಿರುಮಲೆ ವಾಸ
ತಿರುಮಲೆಯಲ್ಲಿ ಇಲ್ಲ ಎಲ್ಲಿಯೂ ಕಡ್ಡಿಕಸ
ಪ್ರಸಾದ ರೂಪದಲಿ ನೀಡುತಿರುವೆ ಅನ್ನ, ಸಾರು,ರಸ
ಇದರ ಜೊತೆಗೆ ಪಲ್ಯ, ಮಜ್ಜಿಗೆ, ಪಾಯಸ

ಇದ ಸ್ವೀಕರಿಸಿದ ಮೇಲೆ ಮನದ ತುಂಬ ಸಂತಸ
ಒಮ್ಮೊಮ್ಮೆ ಅನಿಸುವುದು ಇಲ್ಲಿಯೇ ಇದ್ದರೆ ಹೇಗೆ ಪ್ರತಿದಿವಸ?
ನಿನ್ನ ದರ್ಶನ ಪಡೆಯಲು ಭಕ್ತರು ಪಡುವರು ಸಾಹಸ
ಬಾಲರು, ವಯಸ್ಸಾದವರು ಮಾಡಬೇಕಾಗುವುದು ದುಸ್ಸಾಹಸ

ನಿನ್ನ ದರ್ಶನವು ಆದೊಡೆ ನೀಗುವುದು ಆಯಾಸ
ನಿನ್ನ ದರ್ಶನವ ಪಡೆಯಲು ಯಾರಿಗೂ ಆಗದಿರಲಿ ಪ್ರಯಾಸ
ನನ್ನ ಜೀವನದಲಿ ಕಂಡೆನು ಯಶಸ್ಸ
ನಾ ಎಂದೂ ಮಾಡದೇ ಉಪವಾಸ.

- ಕೆ.ವಿ. ಲಕ್ಷ್ಮಣಮೂರ್ತಿ



# ಶ್ರೀ ಮಾತಾ ಲಲಿತಾಂಬಿಕಾಯೈ ನಮಃ

ಬಿ.ಆರ್. ಶ್ರೀಕಂಠಯ್ಯ

ಶ್ರೀ ಲಲಿತಾ ಸಹಸ್ರನಾಮದ ಮೊದಲನೆಯ ನಾಮ "ಶ್ರೀ ಮಾತ್ರೇ ನಮಃ" ಮತ್ತು ಕೊನೆಯ ನಾಮ "ಲಲಿತಾಂಬಿಕಾಯೈ ನಮಃ". ಸ್ತೋತ್ರದಲ್ಲಿ, ಮೊದಲನೆಯ ಸ್ತೋತ್ರ - "ಶ್ರೀ ಮಾತಾ ಶ್ರೀ ಮಹಾರಾಜ್ಞೀ ಶ್ರೀಮತ್ಸಿಂಹಾಸನೇಶ್ವರೀ" ಮತ್ತು ಕೊನೆಯ ಸ್ತೋತ್ರ - "ಶ್ರೀ ಶಿವಾ ಶಿವಶಕ್ತ್ಯೈಕ್ಯರೂಪಿಣೀ ಲಲಿತಾಂಬಿಕಾ".ಈ ಶ್ರೀ ಲಲಿತಾಂಬಿಕೆಯು ಎಲ್ಲರಿಗೂ ಮಾತೃ ಸ್ವರೂಪಿಣಿ. ಶಿವ ಮತ್ತು ಶಕ್ತಿಗೆ ಭೇದವಿಲ್ಲ, ಶಿವ ಇಲ್ಲದೆ ಶಕ್ತಿ ಇಲ್ಲ ಮತ್ತು ಶಕ್ತಿ ಇಲ್ಲದೆ ಶಿವ ಇಲ್ಲ. ಆದರಿಂದಲೇ, ಅವನು ಅರ್ಧನಾರೀಶ್ವರ."ಶ್ರೀಕಂಠಾರ್ಧಶರೀರಿಣಿ" "ಮಹಾದೇವ ಸಮಾಯುಕ್ತಶರೀರಾಯೈ ನಮೋ ನಮಃ" ಇನ್ನು ಸೌಂದರ್ಯ ಲಹರಿಯ ಮೊದಲನೆ ಶ್ಲೋಕವೇ "ಶಿವಃ ಶಕ್ತ್ಯಾ ಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಮ್...." ದೇವಿಯ ಹಲವು ನಾಮಗಳಾದ-ಶ್ರೀ ಮಾತಾ, ರಾಜರಾಜೇಶ್ವರಿ, ಬಾಲ ತ್ರಿಪುರಸುಂದರಿ,ಇತ್ಯಾದಿ ಹೆಸರುಗಳಲ್ಲಿ ಒಂದು ಹೆಸರು "ಲಲಿತಾ"."ಲೋಕಾನತೀತ್ಯ ಲಲೀತೇ ಲಲಿತಾ ತೇನ ಚೋಚ್ಯತೇ". ಬಾಲತ್ರಿಪುರಸುಂದರಿ ಫೋಟೋ ನೋಡಲು ಬಹಳ ಸುಂದರವಾಗಿದೆ ಮತ್ತು ಬಹಳ ಆನಂದವನ್ನು ಕೊಡುತ್ತದೆ.(ದೇವಿಯನ್ನು ಕಂಡ ಆನಂದವೇ, ಶ್ರೀ ಶಂಕರರಿಗೆ ಸೌಂದರ್ಯಲಹರಿ ರಚನೆಗೆ ಪ್ರೇರಣೆ ಇರಬಹುದು). ಶ್ರೀ ಪರಮೇಶ್ವರಿಯು ಸಮಸ್ತ ಲೋಕಗಳನ್ನು ವ್ಯಾಪ್ತಿರೂಪಗಳಾಗಿರುವುದರಿಂದ ಶ್ರೀ ಲಲಿತಾಂಬಿಕೆಯಾಗಿರುವಳು. ಈ ನಮ್ಮಮ್ಮ "ಅನೇಕ ಕೋಟಿಬ್ರಹ್ಮಾಂಡಜನನಿ" ಲೆಕ್ಕವಿಲ್ಲದಷ್ಟು ಇರುವ ಬ್ರಹ್ಮಾಂಡಕ್ಕೆ ತಾಯಿ. ಶ್ರೀ ಲಲಿತಾ ಸಹಸ್ರನಾಮಕ್ಕೂ ಸೌಂದರ್ಯಲಹರಿಗೂ ವ್ಯತ್ಯಾಸ ಏನು ಕಾಣುವುದಿಲ್ಲ. ಲಲಿತಾಸಹಸ್ರನಾಮ, ದುರ್ಗಾಸಪ್ತಶತಿ ಮತ್ತು ಸೌಂದರ್ಯಲಹರಿ, ಇವು ಮೂರು " ಶ್ರೀ ವಿದ್ಯಾ" ಎಂಬುದಾಗಿ ಹೇಳುತ್ತಾರೆ.

ಒಂದು ಸಾವಿರ ಲಲಿತೆಯ ನಾಮಗಳು ೧೮೩ ಸ್ತೋತ್ರದಲ್ಲಿ ಅಡಕವಾಗಿದೆ. (ಸರಾಸರಿ ೫-೬ ನಾಮಗಳ ಗುಚ್ಛ ಒಂದು ಸ್ತೋತ್ರದಲ್ಲಿ). ಇದು ಹೇಳಲು ಸುಲಭವಾಗಿದೆ ಮತ್ತು ಅರ್ಥವಾಗುತ್ತದೆ. ಶ್ರೀ ಲಲಿತಾ ಸಹಸ್ರನಾಮದ ಕೊನೆಯಲ್ಲಿ ಇತಿ ಶ್ರೀ ಬ್ರಹ್ಮಾಂಡಪುರಾಣೇ ಉತ್ತರಖಂಡೇ ಶ್ರೀ ಹಯಗ್ರೀವಾಗಸ್ತ್ಯ ಸಂವಾದೇ ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರ ಕಥನಂನಾಮ ದ್ವಿತೀಯೋಧ್ಯಾಯಃ ಎಂಬುದಾಗಿ ಸಮಾಪ್ತಿಯಾಗುತ್ತದೆ.ಶ್ರೀ ಲಲಿತಾಸಹಸ್ರನಾಮವು ಬ್ರಹ್ಮಾಂಡ ಪುರಾಣದ ಉತ್ತರಖಾಂಡದಲ್ಲಿದೆ. ಶ್ರೀ ಹಯಗ್ರೀವ ಸ್ವಾಮಿಯಿಂದ ಅಗಸ್ತ್ಯ ಮಹರ್ಷಿಗಳಿಗೆ ಉಪದೇಶಿಸಲ್ಪಟ್ಟಿತು ಎಂದು ತಿಳಿದು ಬರುತ್ತದೆ. ಶ್ರೀ ಮಹಾವಿಷ್ಣುವೇ ಹಯಗ್ರೀವರ ರೂಪ ಸಾಮಾನ್ಯವಾಗಿ ಇದರ ಕಥೆ ಎಲ್ಲರಿಗೂ ತಿಳಿದಿರುತ್ತದೆ. ಇಲ್ಲಿ ಅಗಸ್ತ್ಯರು ಶ್ರೀ ಹಯಗ್ರೀವರನ್ನು ಕೇಳುತ್ತಾರೆ. ನೀವು ನನಗೆ ಶ್ರೀ ಮಾತಾ ಲಲಿತೆಯ ಅವತಾರ, ಪಟ್ಟಾಭಿಷೇಕ, ರಾಕ್ಷಸರ ಸಂಹಾರ ಎಲ್ಲವನ್ನು ಹೇಳಿದಿರಿ ಆದರೆ ಶ್ರೀ ಲಲಿತಾದೇವಿಯ ಸಹಸ್ರನಾಮವನ್ನು ಹೇಳಲಿಲ್ಲ. ನೀವು ಮರೆತಿರೋ ಅಥವಾ ನನಗೆ ಅರ್ಹತೆಯಿಲ್ಲವೋ ಎಂದು ಕೇಳಲಾಗಿ, ಹಯಗ್ರೀವರು ಇದು ಬಹಳ ರಹಸ್ಯವಾದುದು, ಎಲ್ಲಕ್ಕಿಂತಲೂ ಬಹಳ ಶ್ರೇಷ್ಠವಾದುದು. ಇದನ್ನು ಭಕ್ತಿಯುಳ್ಳ ಶಿಷ್ಯನಿಗೆ ಮಾತ್ರ ಹೇಳಬೇಕು

ಮತ್ತು ಭಕ್ತನಲ್ಲದವನಿಗೂ, ದುಷ್ಟನಿಗೂ, ನಂಬುಗೆಯಿಲ್ಲದ ವನಿಗೂ, ಇದನ್ನು ಉಪದೇಶ ಮಾಡಬಾರದು ಎಂದು ಹೇಳುತ್ತಾರೆ.ಆದರೆ ನಿನ್ನ ಭಕ್ತಿ ಮತ್ತು ಶ್ರದ್ಧೆಗೆ ಆನಂದಿಸಿ, ಪವಿತ್ರವಾದ ಸಹಸ್ರನಾಮವನ್ನು ನಿನಗೆ ಉಪದೇಶಿಸುತ್ತೇನೆ ಎಂದು ಉಪದೇಶಿಸಲು ಮುಂದಾಗುತ್ತಾರೆ.

ಆಕೆಯನ್ನು, ಯಾರು ಒಂಬತ್ತು ಆವರಣಗಳುಳ್ಳ (೪ ಶಿವ ಚಕ್ರ, ೫ ಶಕ್ತಿ ಚಕ್ರ) ಶ್ರೀಚಕ್ರವನ್ನು ಬಿಲ್ವಪತ್ರೈಶ್ಚಕ್ರರಾಜೇ ಯೋ ರ್ಚಯೇಲಲಿತಾಂಬಿಕಾಮ್। ಪದ್ಮೈರ್ವಾತುಲಸೀ ಪುಷ್ಪೈ ರೇಭಿರ್ನಾಮಸಹಸ್ರಕೈಃ

ಸದ್ಯಃ ಪ್ರಸಾದಂ ಕುರುತೇ ತಸ್ಯ ಸಿಂಹಾಸನೇಶ್ವರೀ।
ಚಕ್ರಾಧಿರಾಜಮಭ್ಯರ್ಚ್ಯ ಜಪ್ತ್ವಾ ಪಂಚದಶಾಕ್ಷರೀಮ್ ॥
ಜಪಾಂತೇ ಕೀರ್ತಯೇನ್ನಿತ್ಯಮಿದಂ ನಾಮ ಸಹಸ್ರಕಮ್।
ಜಪಪೂಜಾದ್ಯಶಕ್ತಶ್ಚೇತ್ ಪಠೇನ್ನಾಮ ಸಹಸ್ರಕಮ್ ॥

ಬಿಲ್ವ, ತಾವರೆ, ತುಳಸಿ ಮತ್ತು ಹೂವುಗಳಿಂದ ಅರ್ಚಿಸಿ, ಸಹಸ್ರನಾಮವನ್ನು ಪಾರಾಯಣೆ ಮಾಡಿದರೆ, ಆಕೆ ಎಲ್ಲವನ್ನೂ ಕೊಟ್ಟು ಕಾಪಾಡುತ್ತಾಳೆ. ಶ್ರೀಚಕ್ರವನ್ನು ಭೂರ್ಜ ಪತ್ರ, ಸುವರ್ಣಾದಿಲೋಹಗಳು, ಸ್ಪಟಿಕ, ಪದ್ಮರಾಗ, ಕುಂಕುಮ, ಶ್ರೀಗಂಧ ಮುಂತಾದುವುಗಳಲ್ಲಿ ರಚಿಸಿ ವಿವಿಧ ಆಕಾರಗಳಲ್ಲಿ, ಅವರವರ ಸಂಪ್ರದಾಯ ಮತ್ತು ಸಂದರ್ಭ ಗಳಲ್ಲಿ ಪೂಜಿಸುವುದನ್ನು ನಾವು ಕಾಣಬಹುದು. ಜಪ, ಪೂಜೆ ಮಾಡಲು ಸಾಧ್ಯವಿಲ್ಲದಿದ್ದರೆ, ಅನನ್ಯ ಭಕ್ತಿಯಿಂದ ಸಹಸ್ರ ನಾಮವನ್ನು ಪಠಣಮಾಡಿದರೂ ಲಲಿತಾಂಬಿಕೆ ತೃಪ್ತಿಯಾಗು ವಳು, ಮತ್ತು ಅತ್ಯಂತ ಫಲಕಾರಿ. ಇದು ನನ್ನ ಮಾತಲ್ಲ ಇದು ದೇವಿಯ ಮಾತು ಎಂಬುದಾಗಿ ಹಯಗ್ರೀವರು ಅಗಸ್ತ್ಯರಿಗೆ ಈ ಲಲಿತಾ ಸಹಸ್ರನಾಮದ ರಹಸ್ಯವನ್ನು ಉಪ ದೇಶಿಸುತ್ತಾರೆ ಎಂದು ತಿಳಿದು ಬರುತ್ತದೆ.ಈ ದೃಷ್ಟಿಯಿಂದ,ಈ ಸ್ತೋತ್ರ ಬಹಳ ಪವಿತ್ರವಾದುದು ಮತ್ತು ಇದನ್ನು ಗುರು ಮುಖೇನ ಉಪದೇಶ ಪಡೆಯಬೇಕು ಎಂಬುದನ್ನು ನಾವು ಹಯಗ್ರೀವ ಮತ್ತು ಅಗಸ್ತ್ಯರ ಸಂವಾದದಿಂದ ತಿಳಿಯಬಹುದು. ಆದರೆ ಈಗ,ಕೆಲವು ಕಡೆ “ಧ್ವನಿಸುರಳಿ”ಎಂಬ ಗುರುವಿನಿಂದ ಕಲಿತು ಪಾರಾಯಣೆ ಮಾಡುವುದನ್ನು ನಾವು ಕಾಣಬಹುದು. ಆದರೆ ಇದು ಎಷ್ಟು ಫಲಕಾರಿ ಎಂಬುದು ಅವರವರಿಗೆ ಸೇರಿದ್ದು. ವಿಸ್ತಾರವಾದ ಶ್ರೀ ಚಕ್ರಪೂಜೆ ಮತ್ತು ನವಾವರಣ ಪೂಜೆ ಸಾಮಾನ್ಯವಾಗಿ “ಶ್ರೀ ವಿದ್ಯಾ ಉಪಾಸಕರು”, ಪ್ರಸಿದ್ಧವಾದ ಶಕ್ತಿ ದೇವತಾ ಕ್ಷೇತ್ರಗಳಲ್ಲಿ ಮತ್ತು ಶ್ರೀ ಶಂಕರ ಪೀಠಗಳಲ್ಲಿ ಅಲ್ಲಲ್ಲಿಯ ಗುರುಗಳು ತಾವೇ ಸ್ವತಹ ಶ್ರೀಚಕ್ರಾ ರಾಧನೆ ಮಾಡುವ ಸಂಪ್ರದಾಯವನ್ನು ನಾವು ನೋಡ ಬಹುದು. ಮನೆಗಳಲ್ಲಿಯೂ ಪೂಜೆಮಾಡುವಾಗ ಶ್ರೀ ಸೂಕ್ತ, ದುರ್ಗಾಸೂಕ್ತಸಹಿತ ಸಂಪ್ರದಾಯಬದ್ಧವಾಗಿ ಅಭಿಷೇಕ ವನ್ನು ಮಾಡುವುದನ್ನು ನಾವು ಕಾಣಬಹುದು.ಪಂಡಿತರ ಮತ್ತು ದೇವೀ ಆರಾಧಕರ ಪ್ರಕಾರ, ಶ್ರೀ ಚಕ್ರಸ್ವರೂಪವನ್ನು ರೂಪಿ ಸುವ ಈ ಶ್ಲೋಕವನ್ನು ಹೇಳಿಕೊಂಡರೆ ಫಲದಾಯಕ ಎಂದು ಅಪ್ಪಣೆಕೊಡಿಸಿದ್ದಾರೆ.

“ಬಿಂದು ತ್ರಿಕೋಣ, ವಸುಕೋಣ, ದಶಾರಯುಗ್ಮ,
ಮನ್ವಸ್ತ್ರ, ನಾಗದಳ ಷೋಡಶ ಪತ್ರಯುಕ್ತಂ,
ಮೃತ್ತತ್ರಯಂಚ ಧರಣೀಸದನ ತ್ರಯಂಚ ಶ್ರೀ
ಚಕ್ರರಾಜ ಉದಿತಃ ಪರದೇವತಾಯಾ”

ಶ್ರೀ ಶಂಕರಾಚಾರ್ಯರು,ತಮ್ಮ ದಿಗ್ವಿಜಯ ಯಾತ್ರೆ ಯಲ್ಲಿ, ಎಲ್ಲೆಲ್ಲಿ ತಾಮಸ ಪೂಜೆ ನಡೆಯುತ್ತಿತ್ತೋ ಅಲ್ಲಲ್ಲಿ ಸಾತ್ವಿಕ ಪೂಜೆಯನ್ನು ಆರಂಭಿಸಿ ಶ್ರೀ ಚಕ್ರಸ್ಥಾಪನೆಯನ್ನು ಮಾಡಿದರೆಂಬುದು ಎಲ್ಲರಿಗೂ ತಿಳಿದ ವಿಷಯ. ಮಧುರೆಯ ಮೀನಾಕ್ಷಿ ದೇವಿಯ ಸನ್ನಿಧಿಯಲ್ಲಿ ಶ್ರೀ ಚಕ್ರಸ್ಥಾಪನೆ ಮಾಡಿ, ತಾಮಸ ರೂಪವಾದ ದೇವಿಯನ್ನು ಸಾತ್ವಿಕ ರೂಪಕ್ಕೆ ಶ್ರೀ ಶಂಕರರು ತಂದರು ಎಂಬುದಾಗಿ ನಮಗೆ ತಿಳಿದು ಬರುತ್ತದೆ. ಅದೇ ರೀತಿ ಕಾಂಚಿಕ್ಷೇತ್ರದಲ್ಲಿ ಶ್ರೀ ಚಕ್ರಸ್ಥಾಪನೆ ಮಾಡಿದರು ಎಂಬುದು ಶ್ರೀ ಶಂಕರಾಚಾರ್ಯರ ಅಷ್ಟೋತ್ತರದಲ್ಲಿ - “ಕಾಂಚ್ಯಾಂ ಶ್ರೀ ಚಕ್ರರಾಜಾಖ್ಯ ಯಂತ್ರಸ್ಥಾಪನದೀಕ್ಷಿತಾಯ ನಮಃ”ಎಂಬುದನ್ನು ನಾವು ಕಾಣಬಹುದು. ಹಾಗೆಯೇ ಕೊಲ್ಲೂರು ಮತ್ತು ಶೃಂಗೇರಿ ಕ್ಷೇತ್ರಗಳಲ್ಲಿಯೂ ಶ್ರೀಚಕ್ರ ಸ್ಥಾಪನೆ ಮಾಡಿದರು.

ಇನ್ನು ನಾವು ಯಾವುದೇ, ದೇವ ದೇವಿಯರ, ಅಷ್ಟೋ ತ್ತರ,ಮತ್ತು ಸಹಸ್ರನಾಮಗಳನ್ನು ಪಾರಾಯಣ ಮಾಡಿದರೆ, ನಮಗೆ ಬಹಳ ಮುಖ್ಯವಾದ ಉಪಯೋಗಗಳು ಆಗುತ್ತದೆ ಎಂಬುದು ನನ್ನ ಅನುಭವ. ಶ್ರೀ ಲಲಿತೋಪಾಖ್ಯಾನವನ್ನು ಓದಿದಾಗಲೂ ನಮಗೆ ಒಂದು ಆನಂದ, ತೃಪ್ತಿ ಮತ್ತು ನೆಮ್ಮದಿ ಸಿಕ್ಕುತ್ತದೆ ಎಂದು ನನ್ನ ಅನಿಸಿಕೆ. ಶ್ರೀ ಲಲಿತಾಸಹಸ್ರನಾಮ ಮತ್ತು ಸೌಂದರ್ಯಲಹರಿಗೂ ಬಹಳ ಹತ್ತಿರದ ಸಂಬಂಧ ವಿದೆ.

ಯಾವುದೇ ಅಷ್ಟೋತ್ತರ ಮತ್ತು ಸಹಸ್ರನಾಮಗಳನ್ನು ನೋಡಿದಾಗ ಅಯಾಯ ದೇವತೆಗಳ ಮಹಿಮೆ, ಪರಿಚಯ ಮತ್ತು ಅನೇಕ ವಿಚಾರಗಳು ನಮಗೆ ತಿಳಿಯುತ್ತದೆ. ಶ್ರೀ ವೇಂಕ ಟೇಶ್ವರ ಅಷ್ಟೋತ್ತರಗಳಲ್ಲಿ -

ಓಂ ಉತ್ತುಂಗಾಚಲಶೃಂಗಾಗ್ರವಿಹಾರಿಣೇ ನಮಃ, ಓಂ ಸಿಂಹಾಚಲೇಶ್ವರಾಯ ನಮಃ, ಓಂ ಅಂಜನಾದ್ರಿಪತಯೇ ನಮಃ,ಓಂ ಶ್ರೀ ಮದಾನಂದನಿಲಯ ವಿಮಾನಾಂತರ್ವಿಭೂಷಣಾಯ ನಮಃ, ಓಂ ದೃಷ್ಟಿಚಿತ್ತಾಪಹಾರಿಣೇ ನಮಃ, ಓಂ ಆರ್ತತ್ರಾಣಪರಾಯಣಾಯ ನಮಃ, ಇತ್ಯಾದಿ.

ನಾವು ಅಡಿಗಡಿಗೆ ತಿರುಮಲೆಯೊಡೆಯನ ಸೇವೆಗೆಂದು ಹೋಗುತ್ತಿರುವಾಗ ಮೂಡಿಕೊಂಡದ್ದು ಇದು. ಇದು ಮೂರ್ತಿಯ ಸೌಂದರ್ಯವನ್ನೂ ಸ್ವಾರಸ್ಯವನ್ನೂ ಕುರಿತಂತೆಯೇ ಇದೆ ಎಂಬ ಭಾವನೆ ಬರುತ್ತದೆ.

ಇನ್ನು, ಶ್ರೀ ಲಲಿತಾ ಅಷ್ಟೋತ್ತರ, ತ್ರಿಶತಿ, ಸಹಸ್ರನಾಮಗಳನ್ನು, ನಾವು ಸಾಮಾನ್ಯರಂತೆ ನೋಡಿದರೆ, ನಮಗೆ ಬೇಕಾದಷ್ಟು ವಿಷಯಗಳು ಮತ್ತು ಅದರ ಮಹಿಮೆ ತಿಳಿಯುತ್ತದೆ. ಇಲ್ಲಿ ಕೆಲವು ನಾಮಗಳನ್ನು ಆಯ್ದು ಕೊಡಲಾಗಿದೆ. ಇಲ್ಲಿ ದೇವಿಯ ಜನ್ಮ,ವಾಸಸ್ಥಾನ, ರೂಪ, ಆಭರಣ, ಚಕ್ರಗಳ ವಿಚಾರ, ಮಂತ್ರ, ತಂತ್ರ, ಯಂತ್ರಗಳ ಬಗ್ಗೆ, ಭಕ್ತರಿಂದ - ಭಕ್ತಿಯಿಂದ ಕೊಡುವ ಇಷ್ಟವಾದ ನೈವೇದ್ಯದ ಸ್ವೀಕಾರದ ಬಗ್ಗೆ ಇತ್ಯಾದಿ. ಈ ನಾಮಗಳ ಸಾಮಾನ್ಯ ಅರ್ಥವನ್ನು ತಿಳಿದುಕೊಂಡರೆ ಅತ್ಯಂತ ಫಲಕಾರಿ ಮತ್ತು ನಮಗೆ ಹೆಚ್ಚಿನ ಆಸಕ್ತಿ ಬರುತ್ತದೆ. ನಾಮಗಳನ್ನು ಹೇಳುವಾಗ ನಿಧಾನವಾಗಿ ಮತ್ತು ಸ್ವಚ್ಛವಾಗಿ ಹೇಳಬೇಕು. ಆಗಲೇ ಅದು ಫಲಕಾರಿ ಮತ್ತು ಆನಂದ. ಯಾವುದೇ ಮಂತ್ರ (ರುದ್ರ), ಸ್ತೋತ್ರ ಅಥವಾ ಸಹಸ್ರನಾಮ ಪಾರಾಯಣೆ ಮಾಡುವಾಗ ಉಸಿರಾಟದ ನಿಯಂತ್ರಣ ಇರುತ್ತದೆ. ಇದು ಒಂದು ರೀತಿಯ ಪ್ರಾಣಾಯಾಮ. ಆರೋಗ್ಯದ ದೃಷ್ಟಿಯಿಂದ, ಈ ಸಹಸ್ರನಾಮವನ್ನು ನಿಧಾನವಾಗಿ ಕ್ರಮಬದ್ಧವಾಗಿ ಪಾರಾಯಣೆ ಮಾಡಿದರೆ, ಈಗ ಕಾಡುತ್ತಿರುವ ಅನೇಕ ಕಾಯಿಲೆಗಳನ್ನು ನಿಯಂತ್ರಿಸಬಹುದು ಮತ್ತು ತಡೆಯಬಹುದು ಎಂಬುದು ಅನುಭವಸ್ಥರಮಾತು ಬಲ್ಲವರು ಹೇಳುತ್ತಾರೆ, ಇದು ಸುಮಾರು ೫-೬ ಕಿಲೋಮೀಟರ್ ನಡಿಗೆಗೆ ಸಮ.

ಶ್ರೀ ಲಲಿತಾ ತ್ರಿಶತೀ (೩೦೦ ನಾಮಗಳು) - ಇಲ್ಲಿ ನಾವು ಒಂದು ವಿಶೇಷತೆಯನ್ನು ಕಾಣಬಹುದು. ಇಲ್ಲಿನ ಅಕ್ಷರ ಜೋಡಣೆ.

ಕ/ಕಾ: ೬೦ ನಾಮಗಳು; ಏ:೨೦ ನಾಮಗಳು ಈ :೨೦ ನಾಮಗಳು; ಲ:೬೦ ನಾಮಗಳು; ಹ್ರೀಂ:೬೦ ನಾಮಗಳು ; ಹ:೪೦ ನಾಮಗಳು ಸ:೪೦ ನಾಮಗಳು =ಒಟ್ಟು ೩೦೦ ನಾಮಗಳು.

ಶ್ರೀ ಶಂಕರಭಗವತ್ಪಾದರು, ಶ್ರೀ ಲಲಿತಾ ತ್ರಿಶತೀ ಭಾಷ್ಯದಲ್ಲಿ, ಈ ಅಕ್ಷರ ಶಕ್ತಿ, ರಹಸ್ಯ, ಪ್ರಭಾವವನ್ನು ಬಹಳ ವಿಸ್ತಾರವಾಗಿ ತಿಳಿಸಿದ್ದಾರೆ ಮತ್ತು ಈ ರಹಸ್ಯವನ್ನು ಹಯಗ್ರೀವರು, ಅಗಸ್ತ್ಯರಿಗೆ ಉಪದೇಶಿಸಿದರು ಎಂದು ತಿಳಿದು ಬರುತ್ತದೆ. ಇದನ್ನು ಸ್ವಲ್ಪ ಓದಿದೆ. ಆದರೆ ನನ್ನಂತಹ ಸಾಮಾನ್ಯನಿಗೆ ಇದರ ಅಂತರಾರ್ಥ ಅರ್ಥವಾಗಿಲ್ಲ.

ಕಲ್ಯಾಣ್ಯೈನಮಃ, ಕಲ್ಯಾಣಶೈಲ ನಿಲಯಾಯ ನಮಃ ಕದಂಬಕಾನನಾವಾಸಾಯೈ ನಮಃ, ಕಲಿದೋಷ ಹರಾಯ ನಮಃ, ಕಲ್ಮಷಘ್ನ್ಯೈ ನಮಃ, ಕದಂಬಕುಸುಮಪ್ರಿಯಾಯ ನಮಃ, ಕಂದರ್ಪವಿದ್ಯಾಯ್ಯೈ ನಮಃ, ಕಪು ವಿಗ್ರಹಾಯ ನಮಃ, ಕರ್ಮಾದಿಸಾಕ್ಷಿಣ್ಯೈ ನಮಃ, ಕಾರಯಿತ್ರ್ಯೈ ನಮಃ, ಏಕಭಕ್ತಿ ಮದರ್ಚಿತಾಯೈ ನಮಃ ಏನಃ ಕೂಟವಿನಾಶಿನ್ಯೈ ನಮಃ ಏಕೈಶ್ವರ್ಯಪ್ರದಾಯಿನ್ಯೈ ನಮಃ, ಈಶಿತ್ರ್ಯೈ ನಮಃ ಈಪ್ಸಿತಾರ್ಥಪ್ರದಾಯಿನ್ಯೈ ನಮಃ, ಈತಿಬಾಧಾವಿನಾಶಿನ್ಯೈ ನಮಃ, ಲಲಿತಾಯೈ ನಮಃ,ಲಸದ್ದಾಡಿಮಪಾಟಲೈ ನಮಃ, ಲಕ್ಷಕೋಟ್ಯಂಡನಾಯಿಕಾಯೈ ನಮಃ, ಲಲಾಮರಾಜದಲಿಕಾಯೈ ನಮಃ, ಲಂಬೋದರ ಜನನ್ಯೈ ನಮಃ, ಹ್ರೀಂಕಾರ ಪೂಜ್ಯಾಯೈ ನಮಃ, ಹರಾರಾಧ್ಯಾಯೈ ನಮಃ, ಹರಿಬ್ರಹ್ಮೇಂದ್ರ ವಂದಿತಾಯ ನಮಃ,ಹರ್ಯಕ್ಷವಾಹನಾಯ ನಮಃ, ಹಂಸ ವಾಹನಾಯ ನಮಃ, ಹರಿದ್ರಕುಂಕುಮಾದಿಗ್ಧಾಯೈ ನಮಃ,



ಸರ್ವಮಾತ್ರೇ ನಮಃ, ಕಾರುಣ್ಯವಿಗ್ರಹಾಯ ನಮಃ, ಹರಿತ್ವತಿ ಸಮಾರಾಧ್ಯಾಯೈ ನಮಃ,ಲಘುಸಿದ್ಧಿದಾಯೈ ನಮಃ, ಲಕ್ಷ್ಮಣಾಗ್ರಜಪೂಜಿತಾಯೈ ನಮಃ,ಲಬ್ಧಭಕ್ತಿಸುಲಭಾಯೈ ನಮಃ, ಸದ್ಗತಿದಾಯಿನ್ಯೈ ನಮಃ,ಸರ್ವಪ್ರಪಂಚ ನಿರ್ಮಾತ್ರ್ಯೈ ನಮಃ,...

## ಶ್ರೀ ಲಲಿತಾ ಅಷ್ಟೋತ್ತರ

ರಜತಾಚಲಶೃಂಗಾಗ್ರಮಧ್ಯಸ್ಥಾಯೈ ನಮೋ ನಮಃ, ಶಶಾಂಕಶೇಖರ ಪ್ರಾಣವಲ್ಲಭಾಯೈ ನಮೋ ನಮಃ, ಸದಾಪಂಚದಶಾತ್ಮೈ ಕ್ಯಸ್ವರೂಪಾಯೈ ನಮಃ, ವಜ್ರಮಾಣಿಕ್ಯ ಕಟಕಕಿರೀಟಾಯೈ ನಮಃ,ಕಸ್ತೂರೀತಿಲಕೋಲ್ಲಾಸನಿಟಿ ಲಾಯೈ ನಮೋ ನಮಃ, ಭಸ್ಮರೇಖಾಂಕಿತಲಸನ್ಮಸ್ತ ಕಾಯೈ ನಮೋ ನಮಃ, ಶರಚ್ಚಾಂಪೇಯಪುಷ್ಪಾಭನಾಸಿಕಾಯೈ ನಮೋ ನಮಃ,ಲಸತ್ಕಾಂಚನತಾಟಂಕಯುಗಲಾಯೈ ನಮೋ ನಮಃ,ಗಿರೀಶಬದ್ಧಮಾಂಗಲ್ಯ ಮಂಗಲಾಯೈ ನಮೋ ನಮಃ, ಪದ್ಮಪಾಂಕುಶಲಸತ್ಕರಾಬ್ಜಾಯೈ ನಮೋ ನಮಃ, ಪದ್ಮಕೈರವ ಮಂದಾರಸುಮಾಲಿನ್ಯೈ ನಮೋ ನಮಃ, ರಮಣೀಯಚತು ರ್ಬಾಹುಸಂಯುಕ್ತಾಯೈ ನಮೋ ನಮಃ, ಪಾರಿಜಾತಗುಣಾಧಿ ಕ್ಯಪದಾಬ್ಜಾಯೈ ನಮೋ ನಮಃ ಭಕ್ತ ರಕ್ಷಣದಾಕ್ಷಿಣ್ಯ ಕಟಾಕ್ಷಯೈ ನಮೋ ನಮಃ ಲೀಲಾಕಲ್ಪಿತ ಬ್ರಹ್ಮಾಂಡಮಂಡ ಲಾಯೈ ನಮೋ ನಮಃ,ದೇವರ್ಷಿಭಿಸ್ತೂಯಮಾನವೈಭಾ ವಾಯೈ ನಮೋ ನಮಃ ಚಕ್ರರಾಜ ಮಹಾಯಂತ್ರ ಮಧ್ಯವರ್ತಿನ್ಯೈ ನಮೋ ನಮಃ, ವಂದಾರುಜನ ಸಂದೋಹ ವಂದಿತಾಯೈ ನಮೋ ನಮಃ, ಅಂತರ್ಮುಖ ಜನಾನಂದ ಫಲದಾಯೈ ನಮೋ ನಮಃ,ರತ್ನ ಚಿಂತಾ ಮಣಿಗೃಹ ಮಧ್ಯಾಸ್ಥಾಯೈ ನಮೋ ನಮಃ,ಮಹಾಪಾಪೌ ಘಪಾಪಾನಾಂ ವಿನಾಶಿನ್ಯೈ ನಮೋ ನಮಃ ದುಷ್ಟಭೀತಿಮಹಾ ಭೀತಿಭಂಜ ನಾಯೈ ನಮೋ ನಮಃ,ಭಾವನಾಮಾತ್ರ ಸಂತುಷ್ಟಹೃದ ಯಾಯೈ ನಮೋ ನಮಃ, ಶ್ರೀ ಷೋಡಶಾಕ್ಷರೀ ಮಂತ್ರ ಮಧ್ಯ ಗಾಯೈ ನಮೋ ನಮಃ,ಮಾತೃಮಂಡ ಸಂಯುಕ್ತ ಲಲಿತಾಯೈ ನಮೋ ನಮಃ,ಕ್ರೂರಭಂಡಶಿರಚ್ಛೇದ ನಿಪುಣಾಯೈ ನಮೋ ನಮಃ,ಜನ್ಮಮೃತ್ಯುಜರಾ ರೋಗ ಭಂಜನಾಯೈ ನಮೋ ನಮಃ,ಕಾಮಕ್ರೋಧಾಧಿಷಡ್ವರ್ಗ ನಾಶನಾಯೈ ನಮೋ ನಮಃ,ಸರ್ವವೇದಾಂತ ಸಂಸಿದ್ಧಸುತ ತ್ವಾಯೈ ನಮೋ ನಮಃ, ದಕ್ಷಪ್ರಜಾಪತಿ ಸುತಾವೇಷಾಡ್ಯಾಯೈ ನಮೋ ನಮಃ, ಮಹಾದೇವರ ತೌತ್ಸುಕ್ಯ ಮಹಾದೇವ್ಯೈ ನಮೋ ನಮಃ ಭೂರೂಪಸಕಲಾ ಧಾರಾಯೈ ನಮೋ ನಮಃ, ಬೀಜೌ ಷಧ್ಯನ್ನರೂಪಿಣ್ಯೈ ನಮಃ,ಜರಾಯುಜಾಂಡ ಜೋದ್ಭಿಜ್ಜಸ್ವೇದರ ಜಾದಿಶರೀರಿಣ್ಯೈ ನಮಃ, ಗಂಧರೂಪಾಯೈ ನಮಃ, ಘ್ರಾಣ ರೂಪಾಯೈ ನಮಃ, ರಸರೂಪಯೈ ನಮಃ, ತ್ವಗ್ರೂಪಾಯೈ ನಮಃ, ಶಬ್ದರೂಪಾಯೈ ನಮಃ, ಅಹಂಕರ್ತ ವ್ಯವೃತ್ತಿದಾಯೈ ನಮಃ, ಯಂತ್ರಮಂತ್ರ ಕಳಾತ್ಮಿಕಾಯೈ ನಮಃ, ಬ್ರಹ್ಮ ರೂಪಾಯೈ ನಮಃ, ವಿಷ್ಣುರೂಪಾಯೈ ನಮಃ,ರುದ್ರ ರೂಪಾಯೈ ನಮಃ, ವಾಣೀ ಲಕ್ಷ್ಮೀಉಮಾರೂಪಾಯೈ ನಮಃ, ವೇದಮಾತ್ರೇ ನಮಃ, ಮಹಾ ವ್ಯಾಹೃತಿರೂಪಿಣ್ಯೈನಮಃ,

## ಶ್ರೀ ಲಲಿತಾ ಸಹಸ್ರನಾಮಾವಳಿ-

೧. ಶ್ರೀ ಮಾತ್ರೇ ನಮಃ,೪. ಚಿದಗ್ನಿಕುಂಡಸಂಭೂತಾಯೈ ನಮಃ, ೧೩. ಚಂಪಕಾಶೋಕಪುನ್ನಾಗಸೌಗಂಧಿ ಕಲ ಸತ್ಕಚಾಯೈ ನಮಃ, ೫೧ ಸರ್ವಾಭರಣ ಭೂಷಿತಾಯೈ ನಮಃ, ೫೬.ಶ್ರೀಮನ್ನಗರನಾಯಿಕಾಯೈ ನಮಃ, ೫೯. ಮಹಾ ಪದ್ಮಾಟವೀಸಂಸ್ಥಾಯೈ ನಮಃ,೭೮. ಮಹಾ ಗಣೇಶನಿರ್ಭಿನ್ನ ವಿಘ್ನಯಂತ್ರಪ್ರಹರ್ಷಿತಾಯೈ ನಮಃ, ೮೦.ಕಾರಂಗುಲಿ ನಖೋತ್ಪನ್ನ ನಾರಾಯಣ ದಶಾಕೃತ್ಯೈ ನಮಃ ೮೩.ಬ್ರಹ್ಮೋ ಪೇಂದ್ರಮಹೇಂದ್ರಾದಿದೇವಸಂಸ್ತುತ ವೈಭವಾಯೈ ನಮಃ, ೮೮.ಮೂಲಮಂತ್ರಾತ್ಮಿ ಕಾಯೈ ನಮಃ ೧೦೦. ಬ್ರಹ್ಮಗ್ರಂಥಿ ವಿಭೇದಿನ್ಯೈ ನಮಃ ೧೦೧ ಮಣಿ ಪೂರಾಂತರುದಿತಾಯೈ ನಮಃ,೧೦೨.ವಿಷ್ಣುಗ್ರಂಥಿ ವಿಭೇದಿನ್ಯೈನಮಃ, ೨೦೪. ಅಜ್ಞಾ ಚಕ್ರಾಂತರಾಲ ಸ್ಥ್ಯಾಯೈ ನಮಃ ೧೦೪. ರುದ್ರಗ್ರಂಥಿವಿಭೇದಿನ್ಯೈ ನಮಃ ೧೦೫. ಸಹಸ್ರಾ ರಾಂಬುಜಾರೂಡಾಯೈ ನಮಃ,೧೦೮ ಷಟ್ಚಕ್ರೋಪಸಂಸ್ಥಿ ತಾಯೈ ನಮಃ, ೧೧೦ ಕುಂಡಲಿನ್ಯೈ ನಮಃ,೧೧೩ ಭವಾರಾಣ್ಯ ಕುಠಾರಿಕಾಯೈ ನಮಃ,೧೧೬ ಭಕ್ತ ಸೌಭಾಗ್ಯದಾಯಿನ್ಯೈ ನಮಃ ೧೧೯ ಭಕ್ತಿಗಮ್ಯಾಯೈ ನಮಃ, ೧೨೦ ಭಕ್ತಿವಶ್ಯಾಯೈ ನಮಃ,೧೨೧ ಭಯಾಪಹಾಯೈ ನಮಃ, ೧೨೬ ಶ್ರೀಕರ್ಯೈ ನಮಃ, ೧೬೯ ಕ್ರೋಧಶಮನ್ಯೈ ನಮಃ, ೨೦೪ ಸರ್ವಮಂತ್ರ ಸ್ವರೂಪಿಣ್ಯೈ ನಮಃ, ೨೦೫ ಸರ್ವ ಯಂತ್ರಾತ್ಮಿಕಾಯೈ ನಮಃ,೨೦೬ ಸರ್ವತಂತ್ರಾತ್ಮಿಕಾಯೈ ನಮಃ,೨೩೬ ಮಹಾ ಚತುಷ್ಷಷ್ಟಿಕೋಟಿಯೋಗಿನೀ ಗಣ ಸೇವಿತಾಯೈ ನಮಃ, ೪೨೮ ಪಂಚಕೋಶಾಂತರ ಸ್ಥಿತಾಯೈ ನಮಃ,೪೩೫ ಚಾಂಪೇಯಕು ಸುಮಪ್ರಿಯಾಯೈ ನಮಃ, ೪೫೧ ವಿಘ್ನನಾಶಿನ್ಯೈ ನಮಃ, ೪೮೦ ಪಾಯಸಾನ್ನ ಪ್ರಿಯಾಯೈ ನಮಃ ೪೮೫ ಅನಾಹತಾಬ್ಜ ನಿಲಯಾಯೈ ನಮಃ, ೪೯೨ ಸ್ನಿಗ್ಧೌದನಪ್ರಿಯಾಯೈ ನಮಃ, ೪೯೫ ಮಣಿಪೂರಾಬ್ಜ ನಿಲ ಯಾಯೈ ನಮಃ, ೫೦೧ ಗುಢಾನ್ನ ಪ್ರೀತಮಾನಸಾಯೈ ನಮಃ ೫೦೪ ಸ್ವಾಧಿಷ್ಠಾನಾಂಬು ಜಗತಾಯೈ ನಮಃ ೫೧೨ ದಧ್ಯನ್ನಾಸಕ್ತಹೃದಯಾಯೈ ನಮಃ, ೫೧೪ ಮೂಲಾ

ಧಾರಾಂಬುಜಾರೂಢಾಯೈ ನಮಃ, ೫೧೯ ಮುದ್ಗೌದನಾಸಕ್ತ ಚಿತ್ತಾಯೈ ನಮಃ, ೫೨೧ ಆಜ್ಞಾಚಕ್ರಾಬ್ಜ ನಿಲಯಾಯೈ ನಮಃ ೫೨೭ ಹರಿದ್ರಾನ್ನೈಕರಸಿ ಕಾಯೈ ನಮಃ, ೫೨೮ ಸಹಸ್ರದಲ ಪದ್ಮಸ್ಥಾಯೈ ನಮಃ, ೫೩೩ ಸರ್ವೌದನಪ್ರೀತಚಿತ್ತಾಯೈ ನಮಃ, ೫೫೧. ಸರ್ವವ್ಯಾಧಿ ಪ್ರಶಮನ್ಯೈ ನಮಃ ೫೮೪. ಮಹಾ ವಿದ್ಯಾಯೈ ನಮಃ ೫೮೫ ಶ್ರೀ ವಿದ್ಯಾಯೈ ನಮಃ ೬೯೮ ಸರ್ವಾರ್ಥದಾತ್ರ್ಯೈ ನಮಃ, ೮೧೨ ಪರಮಂತ್ರವಿಭೇದಿನ್ಯೈ ನಮಃ ೮೫೧ ಜನ್ಮಮೃತ್ಯುಜರಾತ ಪ್ತಜನ ವಿಶ್ರಾಂತಿದಾಯಿನ್ಯೈ ನಮಃ,೮೮೦ ಸಂಸಾರಪಂಕ ನಿರ್ಮಗ್ನಸಮುದ್ಧರಣ ಪಂಡಿತಾಯೈ ನಮಃ ೯೧೩ ಸರ್ವಾಪದ್ವಿನಿವಾರಿಣ್ಯೈ ನಮಃ, ೯೨೭ ಸ್ತೋತ್ರ ಪ್ರಿಯಾಯೈ ನಮಃ ೯೭೬, ತ್ರಿಪುರಾಂಬಿಕಾಯೈ ನಮಃ,೯೮೯. ವಾಂಛಿತಾರ್ಥಪ್ರದಾಯಿನ್ಯೈ ನಮಃ ೯೯೬ ಶ್ರೀಚಕ್ರರಾಜ ನಿಲಯಾಯೈ ನಮಃ,೯೯೯ ಶಿವಶಕ್ತ್ಯೈಕ್ಯ ರೂಪಿಣ್ಯೈ ನಮಃ, ೧೦೦೦ ಲಲಿತಾಂಬಿಕಾಯೈ ನಮಃ

ಶ್ರೀ ಲಲಿತಾಂಬೆಯು - ಪಾಯಸಾನ್ನ, ಮಧುರ ಮತ್ತು ಜಿಡ್ಡು ಮಿಶ್ರವಾದ ಅನ್ನ, ಬೆಲ್ಲ ಮಿಶ್ರವಾದ ಅನ್ನ, ಹೆಸರು ಬೇಳೆ ಯಿಂದ ಮಾಡಿದ ಹುಗ್ಗಿ, ಶಾಲ್ಯಾನ್ನ ಪ್ರೀತಿಸುತ್ತಾಳೆ. ಅದರಿಂದ ನಮ್ಮ ಪೂಜೆಯ ಕಾಲದಲ್ಲಿ ಇದನ್ನು ಅರ್ಪಿಸುವುದು ಶ್ರೇಯಸ್ಕರ ಮತ್ತು ಫಲಕಾರಿ. ನಾವು ಲಲಿತಾ ಹೋಮ ಅಥವಾ ಶ್ರೀ ಚಂಡಿಕಾ ಹೋಮಗಳಲ್ಲಿ, ಗುಡ ಮತ್ತು ಇತರ ಮಿಶ್ರಗಳ ಅನ್ನವನ್ನು ಆಹುತಿ ಕೊಡುವುದನ್ನು ನಾವು ಕಾಣಬಹುದು. ಗಣೇಶ - ಗರಿಕೆ /ಮೋದಕ, ಶಿವ - ಬಿಲ್ವ/ ವಿಷ್ಣು / ಸುಬ್ರಹ್ಮಣ್ಯ - ತುಳಸಿ ಪ್ರಿಯರು. ಬೇರೆ ಮಾಡಬಾರದು ಎಂಬುದಲ್ಲ, ಪರಿಣಾಮ ಮತ್ತು ಶೀಘ್ರ ಫಲಕಾರಿ. ಸಾಮಾನ್ಯ ರಾದ ನಮಗೆ ಹೇಗೆ ಕೆಲವು ಪ್ರಿಯವೋ, ಅದನ್ನು ಕೊಟ್ಟಾಗ ಆಗುವ ತೃಪ್ತಿ ಬೇರೆ, ಅಪ್ರಿಯವಾದುದನ್ನು ಕೊಟ್ಟಾಗ ಆಗುವ ತೃಪ್ತಿಯೇ ಬೇರೆ.

ಸಾಮಾನ್ಯವಾಗಿ ಶ್ರೀ ಲಲಿತಾ ಲಕ್ಷಾರ್ಚನೆಯನ್ನು ಕುಂಕುಮದಲ್ಲಿ ಸುಮಂಗಳಿಯರು ಮಾಡುವುದನ್ನು ನಾವು ಕಾಣಬಹುದು. ಇಲ್ಲಿ ೧೦೦ ಸುಮಂಗಲಿಯರು ಒಂದು ಸಾರಿ ಸಹಸ್ರನಾಮಪೂರ್ವಕ ಅರ್ಚನೆ ಮಾಡಿದರೆ, ಒಂದು ಲಕ್ಷಾರ್ಚನೆಯಾಯಿತು. ಈ ರೀತಿ ಮಾಡಿ, ತಮ್ಮ - ತಮ್ಮ ಮನೋರಥವನ್ನು ಈಡೇರಿಸಿಕೊಂಡಿರುವುದನ್ನು ನಾವು ನೋಡಿದ್ದೇವೆ ಮತ್ತು ಅನುಭವಿಸಿದ್ದೇವೆ. ಯಾವುದೇ ಪೂಜೆ, ಹೋಮ, ಹವನಗಳು ನಮ್ಮ ನೆಮ್ಮದಿಗೆ ಮಾತ್ರ, ದೇವರಿಗೆ ಬೇಕಾಗಿಲ್ಲ. ಅದರಿಂದ ಇಲ್ಲಿ ಭಕ್ತಿ ಮತ್ತು ಶ್ರದ್ಧೆಯೇ ಪ್ರಧಾನ. ಇಲ್ಲಿ ನಮ್ಮ ಸಂಪತ್ತು ಪ್ರದರ್ಶನ ಅಥವಾ ಆಡಂಬರಬೇಕಿಲ್ಲ. ಜೊತೆಗೆ ಪಾಂಡಿತ್ಯಕೂಡ ಬೇಕಿಲ್ಲ. ಶ್ರೀ ಕೃಷ್ಣನು ಗೀತೆಯಲ್ಲಿ ಹೇಳಿರುವಂತೆ, ಭಕ್ತಿಯಿಂದ" ಪತ್ರಂ ಪುಷ್ಪಮ್ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ। ತದಹಂ ಭಕ್ತ್ಯು ಪಹೃತಮಶ್ನಾಮಿ ಪ್ರಯತಾತ್ಮನಃ" (೯/೨೬). ಯಾವ ಪೂಜೆ, ವ್ರತ, ಸ್ತೋತ್ರಪಾರಾಯಣ ಮಾಡಿದರೂ, ಭಕ್ತಿಯೇ ಮುಖ್ಯ ವಿನಃ ನಮ್ಮ ಇತರ ಬಾಹ್ಯ ವಿಷಯಗಳು ಅಲ್ಲ ಎಂಬುದಾಗಿ ತಿಳಿದು ಬರುತ್ತದೆ. ಇದನ್ನೇ ಶ್ರೀ ಲಲಿತಾಷ್ಟೋತ್ತರದಲ್ಲಿ " ಭಾವನಾಮಾತ್ರ ಸಂತುಷ್ಟ ಹೃದಯಾಯೈ ನಮೋ ನಮಃ" ತನ್ನನ್ನು ಭಕ್ತಿಯಿಂದ ಧ್ಯಾನಿಸಿದರು ಅಥವಾ ಸ್ಮರಿಸಿದರು ನಾನು ಒಲಿಯುತ್ತೇನೆ ಎಂಬುದನ್ನು ನಾವು ಕಾಣಬಹುದು.

ನಾವು ಕೆಲವು ಯಾತ್ರಾಸ್ಥಳಗಳನ್ನು ನೋಡುವಾಗ, ನಮಗೆ ನಾವು ಪಠಿಸಿದ, ದೇವ ದೇವಿಯರ ಸ್ತೋತ್ರಗಳನ್ನು ಮೆಲುಕು ಹಾಕಿದರೆ, ನಮಗೆ ಆನಂದ ಮತ್ತು ನೆಮ್ಮದಿ ದೊರಕುತ್ತದೆ. ಉದಾಹರಣೆಗೆ, ಶ್ರೀ ಶಂಕರಾಚಾರ್ಯರ "ಸೌಂದರ್ಯ ಲಹರಿಯ" ಎಂಟನೆಯ ಶ್ಲೋಕದಲ್ಲಿ "ಸುಧಾ ಸಿಂಧೋರ್ಮಧ್ಯೇ ಸುರವಿಟಪಿವಾಟೀ ಪರಿವೃತೇ.... ಚಿದಾ ನಂದಲಹರೀಂ" ಈ ಒಂದು ಸ್ತೋತ್ರದ ಕಲ್ಪನೆ ಶ್ರೀಪುರದ ಶ್ರೀ ನಾರಾಯಣಿ ಪೀಠದಲ್ಲಿ "ನಾರಾಯಣೀ" ಯನ್ನು ನೋಡು ವಾಗ ಅನುಭವವಾಯಿತು ಇದು ನನ್ನ ಅನಿಸಿಕೆ. ಈ ದೇವಿ ಯನ್ನು ನೋಡಲು ಹೋಗುತ್ತಿರುವಾಗ ನಕ್ಷತ್ರಾಕಾರದ ದಾರಿ, ಸುತ್ತಲೂ ಪರ್ವತ ಮತ್ತು ಮರಗಳು, ಬಂಗಾರದ ಕಂಭಗಳು, ಕಮಾನುಗಳು, ಹಂಸ ಮತ್ತು ಐರಾವತದ ಮೇಲಿನ ಕಂಭ ಗಳು. ದೇವಿಯ ಗರ್ಭಗುಡಿಯ ಸುತ್ತಲೂ ಶುದ್ಧವಾದ ನೀರಿನ ಕಾಲುವೆ (ದ್ವೀಪವೋ ಎಂಬತ್ತೆ).ಗರ್ಭಗುಡಿಯ ಬಂಗಾರದ ಗೋಪುರ ಇತ್ಯಾದಿ. ಒಳಗಡೆ ಸುಂದರವಾದ "ಶ್ರೀ ನಾರಾ ಯಣಿ" ಯ ದರ್ಶನ ಅದ್ಭುತ.ಮಾನವನಾದ ಶಿಲ್ಪಿಯೇ ಇಷ್ಟು ಅದ್ಭುತವನ್ನು ಮಾಡಿದ್ದಾನೆ. ದೇವಶಿಲ್ಪಿಯಿಂದ ನಿರ್ಮಿತವಾದ ಆ ತಾಯಿಯ ಪುರ ಇನ್ನೂ ಎಷ್ಟು ಅದ್ಭುತವಿರಬಹುದು. ಇದೇ ರೀತಿ "ತಿಮ್ಮಪ್ಪನ" ದರ್ಶನದಲ್ಲೂ ಆಗುತ್ತದೆ ಅಲ್ಲವಾ? ಇಲ್ಲಿ ನಮ್ಮ ಭಾವನೆ ಮುಖ್ಯ. "ಯಧ್ಭಾವಂ ತದ್ಭವತಿ"

ನಾವು ವಿವಿಧ ಶಕ್ತಿಪೀಠಗಳಾದ, ಕೊಲ್ಲೂರು, ಶ್ರೀಶೈಲ ದಲ್ಲಿನ ಭ್ರಮರಾಂಬಾ, ಹೆಬ್ಬೂರಿನ ಕಾಮಾಕ್ಷೀ ದೇವಾಲಯ, ಶ್ರೀ ರಂಗಪಟ್ಟಣದ ಹತ್ತಿರವಿರುವ ನಿಮಿಶಾಂಭ ಇತ್ಯಾದಿ ದೇವಾಲಯಗಳಲ್ಲಿ ಅಪರೂಪವಾಗಿರುವ ಶ್ರೀ ಚಕ್ರಗಳನ್ನು ಮತ್ತು ಪೂಜಾವಿಧಿಗಳನ್ನು ನೋಡಿ ಆನಂದಿಸಬಹುದು.

ಫಲಶೃತಿಯಲ್ಲಿ, (ಉತ್ತರಪೀಠಿಕಾ,) ಲಲಿತಾ ಸಹಸ್ರ ನಾಮಪೂಜೆ ಮತ್ತು ಪಾರಾಯಣದ ಫಲವನ್ನು ಹಯಗ್ರೀವ

ಅಗಸ್ತ್ಯರಿಗೆ ಹೇಳುತ್ತಾರೆ. ಇದು ಸಕಲ ರೋಗಗಳನ್ನು, ಅಪಮೃತ್ಯುವನ್ನು, ಸರ್ವ ಜ್ವರಗಳನ್ನು, ಹೋಗಲಾಡಿಸಿ, ದೀರ್ಘಾಯುಸ್ಸನ್ನು, ಪುತ್ರ ಮತ್ತು ಇತರ ಸಂಪತ್ತುಗಳನ್ನೂ ಕೊಡುತ್ತದೆ. ಇಲ್ಲಿ ಕೆಲವನ್ನು ಮಾತ್ರ ಹೇಳಲಾಗಿದೆ.

ಅನೇನ ಸದೃಶಂ ಸ್ತೋತ್ರಂ ನ ಭೂತಂ ನ ಭವಿಷ್ಯತಿ।
ಸರ್ವರೋಗಪ್ರಶಮನಂ ಸರ್ವಸಂಪತ್ಪ್ರವರ್ಧನಮ್॥
ಸರ್ವಾಪಾಪಮೃತ್ಯುಶಮನಂ ಕಾಲಮೃತ್ಯುನಿವಾರಣಮ್।
ಸರ್ವಜ್ವರಾರ್ತಿಶಮನಂ ದೀರ್ಘಾಯುಷ್ಯ ಪ್ರದಾಯಕಮ್॥

ಪುತ್ರಪ್ರದಮಪುತ್ರಾಣಾಂ ಪುರಷಾರ್ಥಪ್ರದಾಯಕಮ್।
ಇದಮ್ ವಿಶೇಷಾಚ್ಛ್ರೀದೇವ್ಯಾಃ ಸ್ತೋತ್ರಂ ಪ್ರೀತಿ ವಿಧಾಯಕಮ್॥

ಭಸ್ಮವನ್ನು ಮುಟ್ಟಿಕೊಂಡು, ಸಹಸ್ರನಾಮವನ್ನು ಪಠಿಸಿ ಆ ಭಸ್ಮವನ್ನು ಲೇಪಿಸಿಕೊಂಡರೆ, ತಲೆನೋವು, ಜ್ವರ ಇತ್ಯಾದಿ ಹೋಗುತ್ತದೆ.(ಅದೇ ರೀತಿ ದೇವಿಯ ರೂಪವಾದ-ಇಂದ್ರಾಕ್ಷಿಯ ಸ್ತೋತ್ರವನ್ನು ಪಠಿಸಿ ಆ ಭಸ್ಮದ ಉಪಯೋಗ ದಿಂದಲೂ ಫಲಕಾರಿ ಎಂಬುದು ಸ್ವಾನುಭವ)-

ತತ್ಕ್ಷಣಾತ್ಪ್ರಶಮಂ ಯಾತಿ ಶಿರಸ್ತೋದೋ ಜ್ವರೋಪಿ ಚ ।
ಸರ್ವವ್ಯಾಧಿ ನಿವೃತ್ಯರ್ಥಂ ಸ್ಪೃಷ್ಟ್ವಾ ಭಸ್ಮ ಜಪೇದಿದಮ್॥

ಇನ್ನೂ ಅನೇಕ ಫಲಗಳನ್ನು ನಾವು ಕಾಣಬಹುದು. ದಿನಕ್ಕೆ ಒಂದು ಬಾರಿ ಹದಿನೈದು ದಿನ ಸಹಸ್ರನಾಮ ಪಠಿಸಿದರೆ, ವಿದ್ಯಾಧಿದೇವತೆ ಸರಸ್ವತಿ ಒಲಿಯುವಳು. ಲಲಿತಾ ಸಹಸ್ರನಾಮ ಬರೆದ ಪುಸ್ತಕವನ್ನು ಪೂಜಿಸಿದರೂ, ಆ ತ್ರಿಪುರ ಸುಂದರಿ ಒಲಿಯುತ್ತಾಳೆ. ಯಾರು ಶುಕ್ರವಾರದಂದು ಶ್ರೀ ಚಕ್ರ ಪೂಜೆಯನ್ನು ಸಹಸ್ರಸನಾಮದಲ್ಲಿ ಅರ್ಚಿಸುವನೋ, ಅವನು ಈ ಜನ್ಮದಲ್ಲಿ ಎಲ್ಲವನ್ನು ಆನಂದದಿಂದ ಪಡೆದು ಅನುಭವಿಸಿ ಮುಕ್ತಿಯನ್ನು ಪಡೆಯುತ್ತಾನೆ.

ಹತ್ತು ದೇವೀಸಹಸ್ರನಾಮಗಳಲ್ಲಿ, ಈ ಸಹಸ್ರ ನಾಮವೂ ಅತ್ಯಂತ ಶ್ರೇಷ್ಠವಾದುದು, ಅದರಿಂದ ಕಲಿಯುಗ ದಲ್ಲಿ, ಪಾಪನಿವಾರಣೆಗೆ ಇದರ ಪಠಣೆ ಅತ್ಯಂತ ಫಲದಾಯಕ. ವಿಷ್ಣುವಿನ ಸಾವಿರ ನಾಮದ ಉಚ್ಚಾರಕ್ಕಿಂತ, ಒಂದು ಶಿವನಾಮವನ್ನು ಹೇಳುವುದು ಒಳ್ಳೆಯದು, ಸಾವಿರ ಶಿವನಾಮ ಹೇಳುವುದಕ್ಕಿಂತ ಒಂದು ದೇವಿಯ ನಾಮವನ್ನು ಹೇಳುವುದು ಒಳ್ಳೆಯದು.-"ವಿಷ್ಣುನಾಮಸಹಸ್ರಾಚ್ಚ ಶಿವನಾಮೈಕ ಮುತ್ತಮಮ್।"ಶಿವನಾಮಸಹಸ್ರಾಚ್ಚಾ ದೇವ್ಯಾ ನಾಮೈಕ ಮುತ್ತಮಮ್॥. ಅದರಿಂದ ಸರಿಯಾದ ಗುರುವಿನಿಂದ ಉಪದೇಶವನ್ನು ಪಡೆದು ಇದನ್ನು ಭಕ್ತಿಶ್ರದ್ಧೆಗಳಿಂದ ಪಠಿಸಿದರೆ ಮಾತ್ರ ಇದರ ಉಪಯೋಗ ಬರುತ್ತದೆ ಎಂಬುದು ನನ್ನ ಅನುಭವ ಮತ್ತು ಅನಿಸಿಕೆ.

ನಾವು ವಿವಿಧ ರೀತಿಯಲ್ಲಿ, ಅಷ್ಟೋತ್ತರ, ಸಹಸ್ರನಾಮ ಇತ್ಯಾದಿಯಲ್ಲಿ ಆ ಶ್ರೀ ಲಲಿತಾ ಮಾತೆಯನ್ನು ಭಕ್ತಿಯಿಂದ "ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ। ತಸ್ಮಾತ್ ಕಾರುಣ್ಯ ಭಾವೇನ ರಕ್ಷಮಾಂ ಜಗದೀಶ್ವರಿ। ಎಂದು ಪ್ರಾರ್ಥಿಸಿ, ಶರಣಾದರೆ" ನಮ್ಮ ಹಿಂದೆ ಸದಾ ಇದ್ದು ಕಾಪಾಡಲೇಬೇಕು ಮತ್ತು ಕಾಪಾಡುತ್ತಾಳೆ ಆ " ಶ್ರೀಮಾತಾ ಲಲಿತಾಂಬಿಕಾ"


## STATEMENT ABOUT OWNERSHIP AND OTHER PARTICULARS ABOUT

## SAPTHAGIRI

**(MONTHLY)**
**FORM IV**
*See Rule 8*


| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Honorary Editor | : | **Sri Anil Kumar Singhal, I.A.S.,** Executive Officer, TTD |
| 4. Printer's Name | : | ***Sri R.V. Vijaya Kumar,*** B.A., B.Ed., |
| Whether citizen of India | : | Yes |
| Address | : | Dy. E.O.,(Publication & Press), T.T.D., Tirupati. |
| 5. Editor & Publisher's Name | : | **Dr. K. Radha Ramana,** MA.,M.Phil., Ph.D. |
| Whether citizen of India | : | Yes |
| Address | : | Chief Editor, Sapthagiri T.T.D. Journal, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Board of Trustees represented by the Executive Officer on behalf of T.T.D., Tirupati |

*I, K. Radha Ramana, hereby declare that the particulars given above are true to the best of my knowledge and belief.*

TIRUPATI
Date : 28-2-2019

**(Sd.) Dr. K. Radha Ramana**
*Signature of the Publisher*

# ಆರೋಗ್ಯ ದಿವ್ಯಾಮೃತ



# ತ್ರಿಫಲ

ಮೂಲ. ಡಾ॥ ಸಿ. ಮಧುಸೂದನ ಶರ್ಮ

– ಅನುವಾದ : ಶ್ರೀಮತಿ.

ತ್ರಿಫಲ ಎಂದರೆ ಮೂರು ಫಲಗಳು. ಅಳಲೆ, ತಾರೇಕಾಯಿ ಹಾಗೂ ನೆಲ್ಲಿಕಾಯಿಗಳನ್ನು ತ್ರಿಫಲ ಎನ್ನುತ್ತಾರೆ. ಒಣಗಿದ ಇವುಗಳ ತಿರುಳನ್ನು ಪುಡಿಮಾಡಿ ಸಮಾನವಾಗಿ ಕಲಿಸಿದರೆ ತಯಾರಾಗುವ ಚೂರ್ಣವನ್ನೇ ತ್ರಿಫಲ ಚೂರ್ಣವೆನ್ನುತ್ತಾರೆ.

ಈ ತ್ರಿಫಲಚೂರ್ಣವನ್ನು ಸದ್ವಿನಿಯೋಗ ಮಾಡಿಕೊಳ್ಳುವುದರಿಂದ ನಾವೆದುರಿಸುವ ಬಹು ಸಾಮಾನ್ಯ ಅನಾರೋಗ್ಯ ಸಮಸ್ಯೆಗಳನ್ನೊಂದೇ ಅಲ್ಲದೇ ದೀರ್ಘಕಾಲದ ಸಮಸ್ಯೆಗಳಿಂದಲೂ, ಸಹಾ ರಕ್ಷಣೆಯನ್ನು ಪಡೆಯಬಹುದು.

### ರಕ್ತಶುದ್ಧಿಗೆ

150 ಗ್ರಾಂ ತ್ರಿಫಲ ಚೂರ್ಣವನ್ನು 50 ಗ್ರಾಂ ಲಾವಂಚದ ಚೂರ್ಣದೊಂದಿಗೆ ಕಲಿಸಿಟ್ಟು ಕೊಂಡು ಬೆಳಗ್ಗೆ - ರಾತ್ರಿ ಬಾರಿಯೊಂದಕ್ಕೆ 2 ರಿಂದ 3 ಗ್ರಾಂ ನಷ್ಟನ್ನು ತಕ್ಕಷ್ಟು ಜೇನಿನಲ್ಲಿ ಕಲಿಸಿ ಸೇವಿಸುತ್ತಾ, ತ್ರಿಫಲ ಚೂರ್ಣವನ್ನು ಮೊಸರಿನಲ್ಲಿ ಕರಗಿಸಿ ಮೈ ಲೇಪನದಂತೆ ಬಳಸಿದಲ್ಲಿ ರಕ್ತಶುದ್ಧಿಗೊಂಡು ಕಜ್ಜಿ, ತಾಮರ, ದದ್ದು, ಸೋರಿಯಾಸಿಸ್ ನಂತಹ ಚರ್ಮವ್ಯಾಧಿಗಳು ಮೂಲಾಗ್ರ ನಶಿಸುತ್ತವೆ.

### ವ್ಯಾಧಿ ನಿರೋಧಕ ಶಕ್ತಿ

60 ಗ್ರಾಂ ತ್ರಿಫಲ ಚೂರ್ಣ, 60 ಗ್ರಾಂ ಚಿಕ್ಕಕಲ್ಲುಸಕ್ಕರೆ ಪುಡಿ, 60 ಗ್ರಾಂ ಶುದ್ಧವಾದ ತುಪ್ಪ, 120 ಗ್ರಾಂ ಸ್ವಚ್ಛವಾದ ಜೇನನ್ನು ಚೆನ್ನಾಗಿ ಕಲಿಸಿ ಒಂದು ಸೀಸೆಯಲ್ಲಿಟ್ಟುಕೊಂಡು ಮುಂಜಾನೆ ಸಂಜೆ ಒಂದು ಬಾರಿಗೆ ಒಂದು ಟೀ ಸ್ಪೂನ್ ಔಷಧಿಯನ್ನು ಸೇವಿಸಿ ಅನಾಚಾನವಾಗಿ ಹಾಲು ಅಥವಾ ನೀರಿನೊಂದಿಗೆ ಸೇವಿಸುತ್ತಿದ್ದರೆ ವ್ಯಾಧಿ ನಿರೋಧಕ ಶಕ್ತಿ ವೃದ್ಧಿಗೊಂಡು ಪದೇ ಪದೇ ಅನಾರೋಗ್ಯಕ್ಕೆ ತುತ್ತಾಗದಂತೆ ರಕ್ಷಣೆ ನೀಡುತ್ತದೆ.ಅಮೃತ ತುಲ್ಯವಾದ ಔಷಧೀಯ ಗುಣಗಳು ಈ ಔಷಧಿಯಲ್ಲಿ ಒಗ್ಗೂಡಿರುವುದರಿಂದಲೇ ಇದನ್ನು ತ್ರಿಫಲವಾದ ಅಮೃತವೆಂದು ಅನುಭವಸ್ಥ ವೈದ್ಯರು ಹೇಳುತ್ತಾರೆ.

### ಮೊಡವೆಗಳಿಗೆ

ಒಂದು ಭಾಗ ಸ್ವಚ್ಛವಾದ ಅರಿಶಿನ ಪುಡಿ, ಎರಡು ಭಾಗ ತ್ರಿಫಲ ಚೂರ್ಣದಲ್ಲಿ ಕಲಿಸಿಟ್ಟುಕೊಂಡು ಪ್ರತಿದಿನವೂ ಒಂದು ಬಾರಿ ತಕ್ಕಷ್ಟು ಪುಡಿಗೆ ತಕ್ಕಷ್ಟು ನೀರು ಹಾಕಿ ಪೇಸ್ಟಿನ ಹಾಗೆ ಕಲಿಸಿ ಮುಖದ ಮೇಲೆ ಲೇಪನ ಮಾಡಿ ಒಂದು ತಾಸಿನ ನಂತರ ಉಗುರುಬೆಚ್ಚಗಿನ ನೀರಿನಲ್ಲಿ ಮುಖದೊಳೆಯುತ್ತಿದ್ದರೆ ಶೀಘ್ರದಲ್ಲಿ ಒಳ್ಳೆಯ ಫಲಿತಾಂಶ ಕಂಡು ಬರುತ್ತದೆ.

### ರಕ್ತ ಕುರುಪುಗಳಿಗೆ

ಒಂದು ಭಾಗದಷ್ಟು ಸೋಡಾ ಪುಡಿಗೆ ಮೂರು ಭಾಗದಷ್ಟು ತ್ರಿಫಲ ಚೂರ್ಣವನ್ನು ಕಲಿಸಿಟ್ಟುಕೊಂಡು ದಿನವೂ ಒಂದೆರಡು ಬಾರಿ ಬೇಕಾದಷ್ಟು ಪುಡಿಗೆ ಹಿಡಿಸುವಷ್ಟು ನೀರನ್ನು ಹಾಕಿ ಕಲಿಸಿ ಕುರುಪಿನ ಮೇಲೆ ಲೇಪನ ಮಾಡುತ್ತಿದ್ದರೆ ಆ ಸಮಸ್ಯೆ ಕ್ರಮವಾಗಿ ಕಡಿಮೆಯಾಗುತ್ತದೆ.

### ಮೂಲವ್ಯಾಧಿ, ಮಲಬದ್ಧತೆ

150 ಗ್ರಾಂ ತ್ರಿಫಲ ಚೂರ್ಣದಲ್ಲಿ 50 ಗ್ರಾಂ ಸುನಾಮುಖಿ ಚೂರ್ಣವನ್ನು ಕಲಿಸಿಟ್ಟುಕೊಂಡು ಪ್ರತಿದಿನ ರಾತ್ರಿ ಮಲಗುವಾಗ ಸಮಸ್ಯೆಯ ತೀವ್ರತೆಕ್ಕನುಗುಣವಾಗಿ ಅರ್ಧ ಟೀ ಸ್ಪೂನ್‌ನಿಂದ ಒಂದು ಟೀ ಸ್ಪೂನ್ ವರೆಗೆ ತಕ್ಕಷ್ಟು ಜೇನಿನಲ್ಲಿ ಕಲಿಸಿ ಅಥವಾ ನೀರಿನೊಂದಿಗೆ ಸೇವಿಸುತ್ತಿದ್ದಲ್ಲಿ ಸೂಕ್ತವಾದ ಫಲಿತಾಂಶ ಸಿಗುವುದು.

ಮೂಲವ್ಯಾಧಿಯಿಂದ ಬಳಲುತ್ತಿರುವವರು ಈ ಔಷಧಿಯನ್ನು ಹೊಟ್ಟೆಯೊಳಗೆ ಸೇವಿಸುತ್ತಿದ್ದರೆ ಮತ್ತು ಅದರೊಂದಿಗೆ 400 ಮಿ.ಲೀ.ನೀರಿನಲ್ಲಿ 50-100 ಗ್ರಾಂ ತ್ರಿಫಲ ಚೂರ್ಣವನ್ನು ಮಾಡಿ 100 ಮೀ.ಲೀ ನೀರು ಉಳಿಯುವಂತೆ ಮರಳಿಸಿ ಇಳಿಸಿ, ಬಿಸಿಯಾರಿದ ನಂತರ ಸೋಸಿ ಉಗುರುಬೆಚ್ಚಗಿನ ನೀರಿನಲ್ಲಿ ಕಲಿಸಿ 20 ನಿಮಿಷಗಳವರೆಗೆ ಮಲದ್ವಾರ ಸ್ಥಳ ಅದರಲ್ಲಿ ಮುಳುಗುವಂತೆ ಕುಳಿತು ಕೊಳ್ಳಬೇಕು. ದಿನಪ್ರತಿ

ಒಂದು ಸಾರಿಯಾದರೂ ಮಲವಿಸರ್ಜನೆಯ ನಂತರ ಈ ರೀತಿ ಮಾಡಬೇಕು.

**ಅಧಿಕತೂಕ, ಸ್ಥೂಲಕಾಯಕ್ಕೆ**

ರಾತ್ರಿ ಮಲಗುವಾಗ 200ಮಿ.ಲಿ. ನೀರಿನಲ್ಲಿ 5 ಗ್ರಾಂ ತ್ರಿಫಲ ಚೂರ್ಣವನ್ನೂ, ಒಂದು ಚಿಕ್ಕಶುಂಠಿ ತುಂಡನ್ನು ಕುಟ್ಟಿ ಬೆಳಗಿನವರೆಗೆ ನೆನೆಸಿ 100 ಮಿ.ಲಿ. ನೀರು ಮಿಗಿಲುವಂತೆ ಮರಳಿಸಿ ಕೆಳಗಿಳಿಸಿ ಬಿಸಿಯಾರಿದ ನಂತರ ಶೋಧಿಸಿ ಅರ್ಧ ದಷ್ಟು ನಿಂಬೆರಸವನ್ನು ಕಲಿಸಿ ಸೇವಿಸುತ್ತಿದ್ದರೆ ಶರೀರದ ವಿವಿಧ ಭಾಗಗಳಲ್ಲಿ ಹೆಚ್ಚಾಗಿ ಸಂಚಾರಗೊಳ್ಳುವ ಕೊಬ್ಬು ಕಳೆದು, ಅಧಿಕ ತೂಕ, ಸ್ಥೂಲಕಾಯ ತಗ್ಗುತ್ತದೆ.

ಈ ಔಷಧೀಯ ಸೇವನೆಯಿಂದ ಶರೀರದಲ್ಲಿ ಹಾನಿ ಕಾರಕ ಅಂಶಗಳು ಸಹಾ ತಟಸ್ಥವಾಗುತ್ತವೆ.

**ಬಿಳಿಗೂದಲು ಕಪ್ಪಾಗಲು**

ಒಂದು ಕಬ್ಬಿಣದ ಬಾಣಲೆಯಲ್ಲಿ ಒಂದು ಕಿಲೋ ಎಳ್ಳೆಣ್ಣೆ ಹಾಕಿ, 125 ಗ್ರಾಂ ತ್ರಿಫಲ ಚೂರ್ಣ, ಮಾವಿನ ಚಿಗು ರನ್ನು ಚೆನ್ನಾಗಿ ಒಣಗಿಸಿ ಮಾಡಿದ ಪುಡಿಯನ್ನು 125 ಗ್ರಾಂ ಕಲಿಸಿ ಒಂದು ವಾರದವರೆಗೆ ಮುಂಜಾನೆ, ಸಂಜೆ ಕೈಹಾಕಿ ಕಲಿಸುತ್ತಾ ಹಾಗೆಯೇ ಇಟ್ಟು ನಂತರ ಹಿಂಡಿ, ಸೋಸಿ ಕೇಶ ತೈಲವಾಗಿ ಉಪಯೋಗಿಸುತ್ತಿದ್ದರೆ ಚಿಕ್ಕ ವಯಸ್ಸಿನಲ್ಲಿಯೇ ತಲೆಗೂದಲು ನೆರೆಯಾಗುವುದು.ಉದುರುವುದನ್ನು ತಗ್ಗಿಸಿ, ಕೂದಲು ಫಳಫಳವಾಗಿ ಹೊಳೆಯುತ್ತಾ ಮೃದುತ್ವವನ್ನು ಹೊಂದುತ್ತವೆ.

**ಹುಣ್ಣು,ವೃಣ ಮತ್ತು ಗುಳ್ಳೆಗಳಿಗೆ**

ತ್ರಿಫಲಗಳನ್ನು ಕಾಯಿಸಿ ಕರಿಮಾಡಿ, ಬಿಸಿಯಾರಿದ ನಂತರ,ಪುಡಿಮಾಡಿ,ಜರಡಿ ಹಿಡಿದು ಅಗತ್ಯದಷ್ಟು ಪುಡಿಯನ್ನು ಜೇನು ಅಥವಾ ಎಳ್ಳೆಣ್ಣೆಯಲ್ಲಿ ಕಲಿಸಿ ಮೇಲೆ ಲೇಪಿಸಿದಲ್ಲಿ ಉತ್ತಮ ಫಲಿತಾಂಶ ಸಿಗುತ್ತದೆ.ಮೈ ನವೆ,ಉರಿ ಕೂಡಾ ತಗ್ಗು ತ್ತದೆ.

**ತ್ರಿಫಲ ಕಷಾಯ**

ಅರ್ಧ ಲೀ ನೀರಿನಲ್ಲಿ 10 ಗ್ರಾಂ ತ್ರಿಫಲ ಚೂರ್ಣ ಹಾಕಿ ಕಲಿಸಿ,ಮರಳಿಸಿ,ಬಿಸಿಯಾರಿದ ನಂತರ ಶೋಧಿಸಿ ಮಾಡುವ ಔಷಧವೇ ತ್ರಿಫಲ ಕಷಾಯ.

ಇದನ್ನು ಮೈ ಲೇಪನಕ್ಕೆ ಬಳಸಿದರೆ ಗಾಯಗಳು, ಮೊಣ ಕಾಲು ನೋವುಗಳು ಕಡಿಮೆಯಾಗುತ್ತವೆ.

ತುಸು ಹೊತ್ತು ಮುಕ್ಕಳಿಸಿ ಉಗುಳುತ್ತಿದ್ದಲ್ಲಿ ಬಾಯಿ ಹುಣ್ಣು, ದುರ್ವಾಸನೆ ಹೊರಟು ಹೋಗುತ್ತದೆ.

ಪರಿಶುದ್ಧವಾದ ಬಟ್ಟೆಯಲ್ಲಿ ಅಥವಾ ಹತ್ತಿಯನ್ನು ಈ ಕಷಾಯದಲ್ಲದ್ದಿ ಕಣ್ಣ ಮೇಲಿಟ್ಟು ಕೊಳ್ಳುತ್ತಿದ್ದರೆ ಕಣ್ಣಿನ ಸಮಸ್ಯೆ ಪರಿಹಾರವಾಗುತ್ತದೆ.

ಈ ಕಷಾಯವನ್ನೇ ಉಗುರು ಬೆಚ್ಚಗೆ ಮಾಡಿ ತಲೆಗೆ ಹಚ್ಚಿ ಆರಿದ ನಂತರ ಅಂಟೋಳ ಕಾಯಿ ಅಥವಾ ಶೀಗೆಕಾಯಿ ಯಲ್ಲಿ ತಲೆಸ್ನಾನ ಮಾಡುವುದರಿಂದ ಕೂದಲು ಮೃದುವಾಗಿ ನೀಳವಾಗಿ ದಟ್ಟವಾಗಿ ಕೋಮಲವಾಗುತ್ತವೆ. ಕೂದಲು ಸೀಳು ವಿಕೆಯ ಸಮಸ್ಯೆ ಭಾದಿಸದು.

**ಪಿಸ್ತುಲಾಗಳಿಗೆ**

ನಿತ್ಯವೂ ಒಂದೆರಡು ಬಾರಿ ತ್ರಿಫಲ ಚೂರ್ಣವನ್ನು ತಕ್ಕಷ್ಟು ಹರಳೆಣ್ಣೆಯಲ್ಲಿ ಕಲಿಸಿ ಪೇಸ್ಟಿನಂತೆ ಮಾಡಿ ಮಲ ದ್ವಾರದ ಸುತ್ತಲೂ ಹಚ್ಚುತ್ತಿರಬೇಕು.

**ಅಧಿಕ ಬೆವರುವಿಕೆಗೆ**

30 ಗ್ರಾಂ ತ್ರಿಫಲ ಚೂರ್ಣ, 10 ಗ್ರಾಂ ಶುಂಠಿ ಪುಡಿ, 10 ಗ್ರಾಂ ತುಂಗಮಸ್ತಲ ಚೂರ್ಣ. 10 ಗ್ರಾಂ ಅತಿಮಧುರ ಚೂರ್ಣ, ಮಾನಸಿಕ ತೊಂದರೆಯಿದ್ದರೆ 10 ಗ್ರಾಂ ಜಟಾಮಾಂಸಿ ಚೂರ್ಣ ಕಲಿಸಿಟ್ಟುಕೊಂಡು ದಿನವೂ 3 ಬಾರಿ, ಬಾರಿಯೊಂದಕ್ಕೆ ಒಂದೆರಡು ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿರಬೇಕು.

**ಮಧುಮೇಹ ತೊಂದರೆಗಳಿಗೆ**

ನಿತ್ಯವೂ ಬೆಳಗ್ಗೆ, ಸಂಜೆ ಬಾರಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು 50 ಮಿ.ಲೀ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಮಧುಮೇಹ ವ್ಯಾಧಿ ನಿಯಂತ್ರಣಕ್ಕೆ ಬರುವುದಲ್ಲದೇ ಮಧು ಮೇಹದಿಂದ ಭವಿಷ್ಯದಲ್ಲಿ ಮೆದುಳು, ನರಗಳ ಸಮಸ್ಯೆ ಕಣ್ಣು, ಚರ್ಮ, ಮೂತ್ರಪಿಂಡಗಳು ಶೀಘ್ರ ವ್ಯಾಧಿಗ್ರಸ್ತವಾಗುವುದನ್ನು ತಡೆಯಬಹುದು.

ಮಧುಮೇಹದಿಂದಾಗಿ ಬರುವ ಮೂತ್ರನಾಳ, ಜನನೇಂದ್ರಿಯ ವ್ಯಾಧಿಗಳು, ಫಂಗಸ್ ತೊಂದರೆಗಳು, ದಾಂಪತ್ಯ ಜೀವನಕ್ಕೆ ಸಂಬಂಧಿಸಿದ ಎಷ್ಟೋ ತೊಂದರೆ ಗಳಿಂದ ರಕ್ಷಣೆ ಪಡೆಯಬಹುದು.

**ಹಲ್ಲಿನ ಮೂಲದ ಸಮಸ್ಯೆಗಳು**

ದಿನಕ್ಕೊಂದು ಬಾರಿ ತ್ರಿಫಲ ಚೂರ್ಣವನ್ನು ದಂತ ಧಾವನ ಚೂರ್ಣವಾಗಿ ಉಪಯೋಗಿಸುತ್ತಿದ್ದರೆ ಹಲ್ಲು ನೋವು, ವಸಡಿನ ಬಾವು, ವಸಡಿನಿಂದ ಕೀವು - ರಕ್ತ ಬರುವುದು ವಸುಡಿನ ಸೆಳೆತ,ಸಂವೇದನೆಯಂತಹ ಸಮಸ್ಯೆಗಳು ಶಮನಗೊಂಡು ದಂತಗಳು, ವಸಡುಗಳು ಸಧೃಢವಾಗಿಯೂ ಆರೋಗ್ಯವಾಗಿಯೂ ಇರುತ್ತದೆ.

ಮಹಾತ್ರಿಫಲಾದಿ ಘೃತಂ, ತ್ರಿಫಲಾಸವ, ತ್ರಿಫಲಾ ಗುಗ್ಗುಲ, ಸಪ್ತಾಮೃತ ಲೇಹ ಮೊದಲಾದ ಔಷಧಿಗಳ ತಯಾ ರಿಕೆಯಲ್ಲಿ ಕೂಡಾ ಈ ತ್ರಿಫಲಾಗಳನ್ನು ಬಳಸುತ್ತಾರೆ.

ಪ್ರಾಮಾಣಿಕವಾಗಿ ಶಾಸ್ತ್ರೋಕ್ತವಾಗಿ ಕಂಪನಿಗಳವರು ತಯಾರಿಸುವ ತ್ರಿಫಲಚೂರ್ಣ ಆಯುರ್ವೇದ ಔಷಧಾಲಯ ಗಳಲ್ಲಿ ಲಭಿಸುತ್ತದೆ.

# ಕೇನೋಪನಿಷತ್

- ಶ್ರೀಮತಿ. ಎ. ಗೀತಾ ವೀರರಾಘವನ್

ಈ ಉಪನಿಷತ್ತಿನ ಮೊದಲನೆಯ ಮಂತ್ರವು "ಕೇನ" ಎಂಬ ಪದದಿಂದ ಆರಂಭವಾಗುವುದರಿಂದ ಇದನ್ನು "ಕೇನೋಪನಿಷತ್" ಎಂದು ಹೇಳುತ್ತಾರೆ. ಇದನ್ನು "ತಲವಾಕರ" ಉಪನಿಷತ್ ಎಂದೂ ಹೇಳುತ್ತಾರೆ. ಈ ಉಪನಿಷತ್ತು ಸಾಮವೇದಕ್ಕೆ ಸೇರಿದುದು. ಇದರಲ್ಲಿ ನಾಲ್ಕು ಖಂಡಗಳಿವೆ. ಮೊದಲೆರಡು ಖಂಡಗಳು ಪದ್ಯರೂಪವಾಗಿವೆ. ಮುಂದಿನ ಎರಡು ಖಂಡಗಳು ಗದ್ಯರೂಪವಾಗಿವೆ. ಇದರಲ್ಲಿ ಮುವತ್ನಾಲ್ಕು ಮಂತ್ರಗಳಿವೆ.

ಈ ಉಪನಿಷತ್ತು ಬಹಳ ಮಹತ್ವವಾದ ಪ್ರಶ್ನೆಗಳಿಂದ ಪ್ರಾರಂಭವಾಗುತ್ತದೆ. ಮೊದಲಿಗೆ "ಮನಸ್ಸನ್ನು ಪ್ರೇರೇಪಿಸುವವರು ಯಾರು? ಪ್ರಾಣ ಮೊದಲಾದುವುಗಳಿಗೆ ಪ್ರಥಮ ಪ್ರವೃತ್ತಿಯನ್ನು ಕೊಡುವವರು ಯಾರು?" ಈ ಪ್ರಶ್ನೆಗಳು ನಮ್ಮ ಅನುಭವಗಳೇ ಸತ್ಯವಲ್ಲ. ಅವು ಒಂದು ನಿತ್ಯವಾದ ತತ್ವದ ಮೇಲೆ ಆಧಾರವಾಗಿವೆ ಎಂಬುದನ್ನು ತಿಳಿಸಿಕೊಡುತ್ತವೆ. ಪ್ರಥಮ ಖಂಡದಲ್ಲಿ ಭಗವಂತನ ಪರಸ್ವರೂಪವನ್ನು ನಿರೂಪಿಸಿದೆ. ಅದು ಸಕಲೇತರ ವಿಲಕ್ಷಣವಾದುದು. ಇಂದ್ರಿಯಗಳು, ಬುದ್ಧಿ ತಮ್ಮ ಕಾರ್ಯನಿರ್ವಹಿಸಲು ಆ ಪರಬ್ರಹ್ಮನನ್ನು ಅವಲಂಬಿಸಿವೆ. ಆದರೆ ಇಂದ್ರಿಯಗಳಿಗೆ, ಮನಸ್ಸಿಗೆ ಅವನು ಗೋಚರವಾಗುವುದಿಲ್ಲ. ಚಿಕ್ಕ ಚಿಕ್ಕ ಮಂತ್ರಗಳಿಂದ ಈ ಉಪನಿಷತ್ತು ಬ್ರಹ್ಮ ಸ್ವರೂಪವನ್ನು ಬಹಳ ಪ್ರಭಾವ ಪೂರ್ಣವಾಗಿ ವರ್ಣಿಸುತ್ತದೆ. "ಯಾವುದನ್ನು ಕಣ್ಣಿನಿಂದ ಕಾಣುವುದಕ್ಕಾಗುವುದಿಲ್ಲವೋ ಯಾವುದರಿಂದ ಕಣ್ಣುಗಳು ಕಾಣುತ್ತವೆಯೋ ಅದು ಬ್ರಹ್ಮವೆಂದು ತಿಳಿ."- ಇಂತಹ ಸೂಕ್ಷ್ಮವಾದ ವಾಕ್ಯಗಳಿಂದ ಬ್ರಹ್ಮ ಸ್ವರೂಪವನ್ನು ವರ್ಣಿಸಿದೆ. ಬ್ರಹ್ಮವೂ ಎಲ್ಲಕ್ಕೂ ಕಾರಣ. ಆದರೆ ಅದನ್ನು ಯಾವುವೂ ಅರಿಯಲಾರೆವು. ಬ್ರಹ್ಮವು ವಿದಿತವಾದುದಕ್ಕಿಂತ ಬೇರೆಯಾದುದು. ಅವಿದಿತವಾದುದಕ್ಕಿಂತ ಬೇರೆಯಾದುದು.

ಈ ಉಪನಿಷತ್ತಿನ ಎರಡನೆಯ ಖಂಡದಲ್ಲಿ ಪರಬ್ರಹ್ಮನ ನಿಗೂಢ ಸ್ವರೂಪವನ್ನು ನಿರೂಪಿಸಿದೆ. ಅವನ ಅಪರಿಚ್ಛಿನ್ನತ್ವವನ್ನು ನಿರೂಪಿಸಿದೆ. "ಬ್ರಹ್ಮವನ್ನು ತಿಳಿದೆನು" ಎನ್ನುವವನು ಅದನ್ನು ತಿಳಿಯಲಿಲ್ಲ. "ಬ್ರಹ್ಮವನ್ನು ತಿಳಿದೆನು, ಆದರೆ ಪೂರ್ಣವಾಗಿ ತಿಳಿಯಲಾಗಲಿಲ್ಲ" ಎನ್ನುವವನು ಅದನ್ನು ತಿಳಿದಿದ್ದಾನೆ,

**ಈ ಉಪನಿಷತ್ತಿನ ಮೂರನೆಯ ಖಂಡದಲ್ಲಿ ಪರಬ್ರಹ್ಮನು ದೇವತೆಗಳಿಗೆ ವಿಜಯವನ್ನುಂಟು ಮಾಡಿದನು. ದೇವತೆಗಳು ವಿಜಯವು ಪರಬ್ರಹ್ಮನದೆಂದು ತಿಳಿಯಲಿಲ್ಲ.**

ಬ್ರಹ್ಮನು ಅಪರಿಚ್ಛಿನ್ನನಾಗಿರುವುದರಿಂದ ಸ್ವಲ್ಪ ತಿಳಿಯಬಹುದೇ ಹೊರತು ಯಾರೂ ಪೂರ್ತಿಯಾಗಿ ತಿಳಿಯಲಾಗುವುದಿಲ್ಲ. ಎರಡನೆಯ ಖಂಡದ ನಾಲ್ಕನೆಯ ಮಂತ್ರವು ಬಹಳ ಮಹತ್ವವುಳ್ಳದ್ದು. ನಾವು ತಿಳಿದಿರುವ ಮತ್ತು ತಿಳಿಯದಿರುವ ಎಲ್ಲಾ ಪದಾರ್ಥಗಳಿಗಿಂತ ಬ್ರಹ್ಮ ವಿಲಕ್ಷಣವಾದುದು (ಬೇರೆಯಾದುದು). ಇಲ್ಲಿ "ಪ್ರತಿಬೋಧ" ಎನ್ನುವ ಜ್ಞಾನವು ಸತ್ಯತ್ವ, ಜ್ಞಾನತ್ವ, ಅನಂತತ್ವ ಮುಂತಾದುವುಗಳನ್ನು ನಿರೂಪಿಸುತ್ತದೆ.

ಈ ಉಪನಿಷತ್ತಿನ ಮೂರನೆಯ ಖಂಡದಲ್ಲಿ ಪರಬ್ರಹ್ಮನು ದೇವತೆಗಳಿಗೆ ವಿಜಯವನ್ನುಂಟು ಮಾಡಿದನು. ದೇವತೆಗಳು ವಿಜಯವು ಪರಬ್ರಹ್ಮನದೆಂದು ತಿಳಿಯಲಿಲ್ಲ. ಅದು ತಮ್ಮದೇ ಮಹಿಮೆ ಎಂದು ತಿಳಿದರು. ಆಗ ಬ್ರಹ್ಮನು ಒಬ್ಬ ಯಕ್ಷನ ರೂಪದಲ್ಲಿ ಅವರ ಮುಂದೆ ತೋರಿದನು. ದೇವತೆಗಳ ಮೇಲೆ ಕರುಣೆಯಿಂದ ಅವರ ಒಣ ಜಂಬವನ್ನು ಹೋಗಲಾಡಿಸಲು ಪರಬ್ರಹ್ಮನು ಒಬ್ಬ ಯಕ್ಷನ ರೂಪದಲ್ಲಿ ದೇವತೆಗಳ ಮುಂದೆ ತೋರಿ ಬಂದನು. ಆ ಯಕ್ಷನು ಆಶ್ಚರ್ಯಕರನಾಗಿದ್ದನು.

ಆಗ ದೇವತೆಗಳು ಜಾತವೇದ (ಅಗ್ನಿ) ಯನ್ನು ಯಕ್ಷನು ಯಾರೆಂದು ತಿಳಿಯಲು ಕಳುಹಿಸಿದರು. ಯಕ್ಷನು ಅವನನ್ನು ಅವನ ಶಕ್ತಿ ಏನೆಂದು ಕೇಳಿದನು. ಆಗ ಅಗ್ನಿಯು ಈ ಭೂಮಿಯ ಮೇಲಿರುವ ಎಲ್ಲವನ್ನೂ ತಾನು ಸುಟ್ಟು ಭಸ್ಮ ಮಾಡಬಲ್ಲೆನೆಂದನು. ಯಕ್ಷನು ಅವನ ಮುಂದೆ ಒಂದು ಒಣ ಹುಲ್ಲನ್ನಿಟ್ಟು ಸುಡಲು ಹೇಳಿದನು. ಅಗ್ನಿಗೆ ಸಾಧ್ಯವಾಗಲಿಲ್ಲ. ಅವನು ಹಿಂತಿರುಗಿದನು. ದೇವತೆಗಳು ವಾಯುವನ್ನು ಕಳುಹಿಸಿದರು. ಯಕ್ಷನು ವಾಯುವನ್ನು ಅವನ ಸಾಮರ್ಥ್ಯವೇನೆಂದು ಕೇಳಿದನು. ಅವನು ಈ ಭೂಮಿಯಲ್ಲಿರುವ ಎಲ್ಲವನ್ನೂ ನಾನು ಗಾಳಿಯಲ್ಲಿ ಹಾರಿಸಿಕೊಂಡು ಹೋಗಬಲ್ಲೆನೆಂದನು, ಪುನಃ ಯಕ್ಷನು ಬಂದು ಒಣಹುಲ್ಲನ್ನಿಟ್ಟು ಇದನ್ನು ಹಾರಿಸಿಕೊಂಡು ಹೋಗೆಂದನು. ವಾಯುವಿಗೆ ಸಾಧ್ಯವಾಗಲಿಲ್ಲ. ಆಗ ದೇವತೆಗಳು ಇಂದ್ರನಿಗೆ ಈ ಯಕ್ಷನು ಯಾರೆಂದು ತಿಳಿಯುತ್ತಿಲ್ಲವೆಂದರು. ಇಂದ್ರನು ಮುಂದೆ ಬಂದನು. ಒಡನೆಯೇ ಯಕ್ಷನು ಮಾಯವಾದನು. ಆಗ ಅದೇ ಸ್ಥಳದಲ್ಲಿ ಸರ್ವಾಭರಣ ಭೂಷಿತೆಯಾದ ಹಿಮವಾನ್ ಪುತ್ರಿ ಉಮಾ

ದೇವಿ ಇಂದ್ರನ ಮುಂದೆ ಬಂದು “ ಈ ಯಕ್ಷನು ಬ್ರಹ್ಮ” ಎಂದು ಉಪದೇಶಿಸಿದಳು.

ಈ ಉಪನಿಷತ್ತಿನ ನಾಲ್ಕನೆಯ ಅಧ್ಯಾಯದಲ್ಲಿ ಉಮಾ ದೇವಿ ಇಂದ್ರನಿಗೆ ದೇವತೆಗಳು ತಮ್ಮಿಂದ ವಿಜಯ ಉಂಟಾಯಿತೆಂಬ ಒಣ ಜಂಬವನ್ನು ಬಿಡಬೇಕೆಂದೂ ಅದನ್ನು ಬಿಡಿಸಲು ಪರಬ್ರಹ್ಮನು ಯಕ್ಷನ ರೂಪದಲ್ಲಿ ಅವರ ಮುಂದೆ ಪ್ರತ್ಯಕ್ಷನಾದನೆಂದು ತಿಳಿಸುತ್ತಾಳೆ.

ಅಗ್ನಿ, ವಾಯು ಮತ್ತು ಇಂದ್ರ ಇವರು ಮೂವರಲ್ಲಿ ಇಂದ್ರನು ಪರಬ್ರಹ್ಮನನ್ನು ಅತ್ಯಂತ ಹತ್ತಿರದಲ್ಲಿ ಕಂಡುದರಿಂದ ಅವನು ಉಳಿದ ದೇವತೆಗಳಿಗಿಂತ ಶ್ರೇಷ್ಠನಾದನು.

ಈ ಅಧ್ಯಾಯದ ನಾಲ್ಕನೆಯ ಮಂತ್ರದಲ್ಲಿ ಪರಬ್ರಹ್ಮ ಸ್ವರೂಪವನ್ನು ತಿಳಿಸಲಾಗಿದೆ.ಒಂದು ಕ್ಷಣ ಮಿಂಚಿನಂತೆ ಗೋಚರಿಸಿ ಮರೆಯಾದ ಪರಬ್ರಹ್ಮನನ್ನು ಆಕಾಶದಲ್ಲಿರುವ ಮಿಂಚಿಗೆ ಉಪಮಾನವಾಗಿ ತಿಳಿಸಿದೆ.

ಈ ಅಧ್ಯಾಯದ ಆರನೆಯ ಮಂತ್ರದಲ್ಲಿ ಪರಬ್ರಹ್ಮನ ಸಾರ್ವ ಭೌಮತ್ವವನ್ನೂ, ಮಹಿಮೆಯನ್ನೂ ಹೇಳಿ ಎಲ್ಲರೂ ಪರಬ್ರಹ್ಮನನ್ನೇ ಉಪಾಸನೆ ಮಾಡಬೇಕೆಂದೂ ಅವನನ್ನೇ ಎಲ್ಲಾ ಬೇಡಿಕೆಗಳಿಗೆ ಪ್ರಾರ್ಥಿಸಬೇಕೆಂದು ತಿಳಿಸಿದೆ.

ಈ ಉಪನಿಷತ್ತಿನಲ್ಲಿ ಉಪಾಸನೆಯ ಸ್ವರೂಪವನ್ನು ನಿರೂಪಿಸಿದೆ. ಅದೇ ಭಗವತ್ ಗೀತೆಯ ಭಕ್ತಿಯೋಗದಲ್ಲಿ ವಿವರವಾಗಿ ತಿಳಿಸಲ್ಪಟ್ಟಿದೆ.

ಈ ಉಪನಿಷತ್ತಿನಲ್ಲಿ ವೇದಾಂತದ ಎಲ್ಲಾ ವಿವರಗಳನ್ನು ತಿಳಿಸಲಾಗಿದೆ.

ಈ ಉಪನಿಷತ್ತಿನ ಸಂದೇಶ ಈ ರೀತಿಯಾಗಿ ಗುರುತಿಸಬಹುದು.

೧) ಒಂದು ವಿಶ್ವಶಕ್ತಿಯು ಈ ಲೋಕದ ಸಮಸ್ತ ಎಲ್ಲಾ ವ್ಯಾಪಾರಗಳನ್ನೂ ಪ್ರೇರೇಪಿಸುತ್ತದೆ.

೨) ಮಾನವರು ಪಡೆದುಕೊಂಡಿರುವ ಜ್ಞಾನ ಅತ್ಯಲ್ಪವಾದುದು, ಅವರಿಗೆ ತಿಳಿಯದೇ ಇರುವಂತಹದು ಅಪಾರವಾಗಿದೆ.

೩) ಮನುಷ್ಯನ ಆಯಸ್ಸು ಅತ್ಯಂತ ಕಡಿಮೆಯಾದುದು. ಆದುದರಿಂದ ಕಾಲವನ್ನು ವ್ಯರ್ಥಗೊಳಿಸದೆ ಆತ್ಮ ಜ್ಞಾನವನ್ನು ಪಡೆದುಕೊಳ್ಳಬೇಕು.

೪) ಮನುಷ್ಯನು ಇಂದ್ರಿಯ ನಿಗ್ರಹ, ತಪಸ್ಸು, ಮನಸ್ಸಿನ ಸಂಯಮ, ಶೌಚ, ಆಸ್ತಿಕ್ಯ ಮೊದಲಾದ ಒಳ್ಳೆಯ ಗುಣಗಳನ್ನು ಪ್ರಯತ್ನಪಟ್ಟು ಸಂಪಾದಿಸಿಕೊಳ್ಳಬೇಕು. ಆತ್ಮ ಗುಣಗಳನ್ನು ಸಂವರ್ಧನೆ ಮಾಡಿಕೊಳ್ಳಬೇಕು.

೫) ಪ್ರತಿಯೊಂದು ವಸ್ತುವಿನಲ್ಲೂ ಆತ್ಮ ಸ್ವರೂಪವನ್ನು ಕಾಣಬೇಕು.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

**ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.**

**ದೂರವಾಣಿ ಸಂಖ್ಯೆ -0877-2263261**

**ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು**

**ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.**

## 2019 ಜನವರಿ 27, 28 ರಂದು ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ತಿ.ತಿ.ದೇವಸ್ಥಾನವು ನೂತನವಾಗಿ ನಿರ್ಮಿಸಿದ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ನಡೆದ ವಿಗ್ರಹ ಪ್ರತಿಷ್ಠಾಪನೆ, ಕಲಶಸ್ಥಾಪನೆ, ಮಹಾಕುಂಭಾಭಿಷೇಕದ ದೃಶ್ಯಗಳು



ಯಾಗ ಕಾರ್ಯಕ್ರಮ



ಪೂರ್ಣಾಹುತಿ



ಪವಿತ್ರಜಲದೊಂದಿಗೆ ತಿ.ತಿ.ದೇ. ಅರ್ಚಕ ಬೃಂದ, ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ



ಗರ್ಭಾಲಯ ಮಹಾಸಂಪ್ರೋಕ್ಷಣೆ



ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದ ದೃಶ್ಯ - ಕನ್ಯಾಕುಮಾರಿ

## ಜನವರಿ 31, 2019 ರಂದು ಆಂಧ್ರಪ್ರದೇಶ ರಾಜ್ಯ ರಾಜಧಾನಿಯಾದ ಅಮರಾವತಿಯಲ್ಲಿ ನೂತನವಾಗಿ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ ನಿರ್ಮಾಣದ ಪ್ರಾರಂಭೋತ್ಸವದಲ್ಲಿ ತಿ.ತಿ.ದೇ. ನಿರ್ವಹಿಸಿದ ಭೂಕರ್ಷಣೆ, ಬೀಜಾವಾಪನ ದೃಶ್ಯಗಳು



ವಾಸ್ತು ಹೋಮಾದಿ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿರುವ ಋತ್ವಿಜರು



ನೂತನವಾಗಿ ಸ್ವಾಮಿಯವರ ಆಲಯ ನಿರ್ಮಾಣದ ಸಂದರ್ಭದಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಯವರಿಗೆ, ಪ್ರಜೆಗಳಿಗೆ ಆಶೀರ್ವಚನಗಳನ್ನು ನೀಡುತ್ತಿರುವ ತಿ.ತಿ.ದೇವಸ್ಥಾನದ ದೊಡ್ಡಜೀಯರ್ ಶ್ರೀ ಶ್ರೀ ಶ್ರೀ ಶಠಗೋಪ ರಾಮಾನುಜ ಜೀಯರ್ ಸ್ವಾಮಿಯವರು



ಮಹಾ ಪೂರ್ಣಾಹುತಿ




ಉಭಯದೇವಿಯರೊಂದಿಗೆ , ಸ್ವಾಮಿಯವರಿಗೆ ಸಮರ್ಪಿಸುತ್ತಿರುವ ನಕ್ಷತ್ರ ಆರತಿ



ಚತುರ್ವೇದ ಪಾರಾಯಣ



ಭೂಕರ್ಷಣಾ ಕಾರ್ಯಕ್ರಮವನ್ನು ನಿರ್ವಹಿಸುತ್ತಿರುವ ಆಂಧ್ರಪ್ರದೇಶದ ಮುಖ್ಯಮಂತ್ರಿ ಮಾನ್ಯ ಶ್ರೀ ನಾರಾ ಚಂದ್ರಬಾಬು ನಾಯುಡು ರವರು

## ಜನವರಿ 31, 2019 ರಂದು ಆಂಧ್ರಪ್ರದೇಶ ರಾಜ್ಯ ರಾಜಧಾನಿಯಾದ ಅಮರಾವತಿಯಲ್ಲಿ ನೂತನವಾಗಿ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯ ನಿರ್ಮಾಣದ ಪ್ರಾರಂಭೋತ್ಸವದಲ್ಲಿ ತಿ.ತಿ.ದೇ. ನಿರ್ವಹಿಸಿದ ಭೂಕರ್ಷಣೆ, ಬೀಜಾವಾಪನ ದೃಶ್ಯಗಳು



ಉಭಯ ದೇವಿಯರೊಂದಿಗೆ ಸ್ವಾಮಿಯವರಿಗೆ ಸ್ನಪನ ತಿರುಮಂಜನ



ಸ್ವಾಮಿಯವರಿಗೆ ಕಲ್ಯಾಣೋತ್ಸವ





ಆಲಯ ನಿರ್ಮಾಣದ ಪ್ರಣಾಳಿಕೆ ಮತ್ತು ಆಲಯದ ನಮೂನೆಯ ಬಗ್ಗೆ ಮುಖ್ಯಮಂತ್ರಿ ಮಾನ್ಯ ಶ್ರೀ ನಾರಾ ಚಂದ್ರಬಾಬು ನಾಯುಡು ರವರಿಗೆ
ವಿವರಿಸುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್, ಐ.ಎ.ಎಸ್.,



ಬೀಜಾವಾಪನ ಕಾರ್ಯಕ್ರಮದಲ್ಲಿ
ಮುಖ್ಯಮಂತ್ರಿಯವರು ಮಾನ್ಯ ಶ್ರೀ ನಾರಾ ಚಂದ್ರಬಾಬು ನಾಯುಡು ರವರು



ಅಶೇಷ ಸಂಖ್ಯೆಯಲ್ಲಿ ಪಾಲ್ಗೊಂಡ ಭಕ್ತರು





ಜನವರಿ 21 ರಂದು ತಿ.ತಿ.ದೇವಸ್ಥಾನದ ದೊಡ್ಡ ಜೀಯರ್ ಶ್ರೀ ಶ್ರೀ ಶ್ರೀ ಶಠಗೋಪ ರಾಮಾನುಜ ಜೀಯರ್ ಸ್ವಾಮಿಯವರ
ನೇತೃತ್ವದಲ್ಲಿ ತಿರುಪತಿ ಶ್ರೀ ಗೋವಿಂದ ರಾಜ ಸ್ವಾಮಿಯವರ ಮೂಲಮೂರ್ತಿಗೆ ರೇಷ್ಮೆವಸ್ತ್ರಗಳು,
ಮುತ್ತಿನಕವಚಗಳು, ಶಂಖುಚಕ್ರಗಳು, ಕಿರೀಟವನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೀಡುತ್ತಿರುವ ದೃಶ್ಯ.





ತಿರುಮಲೆಯಲ್ಲಿ 21-01-2019 ರಂದು ನಡೆದ ಶ್ರೀ ರಾಮಕೃಷ್ಣತೀರ್ಥ ಮುಕ್ಕೋಟಿಯ ದೃಶ್ಯ





ಜನವರಿ 26 ರಂದು 70 ನೇ ಗಣತಂತ್ರ ದಿನೋತ್ಸವ ಸಂದರ್ಭವಾಗಿ ತಿ.ತಿ.ದೇ ಆಡಳಿತ ಭವನದ ಕ್ರೀಡಾ ಮೈದಾನದಲ್ಲಿ
ನಮ್ಮ ದೇಶದ ಬಾವುಟವನ್ನು ಹಾರಿಸಿ ಅದಕ್ಕೆ ಗೌರವ ವಂದನೆಯನ್ನು ಸಲ್ಲಿಸುತ್ತಿರುವ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್. ಈ ಕಾರ್ಯಕ್ರಮದಲ್ಲಿ ತಿ.ತಿ.ದೇ. ಸಂಯುಕ್ತ ಕಾರ್ಯನಿರ್ವಹಣಾಧಿಕಾರಿ (ತಿರುಪತಿ)
ಶ್ರೀ ಪೋಲಾಭಾಸ್ಕರ್, ಐ.ಎ.ಎಸ್. ವಿಜಿಲೆನ್ಸ್ ಮತ್ತು ಭದ್ರತಾಧಿಕಾರಿ ಶ್ರೀ ಗೋಪಿನಾಥ್‌ಜೆಟ್ಟಿ, ಐ.ಪಿ.ಎಸ್.
ಮತ್ತು ಉನ್ನತಾಧಿಕಾರಿಗಳು ಮತ್ತು ಉದ್ಯೋಗಿಗಳು ಪಾಲ್ಗೊಂಡರು.



# ಕೈಲಾಸ ವಾಸ ಗೌರೀಶ ಈಶ...


- ಪ್ರಣವ

ಶಿವರಾತ್ರಿಯ ಹಬ್ಬದ ಸಂಭ್ರಮದಲ್ಲಿ ವಿಶ್ವವ್ಯಾಪ್ತಿ ವಿಶ್ವೇಶ್ವರನನ್ನು ವಿಶ್ವದಾದ್ಯಂತ ಆರಾಧಿಸುವ ಈ ಸಂದರ್ಭದಲ್ಲಿ ವಿಜಯದಾಸರ ಈ ಸಾಲುಗಳು ನಮ್ಮ ಹೃದಯವನ್ನು ತಲುಪಿ ಆ ಮುಕ್ಕಣ್ಣನ ಮಹಿಮೆಯನ್ನು ಅರುಹುತ್ತಾ ನಮ್ಮಲ್ಲಿರುವ ಭಕ್ತಿಯನ್ನು  ಇಮ್ಮಡಿಗೊಳಿಸುತ್ತವೆ.

ಜನ ಸಾಮಾನ್ಯರ ಬಾಯಲ್ಲಿ ನಲಿದಾಡುವ ದಾಸರ ಪದಗಳು ಸಾಮಾಜಿಕ ಚಿಂತನೆಗೆ ನಮ್ಮನ್ನು ಒರೆಹಚ್ಚುತ್ತವೆ. ಹರಿದಾಸರು ತಮ್ಮ ಪದಗಳಲ್ಲಿ ಶಿವಾಮೃತವನ್ನು ಉಣಬಡಿಸಿದ್ದಾರೆ.

ಶಿವ ಎಂದರೆ ಸತ್ಯ, ಸುಂದರ, ಪ್ರಶಾಂತ, ಪ್ರಸನ್ನ ಮೂರ್ತಿ. ಆದರೆ ದುಷ್ಟರಿಗೆ ಪ್ರಳಯ ತಾಂಡವದ ರುದ್ರ ಮೂರ್ತಿಯೂ ಹೌದು. ಅವನ  ಅನುಗ್ರಹ ಬದುಕಿಗೆ ಧನ್ಯತೆಯನ್ನು ತಂದು ಕೊಡುತ್ತದೆ. ಚಂದ್ರಚೂಡ ಶಿವಶಂಕರ ಪಾರ್ವತಿ ರಮಣ ನಿನಗೆ, ನಮೋ ನಮೋ। ಸುಂದರ ಮೃಗಧರ ಪಿನಾಕಿ ಧನುಧರ ಗಂಗಾಶಿರ ಗಜಚರ್ಮಾಂಬರಧರ ಎಂದು ಶಿವನಲ್ಲಿ ಅನನ್ಯ ಶರಣಾಗುವ ಪುರಂದರದಾಸರು 'ಶಿವದರುಶನ ಎಮಗಾಯಿತು ಕೇಳಿ ಶಿವರಾತ್ರಿ ಜಾಗರಣೆ' ಎಂದು ಶಿವರಾತ್ರಿ ಸಂಭ್ರಮವನ್ನು ಕುರಿತೇ ವಿಶೇಷವಾಗಿ ಹಾಡಿದ್ದಾರೆ. 'ಚಂದ್ರಚೂಡ ಶಿವಶಂಕರ' ಹಾಡಂತೂ ನಾದ, ಲಯ, ವಿಶೇಷ ಶಬ್ದಗಳ ವೈಶಿಷ್ಟ್ಯತೆಯಿಲ್ಲ ಎಲ್ಲ ಸಂಗೀತಗಾರರ ಮನ ಸೆಳೆದಿದೆ. ಈ ಹಾಡಿನ ಕೊನೆಯಲ್ಲಿ ಶಿವನನ್ನು 'ಪುರಂದರವಿಠಲನಿಗೆ ಪ್ರಾಣಪ್ರಿಯನು ನೀನೇ' ಎಂದು ಹೇಳಿ ಪರಮಾತ್ಮನಿಗೆ ಹಾಗೂ ಹರಿದಾಸರಿಗೆ ಶಿವನು ಪ್ರಾಣಪ್ರಿಯ ಎಂದು ಹಾಡಿದ್ದಾರೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜಗನ್ನಾಥ ದಾಸರು 'ರುದ್ರ ನೀ  ಎನ್ನನು ಪಾಲಿಸೋ ವೀರಭದ್ರಾ, ರುದ್ರ. ನೀ ಎನ್ನ ಹೃದ್ರೋಗ ಕಳೆದು ಸಮುದ್ರನಿಲಯನ ಪದ ಭಕುತಿಯ ಛಿದ್ರವಿಲ್ಲದೆ ನೀಡು' ಎಂಬುವ ಹಾಡಿನಲ್ಲಿ 'ವೀರ ಭದ್ರ, ರುದ್ರ, ನಮ್ಮ ಹೃದಯ ರೋಗಗಳನ್ನು ನಿವಾರಿಸುವ ಮಹದೇವ' ಎಂದಿದ್ದಾರೆ. ಹರಿದಾಸ ಸಾಹಿತ್ಯ ಪ್ರವರ್ತಕತರಾದ ಶ್ರೀಪಾದರಾಜರು 'ವೃಷಭನೇರಿದ ವಿಷಧರನ್ಯಾರೆ ಪೇಳಮ್ಮ' ಎಂಬ ಹಾಡಿನಲ್ಲಿ ಶಿವ  ಜಟಾಜೂಟಧಾರಿ, ಕೈಲಾಸ ವಾಸಿ, ಫಣಿಭೂಷಣ,ದಾಕ್ಷಾಯನಿ ಪತಿ, ವಿಷಕಂಠ ಗಂಗಾಧರ ಎಂದೆಲ್ಲಾ ಪ್ರಶಂಸಿದ್ದಾರೆ. ವ್ಯಾಸರಾಜರು 'ನಮೋ ಪಾರ್ವತಿ ಪತಿನುತ ಜನಪರ ನಮೋ ವಿರೂಪಾಕ್ಷ'  ಎಂದು ಹಾಡಿ,ಶಿವನು ನುತ ಜನಪರ ಎಂದರೆ ಶುದ್ಧಾಂತಃ ಕರಣದಿಂದ, ನಿರ್ಮಲ ಭಕ್ತಿಯಿಂದ ಸ್ತುತಿಸುವ ದೈವ ಜನಪರನಾಗಿದ್ದಾನೆ. ಆತ ಜನರ ವಿಶೇಷ ಅಭಿಮಾನಿ ಎನ್ನುವುದನ್ನು ನಿರೂಪಿಸಿದ್ದಾರೆ. ವಾದಿರಾಜರಂತೂ ಶಿವನನ್ನು ಗುರುಕುಲೋತ್ತುಂಗ ಎಂದು ಸ್ತುತಿಸಿದ್ದಾರೆ. ಅಷ್ಟೇ ಅಲ್ಲ ಒಂದು ಮೂರುತಿಯಲ್ಲಿ ಹರಿಹರದಾಸರಿಬ್ಬರೂ ಇರುವುದನ್ನು ನಾವು ಕಂಡು ಅದನ್ನು ಕೀರ್ತಿಸಿದ್ದಾರೆ.



## ಶಿವನ ವಿಶೇಷ ಗುಣಗಳು

'ಕಂಡೆ ಕರುಣಾನಿಧಿಯ ಗಂಗೆಯ ಮಂಡೆಯೊಳಿಟ್ಟ ಧೊರೆಯ' ಎನ್ನುವ ಪ್ರಸಿದ್ಧ ಹಾಡಿನಲ್ಲಿ ಪುರಂದರದಾಸರು ಶಿವನನ್ನು ಭಸಿತ ವಿಭೂತ, ಪಶುಪತಿ, ಶಶಿಶೇಖರ, ಕಪ್ಪು ಗೊರಳ, ಕಂದರ್ಪಪಿತ, ಮುಪ್ಪುರಗೆಲಿದವ, ಕಾಮ ಸುಂದರ, ಗಜಚರ್ಮಾಂಬರ,ಗೌರೀವರ ಜಗದೀಶ್ವರ, ತ್ರಿಜಗನ್ಮೋಹಕ, ತ್ರಿಪುರಾಂತಕ, ತ್ರಿಲೋಚನ' ಎಂಬ ಅನೇಕ ವಿಶೇಷಣಗಳಿಂದ ಸ್ತುತಿಸಿದ್ದಾರೆ.ಕನಕದಾಸರಂತೂ ಜನರಿಗೆ 'ಶಿವಶಿವ ಎನ್ನಿರೋ ಮೂರ್ಜಗದವರೆಲ್ಲಾ' ಎಂದು ಹೇಳಿ 'ಭುವನಕ್ಕೆ ಬಲ್ಲಿದರಾಗ ಬೇಕೆಂದರೆ, ಸದ್ಗುರುವಾಗಬೇಕಾದರೆ, ತತ್ವಪತಿ ಆದಿಕೇಶವನ ಕೂಡಬೇಕಾದರೆ 'ಶಿವಶಿವ ಎನ್ನಿರೋ ಎಂಬ ಸಂದೇಶ ಸಾರುತ್ತಾರೆ.

## ಹರಿದಾಸ ಸಾಹಿತ್ಯದಲ್ಲಿ ಶಿವತತ್ತ್ವ

ಪ್ರಸನ್ನವೆಂಕಟದಾಸರು 'ಬೇಸರದೆಂದು ಸದಾಶಿವ ನೆನ್ನಿ' ಎನ್ನುತ್ತ 'ನಂಬೆ ಭವಾಂಬುದಿ ಅಂಜಿಗನೆನ್ನಿ' ಎಂದು ಹೇಳಿ ಸದಾಶಿವ ಭವಸಾಗರ ದಾಟಿಸುವ ಮಹದೇವ ಎಂದು ಸಾರುತ್ತಾರೆ. ಕೇಳಿದ ವರವನ್ನು ನೀಡುವ, ಅಪಮೃತ್ಯುವನ್ನು ದೂರಮಾಡುವ ದೈವವೇ ರುದ್ರದೇವರು ಎನ್ನುತ್ತಾರೆ.

ಹರಿಕೃಥಾಮೃತಸಾರದಂತಹ ಆಧ್ಯಾತ್ಮಿಕ ಮಹಾ ಕಾವ್ಯ ರಚಿಸಿದ ಜಗನ್ನಾಥದಾಸರು ಶಿವನನ್ನು ಮುಕ್ತ ಕಂಠದಿಂದ ಪ್ರಶಂಸಿಸುತ್ತಾ ಚಂದ್ರಶೇಖರ, ನಂದಿವಾಹನ, ಮಂದಾಕಿನಿಧರ, ಗುಣಸಾಂದ್ರ, ಕೃತ್ತಿವಾಸ, ಶುಭಕಾಯ, ರುಂಡಮಾಲಿ, ಮೃಗವರಪಾಣಿ, ಶೈಲಜಾರಮಣ, ತ್ರಿಪುರಾರಿ, ಸಂಭವ, ಪ್ರಮೇಥೇಶ, ಮೃಡದೇವ, ವ್ಯೂಮಕೇಶ ಉಮಾ ಮನೋಹರ, ವಿರೂಪಾಕ್ಷ, ಉಗ್ರತಪ, ಲೋಚನತ್ರಯ, ಅಮ ರೇಶ, ಭೂತನಾಥ, ಧೂರ್ಜಟ, ಸುಮನೋತ್ತಂಸ, ಕಾಮ ಹರ,ಕೈಲಾಸಮಂದಿರ, ಸೋಮಾಸೂರ್ಯಾ ನಲ ಲೋಚನ,ಪರಮ ಪವಿತ್ರ ಸುಚರಿತ್ರ ರಾವಣಮದ ಭಂಜನ ದಕ್ಷಯಜ್ಞ ಭಂಜನ, ವೈರಾಗ್ಯಾಧಿಪತಿ, ಯಕ್ಷಪತಿ ಸುಖ, ನಾಗಭೂಷಣ, ಪಂಪಾಪುರ ನಿವಾಸ ಎಂದು ಸುತ್ತಿಸಿದ್ದಾರೆ.

## ಸಂಗೀತ ಬದ್ಧ ರೂಪ

ಗುರುಮಹಿಪತಿದಾಸರು 'ಪಾಹಿಮಾಂ ಪಾಹಿ ಹರ ಮೃಢಶಂಭೋ' ಎಂಬ ಹಾಡಿನಲ್ಲಿ 'ಅದ್ರಿಧರಪ್ರಿಯ ಅದ್ರಿ ಕೃತಾ ಲಯ ಅದ್ರಿ ಜಾಮಾತಾದ್ರಿರಿಪುನುತ ಅದ್ರಿಜೆ ಪತಿ ಪಾಪಾದ್ರಿ ಕುಲಿಶಾದ್ರಿ ಶರಾಸನ ಮುದ್ರಿತಪಾಣೆ;ಉನ್ಮತ್ತದಿಂದಲಿ ಮನ್ಮಥ ಬರಲು ದಹನ ಮಾಡಿದ ಷಣ್ಮುಖ ಜನಕನೆ ಉನ್ಮನಯೋಗಿ ಸನ್ನುತ ಲೀಲಾ ಜನ್ಮರತ ಘನ ಚಿನ್ಮಯ ರೂಪಾ' ಎಂದು ಸಂಗೀತ ಬದ್ಧವಾಗಿ ಹಾಡಿದ್ದಾರೆ.

ಹೆಳವನಕಟ್ಟೆ ಗಿರಿಯಮ್ಮ ಹರಿಹರರ ಬಗ್ಗೆ ಒಂದೇ ಹಾಡಿನಲ್ಲಿ ಹೇಳುತ್ತ 'ಈತ ರಂಗನಾದ ಹರಿಯು, ಆತ ಲಿಂಗನಾದ ಹರನು, ಕಂಗಳು ಮೂರುಳ್ಳವನಾತ, ಮಂಗಳ ದೇವೇಶನೀತ ತುಂಗ ಹೆಳವನಕಟ್ಟೆ ರಂಗನೀತ, ಲಿಂಗನೀತ' ಎಂದು ಇಬ್ಬರನ್ನು ಒಟ್ಟಿಗ್ಗೇ ಸ್ತುತಿಸಿದ್ದಾರೆ. ಬಡೇಸಾಹೇಬ ರೆಂದೇ ಪ್ರಖ್ಯಾತರಾದ ರಾಮದಾಸರು ನೂರೆಂಟು ನುಡಿಗಳ ಶಂಭು ಶತಾಷ್ಟಕ ಎಂಬ ವಿಶಿಷ್ಟ ಕೃತಿಯನ್ನೇ ರಚಿಸಿ ಶಿವ ಭಕ್ತಿಯನ್ನು ಮೆರೆದಿದ್ದಾರೆ. ಹದಿನೇಳು ನುಡಿಗಳ 'ದೋಷನಾಶ ಜಗದೀಶ ಈಶ' ಎಂಬ ಅವರ ಭಜನೆಯ ಹಾಡು 'ದಂಡ ಧರನೆ ಹರ ರುಂಡಮಾಲಿ ರುದ್ರ ಕೊಂಡನಯನ ಸದಾನಂದ ಹರ ಜೈ ಜೈ ಪರಮಾನಂದ, ಎಂದು ಮನತುಂಬಿ ಭಜಿ ಸಿದ್ದಾರೆ. ಜಗನ್ನಾಥದಾಸರಶಿಷ್ಯರಾದ ಪ್ರಾಣೇಶದಾಸ ರಂತೂ 'ಶಿವ ಭಕ್ತನಾಗೋ ಪ್ರಾಣಿ. ಅವನಿಯಲ್ಲಿ ಪರದಲ್ಲಿ' ಎಂದು ಕರೆ ನೀಡುತ್ತಾರೆ. ಹರಪನ ಹಳ್ಳಿ ಭೀಮವ್ವನವರು 'ಕಾಶಿ ವಿಶ್ವೇಶ್ವರ ಗಂಗಾಧರ ಹಿಂಗಿಸೆನ್ನ ಲಿಂಗ ಭಂಗ ಬಡಿಸೋ ನರಸಿಂಹ ಭಕ್ತ ಎಂದು ಹಂಪೆಯವಾಸಿ ಪಂಪಾಪತಿಯನ್ನು ಸ್ತುತಿಸುತ್ತಾರೆ.

ಹರಿದಾಸ ಸಾಹಿತ್ಯದಲ್ಲಿ ಶಿವನ ಸ್ಥಾನ ಮುಖ್ಯ ವಾದುದು. ಏಕೆಂದರೆ ನಮ್ಮ ಮನಸ್ಸು, ಬುದ್ಧಿ, ಚಿಂತನೆ, ನಿರ್ಣಯ ನಿರ್ಧಾರಗಳನ್ನು ಉತ್ತಮವಾಗಿಸಲು ಶಿವನ ಅನು ಗ್ರಹ ಅತ್ಯವಶ್ಯಕ. ಇಂದ್ರಿಯಗಳನ್ನು ನಿಯಂತ್ರಿಸಬೇಕಾದರೆ

ಮಾರನನ್ನು ಗೆದ್ದ ಮನೋಹರ ಮೂರ್ತಿ ಶಿವನನ್ನು ಆರಾಧಿಸಬೇಕು. ಜಪತಪ, ಅನುಷ್ಠಾನ ತ್ಯಾಗ, ವೈರಾಗ್ಯ, ಶಾಂತಿ, ಸಹನೆ, ಸರಳತೆಯ ಸಾಕಾರದೈವ ಶಿವ ಸೂರ್ಯಚಂದ್ರರು ಅವನ ಎರಡು ಕಣ್ಣುಗಳು. ಮೂರನೆಯ ಕಣ್ಣು ಜಗತ್ತನ್ನೇ ಸುಡಬಲ್ಲ ಅಗ್ನಿ. ಹಾಗೆಯೇ ಜ್ಞಾನ ಹಾಗೂ ವಿವೇಕದ ಮೂಲ ನೆಲೆ ಅದು. ವ್ಯೋಮಕೇಶನಾದ ಅವನ ತಲೆಗೂದಲೇ ಆಕಾಶ, ಪವಿತ್ರಳಾದ ಗಂಗೆಯನ್ನೇ ಶಿರದಲ್ಲಿ ಧರಿಸಿರುವ ಪವಿತ್ರ ಸ್ವರೂಪ ಅವನು. ಅರ್ಧಾಂಗಿಗಾಗಿ ತನ್ನ ದೇಹದ ಅರ್ಧಭಾಗವನ್ನೇ ತ್ಯಾಗ ಮಾಡಿದ ಅವನು ಅರ್ಧನಾರೀಶ್ವರ.

## ಮನಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ ಅನಲಾಕ್ಷ

ಕನ್ನಡನಾಡಿನ ಎಲ್ಲ ಹರಿದಾಸರು ರುದ್ರ ದೇವರನ್ನು ವಿಶೇಷವಾಗಿ ಸ್ತೋತ್ರಗೈದಂತೆ ವಿಜಯದಾಸರೂ ಕೂಡ ತಮ್ಮ 'ಕೈಲಾಸವಾಸ ಗೌರೀಶ ಈಶ' ಎನ್ನುವ ಕೃತಿಯಲ್ಲಿ ಬಹಳ ಮಾರ್ಮಿಕವಾಗಿ ಶಿವನಲ್ಲಿ ಅರಿಕೆಯನ್ನು ಮಾಡಿಕೊಳ್ಳುತ್ತಾರೆ. ತೈಲ ಧಾರೆಯಂತೆ ಮನಸು ಕೊಡು ಎಂದು ದಾಸರು ಆ ಕೈಲಾಸ ವಾಸನಾದ ಗೌರಿ ರಮಣನನ್ನು ಪ್ರಾರ್ಥಿಸಬೇಕಾದರೇ ಅದಕ್ಕೊಂದು ನಿಖರವಾದ ಕಾರಣ ಇದ್ದೇ ಇರಬೇಕು. ಇನ್ನೂ ವಿಶೇಷವೆಂದರೇ ಈ ಕೃತಿಯ ರಚನೆ ಮಾಡಿದವರು ಸಾಕ್ಷಾತ್ ಭೃಗು ಋಷಿಗಳ ಅಂಶ ಸಂಭೂತರಾದ ಶ್ರೀ ವಿಜಯದಾಸ ಪ್ರಭುಗಳು.ದಾಸ ಸಾಹಿತ್ಯದ ಪುನರುತ್ಥಾನ ಕಾರ್ಯದಲ್ಲಿ ಅಗ್ರಗಣ್ಯರಾಗಿ ದಾಸ ಕೂಟ ಪರಂಪರೆಯನ್ನು ಎರಡನೇ ಘಟ್ಟದಲ್ಲಿ ಮುಂದುವರೆಸಿದ ಮಹಾಮಹಿಮರಾದ ವಿಜಯದಾಸರು ಭಗವತ್ ಪ್ರೀತಿಗಾಗಿ, ಲೋಕ ಕಲ್ಯಾಣಕ್ಕಾಗಿ ಕಾಯಕದ ಆಚರಣೆ ಮಾಡಿದವರು.

ಮನಸ್ಸು ನಾವು ಮರ್ಕಟಕ್ಕೆ ಹೋಲಿಕೆ ಮಾಡುತ್ತೇವೆ. ಅದಕ್ಕೆ ಕಾರಣ ಅದರ ಚಾಂಚಲ್ಯತೆ. ಮನಸ್ಸನ್ನು ನಿಗ್ರಹ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ಆದ್ದರಿಂದ ಇಲ್ಲಿ ದಾಸರಿಗೆ ಕೇವಲ ಶಿವನನ್ನು ಪ್ರಾರ್ಥನೆ ಮಾಡುವುದೊಂದೇ ಉದ್ದೇಶವಲ್ಲ ಜೊತೆಗೆ ಆ ಮನಸ್ಸಿನ ಚಂಚಲತೆಯ ಬಗ್ಗೆ ಕೂಡ ಅವರಿಗೆ ದುಗುಡವಿದ್ದಂತೆ ತೋರುತ್ತದೆ. ಆದ್ದರಿಂದಲೇ ಅವರು ಮನೋನಿಯಾಮಕವಾದ ಪರಮೇಶ್ವರನ ಮೊರೆ ಹೋಗಿ ಮನಸ್ಸಿನ ಅರ್ಥಾತ್ ಭಕ್ತಿಯ ಏಕಾಗ್ರತೆಯನ್ನು ಕರುಣಿಸು ಎಂದು ಭಿನ್ನವಿಸಿಕೊಳುತ್ತಾ ತೈಲ ಧಾರೆಯಂತೆ ಮನಸು ಕೊಡು ಎಂದು ಕೇಳಿಕೊಳ್ಳುತ್ತಾರೆ. ಮನಸ್ಸು ಕಾರಣವಲ್ಲ ಪಾಪ ಪುಣ್ಯಕ್ಕೆಲ್ಲ ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ ಎನ್ನುವ ಮಾತು ದಾಸರು ನೇರವಾಗಿ ಯಾವುದೇ ಅಳುಕಿಲ್ಲದೆ ಶಿವನನ್ನೇ ಪ್ರಶ್ನಿಸುವಂತಿದೆ. ಮನಸ್ಸು ನನ್ನ ಮಾತು ಕೇಳುತ್ತಿಲ್ಲ, ನನ್ನ ಹತೋಟಿಗೆ ಬರುತ್ತಿಲ್ಲ. ತತ್ ಕಾರಣ ಬರುವ ಪಾಪ ಪುಣ್ಯಗಳಿಗೆ ಮನಸ್ಸೇ ಹೊಣೆಯಾಗಿಸುವುದು ಎಷ್ಟು ಸರಿ? ಮನೋನಿಯಾಮಕ ನೀನೇ ಎಂದೆಲ್ಲಾ ನಿನ್ನನ್ನು ಸ್ತೋತ್ರ ಮಾಡುವಾಗ ಆ ಮನಸ್ಸನ್ನು ಕ್ಷಿಪ್ರ ಚಾಂಚಲ್ಯತೆಯಿಂದ ರಕ್ಷಿಸಿ ಆ ಮನೋ ವೈಕಲ್ಯವನ್ನು ತಪ್ಪಿಸಿ ಭಗವಂತನಲ್ಲಿಯ ಭಕ್ತಿಗೆ ಯಾವುದೇ ಚ್ಯುತಿ ಬಾರದಂತೆ ನೋಡಿಕೊಳ್ಳುವ ಭಾರ ನಿನ್ನದೇ ಅಲ್ಲವೇ ಎನ್ನುವ ಭಾವ ದಾಸರದ್ದು.

## ಹರಿದಾಸರ ಭಾವ

ಮಾರುತಿ ಶಿವನ ಅವತಾರ ಎಂಬ ನಂಬುಗೆ ಹಲವರದು. ಹೇಗೆ ಶ್ರೀರಾಮ ಚಂದ್ರನ ಒಲುಮೆ ಸಂಪಾದಿಸಲು ಹನುಮಂತನ ಆರಾಧನೆ ಮುಖ್ಯವೋ ಹಾಗೇ ಶ್ರೀ ಹರಿಯ ಒಲುಮೆಗೆ ಹರನ ನೆನೆಯುವುದು ಅಷ್ಟೆ ಮುಖ್ಯ ಎಂಬುದೇ ಹರಿದಾಸರ ಭಾವವಾಗಿದೆ. ಅದನ್ನೇ ವಿಜಯದಾಸರು 'ಕೈಲಾಸ ವಾಸ ಗೌರೀಶ ಈಶ ತೈಲ ಧಾರೆಯಂತೆ ಮನಸು ಕೊಡು ಹರಿಯಲ್ಲಿ ಶಂಭೋ' ಎಂದು ಸ್ತುತಿಸುತ್ತಾರೆ. ದೀಪದಲ್ಲಿ ಬತ್ತಿಯು ಮಧ್ಯಭಾಗದಲ್ಲಿರುತ್ತದೆ. ಸುತ್ತ ತೈಲವು ಹರಿಯುತ್ತಿರುತ್ತದೆ. ಒಮ್ಮೆ ದೀಪ ಬೆಳಗಲು ಪ್ರಾರಂಭವಾದೊಡನೆ ಬತ್ತಿಯು ತನ್ನ ಸುತ್ತಣ ತೈಲವನ್ನು ತನ್ನತ್ತ ಸೆಳೆದುಕೊಳ್ಳಲು ಪ್ರಾರಂಭಿಸುತ್ತದೆ. ಇಲ್ಲಿ ಉರಿವ ದೀಪ ಏಕಾಗ್ರತೆಯ ಸಂಕೇತ ವಾಗುತ್ತದೆ. ಜ್ಞಾನೋ ಜ್ಯೋತಿಯಾಗುತ್ತದೆ. ಹಾಗೆಂದೇ ವಿಜಯದಾಸರು, ಚಂಚಲ ಚಿತ್ತವಾದ ಮನಸ್ಸನ್ನು ಅತ್ತಿಂದಿತ್ತ ಹರಿಯ ಗೊಡದೆ ಹರಿಯಲ್ಲಿ ಅನುದಿನ ನೆಲೆಸುವಂತೆ



ಮಾಡೋ ಎಂದು ಬೇಡಿಕೊಳ್ಳು ತ್ತಾರೆ. ಅವರು ಮುಂದುವರೆದು, ಅಹಿ ಭೂಷಣನೆ ಎನ್ನ ಅವಗುಣಗಳೆ ಣಿಸದೇ। ವಿಹಿತ ಧರ್ಮದಲ್ಲಿ ವಿಷ್ಣು ಭಕುತಿಯ ಕೊಡು ಶಂಭೋ ಎನ್ನು ತ್ತಾರೆ.

## ಹರನೊಲಿದರೆ ಹರಿತಾನೊಲಿವ

ಹರಿಯ ಸಾಕ್ಷಾತ್ಕಾರಕ್ಕೆ ಹರನ ಒಲುಮೆ ಮುಖ್ಯ. ಹರ ಮುನಿದರೆ ಹರಿ ತಾ ಮುನಿವ ವಾದಿರಾಜರ ಭಾವ. ಈ ಭಾವವನ್ನು 'ಧವಳ ಗಂಗೆಯ ಗಂಗಾಧರ ಮಹಾಲಿಂಗ ಮಾಧವನ ತೋಲಿಸಯ್ಯ ಗುರು ಕುಲೋತ್ತುಂಗ। ನಾನು ಗುರುವೆಂಬ ನಿನ್ನ ಇನ್ನಾದರೂ ಹರಿಯ ತೋರೋ ಮುಕ್ಕಣ್ಣ॥ ಎಂಬ ಅವರ ಕೃತಿಯಲ್ಲಿ ನೋಡಬಹುದು. ವಾದಿರಾಜರು ರುದ್ರದೇವರನ್ನು ಗುರು ವೆಂದೇ ಕರೆಯುತ್ತಾರೆ. ಹೇಗೆ ಗುರುವು ಅಜ್ಞಾನವೆಂಬ ಕತ್ತಲನ್ನು ಕಳೆದು ಸುಜ್ಞಾನವೆಂಬ ಬೆಳಕನ್ನು ತೋರು ತ್ತಾನೋ ಹಾಗೆ ನನ್ನಲ್ಲಿರುವ ಅಜ್ಞಾನ ವನ್ನು ಕಳೆದು ಚನ್ನ ಪ್ರಸನ್ನ ಹಯವದ ನನ್ನು ಅನುದಿನ ನೆನೆಯುವಂತೆ ಮಾಡೋ ಎಂದು ಪರಿಯಾಗಿ ಬೇಡು ತ್ತಾರೆ. ಒಂದು ಕಡೆ ವಾದಿರಾಜ ಸ್ವಾಮಿಗಳು ತಮ್ಮ ಧವಳ ಗಂಗೆಯ ಗಂಗಾಧರ ಮಹಾಲಿಂಗ' ಎನ್ನುವ

ಕೃತಿಯಲ್ಲಿ ಈಶ್ವರನನ್ನು 'ಗುರು ಕುಲೋತ್ತುಂಗ' ಎಂದು ಸಂಬೋಧಿಸುತ್ತಾರೆ. 'ಅನ್ಯನಲ್ಲವೋ ನಾನು ಗುರು ಎಂಬೆ ನಿನ್ನ' ಎಂದೂ ಕೂಡ ಪುನಃ ಪುನಃ ಗುರುವಿನ ಸ್ಥಾನದಲ್ಲಿರಿಸಿ ಪ್ರಾರ್ಥಿಸಿರುವುದು ನಮಗೆ ಕಂಡು ಬರುತ್ತದೆ. 'ಗುರು ದೇವೋಮಹೇಶ್ವರ' ಎನ್ನುವ ಅನ್ವರ್ಥಕವು ನಮಗೆ ಇಲ್ಲಿ ಗೋಚರವಾಗುತ್ತದೆ.

ಶಿವನನ್ನು ಸ್ತೋತ್ರ ಮಾಡುವುದು ಒಂದು ವಿಷಯ ವಾದರೆ ಇನ್ನು ಶಿವನ ಭಕ್ತರಾದವರು ಹೇಗೆ ಇರಬೇಕೆಂಬು ದನ್ನೂ ಹೇಳಲು ದಾಸರು ಮರೆತಿಲ್ಲ. ದಾಸ ಶ್ರೇಷ್ಠ ಶ್ರೀಕನಕ ದಾಸರ 'ದಾಸನಾಗಬೇಕು ಸದಾಶಿವನ' ಕೃತಿಯಲ್ಲಿ ನಾವು ಅದನ್ನು ಕಾಣಬಹುದು.'ದಾಸನಾಗಬೇಕು ಕೇಶ ಪಂಚ ಕವಳಿದು' ಎಂದು ಹೇಳುತ್ತ ಅವಿದ್ಯೆ, ಅಸ್ಮಿತೆ,ರಾಗ, ದ್ವೇಷ, ಮರಣಭಯ ಎನಿಸಿಕೊಳ್ಳುವ ಅಭಿನಿವೇಶ ಈ ಐದು ಕ್ಲೇಶ ಗಳಿಂದ ಮುಕ್ತರಾದಾಗ ಮಾತ್ರ ಪರಶಿವನ ದಾಸನಾಗ ಬಹುದು ಅಥವಾ ಈ ಐದು ಕ್ಲೇಷಗಳಿಂದ ಹೊರಬರಬೇಕಾ ದರೆ ನಾವು ಸದಾ ಶಿವನ ಭಕ್ತರಾಗಲೇ ಬೇಕು ಎನ್ನುವ ಮಾರ್ಮಿಕತೆಯನ್ನೂ ಕನಕದಾಸರು ಸೂಕ್ಷ್ಮವಾಗಿ ಸೂಚಿಸಿರಲೂಬಹುದು.

### ಶಿವ ಶಿವ ಎನ್ನಿರೋ

ಅದೇ ರೀತಿ ಕನಕದಾಸರು ತಮ್ಮ ಮತ್ತೊಂದು ಕೀರ್ತನೆಯಾದ 'ಶಿವ ಶಿವ ಶಿವ ಎನ್ನಿರೋ' ಹಾಡಿನಲ್ಲಿ 'ಗುರು ಲಿಂಗ ಜಂಗಮವ ಅರಿಯಬೇಕಾದರೆ ಶಿವ ಶಿವ ಶಿವ ಎನ್ನಿರೋ' ಎಂದು ಹೇಳುವಾಗ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಅರಿತು, ಅಳವಡಿಸಿಕೊಳ್ಳಲೂ ನಾವು ಶಿವಧ್ಯಾನ ನಿರತರಾಗಬೇಕು ಅವನ ಅನುಗ್ರಹ ಪಡೆಯ ಬೇಕೆಂಬುದನ್ನು ಹೇಳಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಇನ್ನೊಂದು ಸಂದರ್ಭವನ್ನು ತೆಗೆದುಕೊಂಡಾಗ ಶ್ರೀ ಜಗನ್ನಾಥದಾಸರು ತಮ್ಮ ರಚನೆಯಾದ 'ಶರಣು ಮೃತ್ಯುಂಜಯ ಶರಣು ಸಜ್ಜನರ ಭಯ ಪರಿಹರಿಸು ಕರುಣಾಳು. ಕೇಳು ಬಿನ್ನಪವ ಎಂಬ ಕೀರ್ತನೆಯಲ್ಲಿ ಮೃತ್ಯುಂಜಯ ಸ್ವರೂಪಿಯಾದ ಮಹಾರುದ್ರ ದೇವನು ಅಪಮೃತ್ಯು ಕಳೆಯುವ ಶಕ್ತಿ ಉಳ್ಳವನಾಗಿದ್ದು ಅವನನ್ನು ಪ್ರಾರ್ಥಿಸಿದರೆ ನಮಗೆ ಬಂದೊದಗುವ ಆಕಾಲ ಮರಣ ಗಳಿಂದ ರಕ್ಷಿಸಿಕೊಳ್ಳಬಹುದೆಂದು ಜಗನ್ನಾಥದಾಸರ ಬಲ ವಾದ ನಂಬಿಕೆ.

'ಶಿವನೇ ನಾ ನಿನ್ನ ಸೇವಕನಯ್ಯ' ಎನ್ನುವ ದಾಸ ಸಾಹಿತ್ಯ, ಪರತತ್ವದ ಸಾಕ್ಷಾತ್ಕಾರವಾಗಬೇಕಾದರೆ ಶಿವ ಮನಸ್ಸು ಕೊಟ್ಟರೆ ಮಾತ್ರ ಸಾಧ್ಯ.ಹಾಗಾಗಿ ಅವನ ಉಪಾಸನೆ ಮುಕ್ತಿಪಥಕ್ಕೆ ರಾಜ ಮಾರ್ಗ ಎನ್ನುವುದನ್ನು ಸ್ಪಷ್ಟವಾಗಿ ಸಾರಿದೆ.


ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

## ಸಪ್ತಗಿರಿ

## ಚಂದಾದಾರರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮ ಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸ ದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸ ಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದ ಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆ ಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆ ಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk @tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸ ಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು




# ವೈಷ್ಣವ ಭಕ್ತಿ ಸಾಹಿತ್ಯದ ದಾಸವರೇಣ್ಯ ಗುರು ಶ್ರೀ ವ್ಯಾಸರಾಜ ಗುರುಸಾರ್ವ ಭೌಮರು

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ

ಸಾಮಾನ್ಯವಾಗಿ ಶಿಷ್ಯರು ತಮ್ಮ ಗುರುಗಳ ಮಹಿಮಾನ್ವಿತ ವ್ಯಕ್ತಿತ್ವಕ್ಕೆ ಮನಸೋತು ಅವರನ್ನು ಶ್ರದ್ಧಾಭಕ್ತಿಗಳಿಂದ ಸ್ತೋತ್ರ ಮಾಡುವುದು ಲೋಕರೂಢಿ, ಆದರೆ ಗುರುಗಳೇ ತಮ್ಮ ಶಿಷ್ಯರ ಶ್ರೀಮಂತ ಗುಣಗಳಿಗೆ ಮಾರು ಹೋಗಿ ಅವರ ಪ್ರತಿಭಾ ಸಾಮರ್ಥ್ಯಗಳನ್ನು ಹಾಡಿ ಹೊಗಳು ವುದು ತುಂಬಾ ಅಪರೂಪ. ಶ್ರೀ ವ್ಯಾಸರಾಜರು ತಮ್ಮ ವಿದ್ಯಾ ಗುರುಗಳಾದ ಶ್ರೀ ಶ್ರೀ ಪಾದರಾಜರಿಂದಲೇ 'ಸಾಸಿರ ಜಿಹ್ವೆಗಳುಳ್ಳ ಶೇಷನೇ ಕೊಂಡಾಡಬೇಕು ವ್ಯಾಸಮುನಿ ರಾಯರ ಸನ್ಯಾಸದಿರುವ' ಎಂದು ಮುಕ್ತಕಂಠದ ಶ್ಲಾಘನೆಗೆ ಭಾಜನರಾದ ಶಕ ಪುರುಷರು ಶ್ರೀ ಮಧ್ವಾಚಾರ್ಯ ಪ್ರಣೀತವಾದ 'ತತ್ತ್ವವಾದ ' ದ ಪರಿಧಿಯನ್ನು ವಿಸ್ತರಿಸಿದ ಶ್ರೀ ವ್ಯಾಸರಾಜರು ಮಧ್ವಸಿದ್ಧಾಂತವನ್ನು ಎಷ್ಟು ಸಮೃದ್ಧವಾಗಿ ವ್ಯಾಖ್ಯಾನಿಸಬಹುದೆಂದು ವಿದ್ವಜ್ಜನರಿಗೆ ತೋರಿದ ಜ್ಞಾನಿವರೇಣ್ಯರು.

ವೈಚಾರಿಕ ಜಗತ್ತಿನಲ್ಲಿ ಆಚಾರ್ಯ ಮಧ್ವರ ತತ್ತ್ವ ವಾದ, ಉಳಿದೆಲ್ಲ ಚಿಂತನ ಕ್ರಮಗಳಿಗಿಂತ ಗಂಭೀರ ವ್ಯಾಪಕ ಹಾಗೂ ನಿರ್ದುಷ್ಟವಾದದ್ದೆಂದು ಸತಾರ್ಕಿಕವಾಗಿ, ಅತ್ಯಂತ ಸಮರ್ಪಕವಾಗಿ ಪ್ರತಿಪಾದಿಸಿ,ತಮ್ಮ 'ತರ್ಕತಾಂಡವ', 'ನ್ಯಾಯಾಮೃತ' ಹಾಗೂ 'ತಾತ್ಪರ್ಯ ಚಂದ್ರಿಕಾ' ಗ್ರಂಥ ಗಳಿಂದ ವಿದ್ವದ್ಮಾನ್ಯರಾದವರು. ಶ್ರೀ ಮಧ್ವಾಚಾರ್ಯರು, ಶ್ರೀ ಜಯತೀರ್ಥರೊಂದಿಗೆ 'ಮಧ್ವಮತದ ಮುನಿತ್ರಯರು' ಎಂದು ಜ್ಞಾನಿನಾಯಕರಿಂದ ಅಸಾಧಾರಣ ಗೌರವಕ್ಕೆ ಪಾತ್ರರಾಗಿ ರುವ ಶ್ರೀ ವ್ಯಾಸರಾಜರು ಸಮಕಾಲೀನ ತತ್ತ್ವಜ್ಞಾನ ಚಿಂತನೆಗಳನ್ನು ಅತ್ಯಂತ ಕೂಲಂಕುಷವಾಗಿ ಅಧ್ಯಯನ ಮಾಡಿ, ಅಷ್ಟೇ ತಲಸ್ಪರ್ಶಿಯಾದ ವಿಮರ್ಶೆಯನ್ನು ಮಾಡಿ ಅನೇಕ ಸಂದಿಗ್ಧಗಳನ್ನು ಪರಿಹರಿಸಿದರು.

ಹೀಗೆ 'ಮಧ್ವತತ್ತ್ವಜ್ಞಾನದ' ದ ಪ್ರಚಾರದಲ್ಲಿ ಅನ್ಯಾದೃಶವಾದ ಭೂಮಿಕೆಯನ್ನು ನಿರ್ವಹಿಸಿದ ಶ್ರೀ ವ್ಯಾಸರಾಜರು, ಆಚಾರ್ಯಮಧ್ವರಿಂದ ಬೀಜಾವಾಪನೆ ಗೊಂಡಿದ್ದ ಹರಿದಾಸ

ಸಾಹಿತ್ಯಪರಂಪರೆಗೆ ಪ್ರೇರಕ ಶಕ್ತಿಯಾಗಿ,ಶ್ರೀ ವಾದಿರಾಜರು, ಶ್ರೀವಿಜಯೀಂದ್ರರು, ಶ್ರೀಪುರಂದರದಾಸರು, ಶ್ರೀ ಕನಕದಾಸರೇ ಮೊದಲಾದ ವಿದ್ವದ್ವಿಭೂತಿಗಳಿಗೆ ಗುರುಗಳಾಗಿ ವಿಜಯನಗರದ ಧರ್ಮ ಸಾಮ್ರಾಜ್ಯದ ರಕ್ಷಕರಾಗಿ ಈ ನಾಡಿಗೆ ನೀಡಿದ ಕೊಡುಗೆ ಅಪೂರ್ವ.

ಶ್ರೀಶಾಪರೋಕ್ಷವನ್ನು ಪಡೆದು ಸನ್ಯಾಸಿ ರತ್ನಾಕರ ರೆಂದು ಪ್ರಸಿದ್ಧರಾದ ಶ್ರೀ ವ್ಯಾಸರಾಜರದು ಲೋಕವೇ ನಿಬ್ಬೆರಗಾಗುವಂತಹ ವರ್ಣರಂಜಿತ ವ್ಯಕ್ತಿತ್ವ. ಉದರ ಪೋಷಣೆಗಾಗಿ ಊರೂರು ಸುತ್ತುತ್ತ ಬೇಡನ ಮಾತುಗಳಿಂದ ಜನರನ್ನು ವಂಚಿಸುವ ಸಾಮಾನ್ಯ ಸನ್ಯಾಸಿಯಲ್ಲ ಅವರು 'ಕೆರೆ ಬಾವಿ ಅಗ್ರಹಾರಗಳ ಮಾಡಿ' ಒಂದು ಲಕ್ಷಭೂಸುರರ ಕುಟುಂಬಗಳನ್ನು ಸಂರಕ್ಷಿಸಿದ ಗುಣಗಣ ಗಾಂಭೀರ್ಯಾದಿ ಗಳ ವೈಭವದ ಕೀರ್ತಿವಂತರು; ರಂಗವಿಠಲನಾದ ವಾಸು ದೇವನ ಪಾದಾರವಿಂದಗಳನ್ನು ಹಗಲಿರುಳೆನ್ನದೆ ಮೀಸಲು ಮನಸ್ಸಿನಿಂದ ಭಜಿಸುವ ಭಕ್ತಾಗ್ರೇಸರರು, ಪ್ರಹ್ಲಾದನಾಗಿ ತಾವಾಡಿದ ಮಾತುಗಳನ್ನೇ ಅನುಷ್ಠಾನಿಸಿ ಮಾರ್ಗದರ್ಶನ ಮಾಡಲೆಂಬಂತೆ ಬಾಲ್ಯದಲೇ ಸನ್ಯಾಸ ಸ್ವೀಕರಿಸಿದ ಶ್ರೀ ವ್ಯಾಸರಾಜರ ಅತಿಶಯ ವೈರಾಗ್ಯ ಸಂಪನ್ನತೆ ಋಜುತನ ಗಳಿಗೆ ಹಿಡಿದ ಕೈಗನ್ನಡಿ.

'ಈಸುಮುನಿಗಳಿದ್ದೇನು ಮಾಡಿದರಯ್ಯಾ ವ್ಯಾಸಮುನಿ ಮಧ್ವಮತವನುದ್ಧರಿಸಿದ' ಎಂಬುದಾಗಿ ಶ್ರೀ ವ್ಯಾಸರಾಜರ ಮಹಿಮೆಯನ್ನು ಕೊಂಡಾಡಿದ ಶ್ರೀ ಪುರಂದರದಾಸರು ಶ್ರೀವ್ಯಾಸರಾಜರ ಶಿಷ್ಯಾಗ್ರಹಿಗಳಾದ ದಾಸಶ್ರೇಷ್ಠರು. ತಮ್ಮ ಗುರುಗಳಿಂದಲೇ "ದಾಸರೆಂದರೆ ಪುರಂದರದಾಸರಯ್ಯ" "ಕಂಗಳಿಗೆ ಹಬ್ಬವಾಯಿತಯ್ಯ ಮಂಗಳಾತ್ಮಕ ಪುರಂದರ ದಾಸರನು ಕಂಡು" ಎಂದು ಮುಕ್ತಕಂಠದ ಶ್ಲಾಘನೆಗೆ ಪಾತ್ರ ರಾದ ಶ್ರೀ ಪುರಂದರದಾಸರು ತಮ್ಮ ಅನೇಕ ಕೃತಿಗಳಲ್ಲಿ ಶ್ರೀ ವ್ಯಾಸರಾಯರನ್ನು ಅತಿಶಯವಾಗಿ ಸ್ತುತಿಸಿದ್ದಾರೆ. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂದು ಬರುವಿನ ಮಹತಿಯನ್ನು ಸಾರಿ ಹೇಳಿದ ದಾಸರಾಯರು.

ಹರಿದಾಸರ ದೀಕ್ಷೆಗೆ "ಅಂಕಿತ"ಅತ್ಯಂತ ಪ್ರಮುಖ ವಾದದ್ದು. "ಅಂಕಿತವಿಲ್ಲದ ದೇಹ ನಿಷೇದ ಅಂಕಿತವಿಲ್ಲದ ಕಾಯ ಶೋಭಿಸದು ಅಂಕಿತವಿಲ್ಲದಿರಬಾರದೆಂಬುದು ಚಕ್ರಾಂಕಿತವನ್ನು ಮಾಡಿ ಎನ್ನಂಗಕ್ಕೆ ಪಂಕಜನಾಭ ಶ್ರೀ ಪುರಂದರವಿಠಲನ ಅಂಕಿತವೆನಗಿತ್ತ ಗುರುವ್ಯಾಸಮುನಿ ರಾಯ" ಎಂದು ತಮಗೆ ಶ್ರೀ ಪುರಂದರವಿಠಲ ಎಂಬ ಅಂಕಿತ ಪ್ರಧಾನ ಮಾಡಿದ ಶ್ರೀ ವ್ಯಾಸರಾಜರನ್ನು ಸ್ಮರಿಸುತ್ತಾರೆ.

ಶಂಕುಕರ್ಣನೆಂಬ ಕರ್ಮಜದೇವತೆ, ಪ್ರಹ್ಲಾದರಾಜ ರಾಗಿ, ಬಾಹ್ಲೀಕ ರಾಜರಾಗಿ, ವ್ಯಾಸರಾಜರಾಗಿ, ಶ್ರೀ ರಾಘ ವೇಂದ್ರರಾಗಿ ಶ್ರೀ ಹರಿಯ ವಿಶೇಷ ಸೇವೆ ಮಾಡಿದನೆಂಬುದು ಶಾಸ್ತ್ರೋಕ್ತ ವಿಚಾರ, ಪ್ರಹ್ಲಾದರಾಜರಲ್ಲಿ ಶೇಷದೇವರ ಆವೇಶ ವಿತ್ತೆಂಬುದು ಶಾಸ್ತ್ರಸಿದ್ಧವಾಗಿದ್ದು, ವಾಯುದೇವರ ಹಾಗೂ ಸಾಕ್ಷಾತ್ ಪರಮಾತ್ಮನ ವಿಶೇಷ, ಅನುಗ್ರಹಕ್ಕೆ ಪಾತ್ರರಾದ ಶ್ರೀ ವ್ಯಾಸರಾಜರು ಪ್ರಹ್ಲಾದ ರಾಜರ ಅವತಾರವೆಂಬುದನ್ನು ಶ್ರೀ ಪುರಂದರದಾಸರು, "ಶೇಷಾವೇಶ ಪ್ರಹ್ಲಾದನವತಾರ ವೆನಿಸಿದೆ ವ್ಯಾಸರಾಯನೆಂಬೊ ಹೆಸರು ನಿನಗಂದಂತೆ' ಎಂಬುದಾಗಿ ಸೂಚಿಸಿದ್ದಾರೆ.

ಶ್ರೀ ವ್ಯಾಸರಾಯರು ಅಂದಿನ ಕಾಲದಲ್ಲಿ ಮಾಡಿದ ಮಹತ್ತರ ಕ್ರಾಂತಿಯೆಂದರೆ,ಶ್ರೀ ಕನಕದಾಸರ ಜೀವದ ಯೋಗ್ಯತೆಯನ್ನು ಪರಿಗಣಿಸಿ ಅವರಿಗೆ ಅಪಾರವಾದ ಮನ್ನಣೆ ಯನ್ನು ನೀಡಿ ಗೌರವಿಸಿದ್ದು,ಮಡಿವಂತ ಸಮಾಜ ಶ್ರೀ ಕನಕ ದಾಸರನ್ನು ಪುರಸ್ಕರಿಸದಿದ್ದರೂ, ಶ್ರೀ ವ್ಯಾಸರಾಜರಂತಹ ಯತಿ ಶ್ರೇಷ್ಠರು ಅವರನ್ನು ಗೌರವಿಸಿದ್ದುದು ಕನಕದಾಸರ ಘನತೆ ಜಗತ್ತಿಗೆ ತಿಳಿಯಲು ಸಹಾಯಕವಾಯಿತು.

ಶ್ರೀ ಪುರಂದರದಾಸರ ಇನ್ನೊಬ್ಬ ಮಗ ಗುರುಪುರಂದರ ವಿಠಲಾಂಕಿತ ದಾಸರು " ವಾದಿಗಜಸಿಂಹ, ದುವಾದಿಮೃತ ಭೇರುಂಡ,ವಾದಿಫಣಿ ಗರುಡ, ತತ್ವಾದಿರಚಿತಾ,ವಾದಿ ಭಯಂಕರ,ದುರ್ವಾದಿ ಕೋಲಾಹಲ,ವಾದಿ ಮಸ್ತ ಕಶುಲ, ಮಧುರ ಗುಣಶೀಲ, ವೈಷ್ಣವೋತ್ತಮ,ಸದ್ವೈಷ್ಣವ ಪ್ರಜಾನಂದ, ವೈಷ್ಣವಾಗಮಭರಿತ, ವೈಷ್ಣವಪ್ರಿಯಾ,ವೈಷ್ಣವ ಕಮಲ ಸೂರ್ಯ, ವೈಷ್ಣವಕುಮುದ ಚಂದ್ರ ವೈಷ್ಣವ ಕುಲೋತ್ಕೃಷ್ಟ. ವೈಷ್ಣವ ವಿಶಿಷ್ಟ.ಹರಿಯಿಲ್ಲದ ಕ್ಷೇತ್ರವರಿಯದ ಮಹಾ ಮಹಿಮ, ಸಿರಿಕೃಷ್ಣ ಸರಸೀರುಹ ಭೃಂಗ" ಮೊದಲಾದ ವಿಶೇಷಣಗಳ ಮಾಲಿಕೆಯನ್ನು ಶ್ರೀ ವ್ಯಾಸತೀರ್ಥರ ಪಾದ ಪದ್ಮಗಳಿಗೆ ಸಮ ರ್ಪಿಸಿದ್ದಾರೆ.

ಶ್ರೀ ವಿಜಯದಾಸರು ದಾಸಸಾಹಿತ್ಯದ ದ್ವಿತೀಯ ಘಟ್ಟದ ಚಾಲಕ ಶಕ್ತಿಯಾಗಿ ನಿಂತವರು, ಶ್ರೀ ಗೋಪಾಲ ದಾಸರು, ಶ್ರೀ ತಿಮ್ಮಣ್ಣದಾಸರ, ಶ್ರೀ ಮೋಹನದಾಸರು, ಶ್ರೀ ಜಗನ್ನಾಥದಾಸರೇ ಮೊದಲಾದ ಹರಿದಾಸರಿಗೆ ಪ್ರೇರಕರಾಗಿ ದಾಸಸಾಹಿತ್ಯ ಪರಂಪರೆಯನ್ನು ಬೆಳೆಸಿದ ಮಹಾನುಭಾವರು, ಶ್ರೀ ವಿಜಯ ದಾಸರು ತಮ್ಮ ಕೃತಿಗಳಲ್ಲಿ ಶ್ರೀ ವ್ಯಾಸತೀರ್ಥರನ್ನು ಅತ್ಯಂತ ಗೌರವದಿಂದ ಸ್ಮರಿಸಿದ್ದಾರೆ.


ಸಾಳ್ವ ನರಸಿಂಹನ ದುಡುಕಿನಿಂದ ನಿಂತು ಹೋಗಿದ್ದ ದೇವತಾ ಸೇವೆಗಳನ್ನು ಊರ್ಜಿತಗೊಳಿಸಿ ತಿರುಪತಿಯಲ್ಲಿ ಹನ್ನೆರಡು ವರ್ಷಗಳ ಕಾಲ ಶ್ರೀ ಶ್ರೀನಿವಾಸನನ್ನು ಶ್ರೀ ವ್ಯಾಸ ರಾಯರು ಸ್ವಹಸ್ತದಿಂದ ತಂತ್ರಸಾರೋಕ್ತವಾಗಿ ಪೂಜಿಸಿ, ಅರ್ಚಕ ಮನೆತನದವರಿಗೆ ಆ ಹಕ್ಕನ್ನು ಪುನಃ ಹಿಂತಿರುಗಿಸಿದ ಮಹಾಮನಿಷಿಗಳು.

ವಿಜಯನಗರ ಅರಸರ ಪರಂಪರೆಯಲ್ಲಿ ಅತ್ಯಂತ ಹೆಸರು ವಾಸಿಯಾಗಿದ್ದ ಶ್ರೀಕೃಷ್ಣದೇವರಾಯನ ಕುಹಯೋಗ ಕಂಟಕವನ್ನು ನಿವಾರಿಸಿ ಹಿಂದೂ ಧರ್ಮದ ಸಂಘಟನೆಗಾಗಿ, ಆ ಮೂಲಕ ವಿಜಯನಗರ ಸಾಮ್ರಾಜ್ಯದ ಭದ್ರ ಬುನಾದಿಯಾಗಿ ಸಂಚಾರಹೋದಲೆಲ್ಲ ಮುಖ್ಯ ಪ್ರಾಣದೇವರ (732) ವಿಗ್ರಹ ಸ್ಥಾಪಿಸಿ, ವೈಷ್ಣವ ಆಚಾರ್ಯರಾದರು ಶೈವ ದ್ವೇಷಿಯಾಗದೆ ಬಸವಾಭಟ್ಟನಿಂದ ಕೊಡುಗೆಯಾಗಿ ಪಡೆದ ಪಚ್ಚೆ ಲಿಂಗವನ್ನು ಪೂಜಿಸುತ್ತ ಮತೀಯ ಸಾಮರಸ್ಯಕ್ಕೆ ಹೊಸದೊಂದು ಮುನ್ನಡಿ ಬರೆದ ಆನೆಗೊಂದಿಯ ನಡುಗಡ್ಡೆಯ ಪದ್ಮನಾಭತೀರ್ಥರ ಬೃಂದಾವನದ ಎದುರು ಬೃಂದಾವನಸ್ಥರಾದ ಪಾವನ ಜೀವನ ಪುಣ್ಯ ಚೇತನರು.

# ಬುದ್ಧಿ ನಾಶದಿಂದ ಸರ್ವನಾಶ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್. ಭೂಮಿಕ

ಮನುಷ್ಯ ತನಗೆ ದೇವರುಕೊಟ್ಟ ಬುದ್ಧಿಯಿಂದ ಸಮಸ್ತ ಮನುಕುಲಕ್ಕೆ ಲಾಭದಾಯಕವಾದ ಕಾರ್ಯಗಳನ್ನು ಮಾಡಿದರೆ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿದು ಹೋಗುತ್ತಾರೆ. ಮಹಾ ಮಾನವನಾಗಿ ಹೆಸರು ಪಡೆಯುತ್ತಾನೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ತನ್ನ ಬುದ್ಧಿಯಿಂದ ಆತನು ಲೋಕ ವಿನಾಶಕರವಾದ ಕೆಲಸಗಳನ್ನು ಮಾಡಿದಲ್ಲಿ ಪರಮ ಪಾಪಿಯೆಂದೂ, ದುಯಾರ್ಗನೆಂದೂ ದೂಷಿಸಲ್ಪಡುತ್ತಾನೆ. ಅಂದರೆ ಮನುಷ್ಯನ ಹೊಗಳಿಕೆಗೆ, ತೆಗಳಿಕೆಗೆ ಬುದ್ಧಿಯೇ ಕಾರಣ. ವಾಸ್ತವದಲ್ಲಿ ಮನುಷ್ಯನನ್ನು ಇತರ ಪ್ರಾಣಿಲೋಕದಿಂದ ಬೇರ್ಪಡಿಸುವುದು ಬುದ್ಧಿಯೇ ಹೊರತು ಮತ್ತೊಂದಲ್ಲ, ಯಾವ ವಿವರಗಳನ್ನು ನಾವು ಜ್ಞಾನೇಂದ್ರಿಯಗಳ ಮೂಲಕ ಶೇಖರಿಸುತ್ತೇವೆಯೋ ಅದನ್ನೇ ಸಮಾಚಾರವೆಂದು ಹೇಳುತ್ತೇವೆ. ಯಾವುದನ್ನು ಮಸ್ತಕದಲ್ಲಿ ಕೊನೆಯವರೆಗೂ ಉಳಿಸಿಕೊಳ್ಳುತ್ತೇವೆಯೋ ಅದೇ ವಿದ್ಯೆ. ಯಾವುದನ್ನು ಬಳಸಿಕೊಳ್ಳುತ್ತೇವೆಯೋ ಅದೇ ತಿಳುವಳಿಕೆ ಇನ್ನು ಅದನ್ನು ಯಾವಾಗ, ಹೇಗೆ ಎಲ್ಲಿ ಬಳಸಿಕೊಳ್ಳಲು ಶಕ್ತನಾಗುತ್ತೇವೆಯೋ ಅದೇ ಜ್ಞಾನವು. ಈ ಎಲ್ಲಾ ಕಾರ್ಯಗಳಿಗೆ ಕೇಂದ್ರ ಸ್ಥಾನ ನಮ್ಮ ವಿಜ್ಞಾನಕೋಶ ಅದೇ ಬುದ್ಧಿ. ಈ ಬುದ್ಧಿಯನ್ನು ಉಪಯೋಗಿಸಿಕೊಂಡು ರಾಕೆಟ್‌ಗಳ ಮೂಲಕ ಅಂತರಿಕದೊಳಗೆ ಉಪಗ್ರಹಗಳನ್ನು ಪ್ರವೇಶಿಸಿದ ಶಾಸ್ತ್ರಜ್ಞರು ಇದ್ದಾರೆ. ಹಾಗೆಯೇ ಬುದ್ಧಿಯನ್ನು ವಿಪರೀತ ಧೋರಣೆಯಲ್ಲಿ ಪ್ರಯೋಗಿಸುತ್ತಾ ಪ್ರಪಂಚ,ಮನುಕುಲಕ್ಕೆ ಕೇಡಕನ್ನುಂಟು ಮಾಡುವ ತೀವ್ರವಾದಿಗಳು ಸಹಾ ಇದ್ದಾರೆ. ಮಾನವನ ಅಸ್ತಿತ್ವದಲ್ಲಿ ಸ್ಥಿತವಿರುವ ದೇಹ, ಮನಸ್ಸು, ಬುದ್ಧಿ, ಆತ್ಮ ಎಂಬ ಅಧಿಕಾರಗಳಲ್ಲಿ ಕ್ರಮಣೀಯವಾಗಿ ಆತ್ಮ ಉನ್ನತ ಸ್ಥಾನದಲ್ಲಿರುತ್ತದೆ. ಅದರ ಕೆಳಗೆ ಬುದ್ಧಿ. ಬುದ್ಧಿಯ ಕೆಳಗೆ ಮನಸ್ಸು, ಮನಸ್ಸಿನ ವಶದಲ್ಲಿ ದೇಹ ಅನುಕ್ರಮಣೀಯವಾಗಿ ಇರುತ್ತವೆ. ಮೂರನೇ ಸ್ಥಾನದಲ್ಲಿರುವ ಬುದ್ಧಿ, ತನ್ನ ಮೇಲಿರುವ ಅಂದರೆ ನಾಲ್ಕನೇ ಸ್ಥಾನದಲ್ಲಿರುವ ಆತ್ಮದೊಂದಿಗೆ ಜೊತೆಗೂಡಿ ಕೊಂಡಾಗ ಲೋಕಕಲ್ಯಾಣ ಕಾರ್ಯಗಳು ಕೈಗೂಡುತ್ತವೆ. ಆದರೆ ಅದು ತನಗಿಂತಲೂ ಕೆಳಸ್ಥಾನದಲ್ಲಿರುವ ಮನಸ್ಸಿನೊಂದಿಗೆ ಸೇರಿಕೊಂಡರೆ ಲೋಕವಿನಾಶಕರವಾದ ಕಾರ್ಯಗಳಲ್ಲಿ, ಮಾನವೀಯತೆಯ ನಾಶಕರವಾದ ಕಾರ್ಯಗಳಲ್ಲಿ ನಿರತವಾಗುತ್ತದೆ. ಭಗವದ್ಗೀತೆಯಿಂದ ನಮಗೆ ಈ ಸಂದೇಶ ದೊರಕುತ್ತದೆ.




ಬುದ್ಧಿನಾಶದಿಂದ ಸರ್ವನಾಶವುಂಟಾಗುತ್ತದೆಂದು ತಿಳಿಯಬೇಕು. ನಿಜದಲ್ಲಿ ಈ ಬುದ್ಧಿನಾಶ ಎಲ್ಲಿ ಆರಂಭಗೊಳ್ಳುತ್ತದೆಂದು ಗೀತಾಚಾರ್ಯರು ಗೀತೆಯಲ್ಲಿ ಸ್ಪಷ್ಟ ತೋರಿಸಿ ಕೊಟ್ಟಿದ್ದಾರೆ.

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
ಸಂಗಾತ್‌ಂಜಾಯತೇ ಕಾಮಃ ಕಾಮಾತ್ಕ್ರೋಧೋಭಿಜಾಯತೇ॥
ಕ್ರೋಧಾದ್ಭವತಿ ಸಂಮ್ಮೋಹಃ ಸಂಮ್ಮೋಹಾತೇ ಸ್ಮತಿವಿಭ್ರಮಃ
ಸ್ಮೃತಿಭ್ರಂಶಾದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ॥

ಇಂದ್ರಿಯಭೋಗಗಳ ಕುರಿತು ಹೆಚ್ಚಾಗಿ ಆಲೋಚಿಸಿದಲ್ಲಿ ಮನುಷ್ಯನು ಅದರಲ್ಲಿ ಅನುರಕ್ತನಾಗುತ್ತಾನೆ. ಆ ಆಸಕ್ತಿ

**ಮನುಷ್ಯನ ವಿನಾಶಕ್ಕೆ ಬುದ್ಧಿನಾಶಕ್ಕಿಂತ ಹೆಚ್ಚಾದ, ನಿಖರವಾದ ಕಾರಣ ನಮಗೆಲ್ಲೂ ಸಿಗದು. ಅಧೋಗತಿಯಿಂದ ಜೈಲುಪಾಲಾದ ವ್ಯಕ್ತಿಯನ್ನು ಗಮನಿಸಿದಲ್ಲಿ, ರೋಗಕ್ಕೆ ತುತ್ತಾದ ವ್ಯಕ್ತಿಯನ್ನು ಗಮನಿಸಿದಲ್ಲಿ,ಸಂಘದಿಂದ ಬಹಿಷ್ಕರಿಸಲ್ಪಟ್ಟ ವ್ಯಕ್ತಿಯನ್ನು ಗಮನಿಸಿದಲ್ಲಿ ಈ ವಿಷಯವೇ ನಮಗೆ ಕಾಣಸಿಗುತ್ತದೆ**

ಯಿಂದ ಕಾಮವು ಉತ್ಪತ್ತಿಯಾಗುತ್ತದೆ. ಕಾಮದಿಂದ ಕ್ರೋಧ ವುಂಟಾಗುತ್ತದೆ. ಕೋಪದಿಂದ ಮೋಹ ತಲೆದೋರುತ್ತದೆ. ಮೋಹದಿಂದ ಸ್ಮೃತಿಭ್ರಮಣೆಯಾಗುತ್ತದೆ. ಮತಿಭ್ರಮಣೆ ಯಿಂದ ಬುದ್ಧಿನಾಶಗೊಳ್ಳುತ್ತದೆ. ಇನ್ನು ಬುದ್ಧಿನಾಶದಿಂದ ಮನುಷ್ಯ ಅಧೋಗತಿಯ ಪಾಲಾಗುತ್ತಾನೆ.

(ಭಗವದ್ಗೀತೆ 2 ನೇ ಅಧ್ಯಾಯ - 62, 63 ಶ್ಲೋಕ)

ಮನುಷ್ಯನ ವಿನಾಶಕ್ಕೆ ಬುದ್ಧಿನಾಶಕ್ಕಿಂತ ಹೆಚ್ಚಾದ, ನಿಖರವಾದ ಕಾರಣ ನಮಗೆಲ್ಲೂ ಸಿಗದು. ಅಧೋಗತಿ ಯಿಂದ ಜೈಲುಪಾಲಾದ ವ್ಯಕ್ತಿಯನ್ನು ಗಮನಿಸಿದಲ್ಲಿ, ರೋಗಕ್ಕೆ ತುತ್ತಾದ ವ್ಯಕ್ತಿಯನ್ನು ಗಮನಿಸಿದಲ್ಲಿ,ಸಂಘದಿಂದ ಬಹಿಷ್ಕರಿ ಸಲ್ಪಟ್ಟ ವ್ಯಕ್ತಿಯನ್ನು ಗಮನಿಸಿದಲ್ಲಿ ಈ ವಿಷಯವೇ ನಮಗೆ ಕಾಣಸಿಗುತ್ತದೆ. ಗೀತೆಯಲ್ಲಿ ಹೇಳಿದ ಈ ಬುದ್ಧಿನಾಶಕರವಾದ ಪರಿಸ್ಥಿತಿಗಳು ನಮಗೆ ಜಗತ್ತಿನಲ್ಲಿ ಕಾಣುತ್ತಲೇ ಇರುತ್ತವೆ. ಪ್ರೇಮಾನ್ಮೋದದಲ್ಲಿ ಒಬ್ಬ ಯುವಕನು ತರುಣಿಯನ್ನು ಹತ್ಯೆಗೆ ಯ್ಯುವುದು ಇಲ್ಲವೇ ಆ್ಯಸಿಡ್ ಹಾಕುವುದು ಇವೆಲ್ಲವೂ ಬುದ್ಧಿ ನಾಶಕ್ಕೆ ಉದಾಹರಣೆಗಳೇ ಆಗುತ್ತವೆ.ಯುವಕನು ಒಬ್ಬ ಯುವತಿಯನ್ನು ನೋಡಿ ಆಕರ್ಷಿತನಾಗಿದ್ದಾನೆಂದಿಟ್ಟುಕೊಳ್ಳಿ. ಆಕೆಯನ್ನು ಕಂಡೊಡನೆ ಆತನಿಗೆ ಆಕೆಯಲ್ಲಿ ಅನುರಕ್ತಿ ಯುಂಟಾಗುತ್ತದೆ. ಆದರಿಂದಲೇ ಕಾಮವು ಮೈದೋರುತ್ತದೆ. ಅಂದರೆ ಆಕೆಯ ಕುರಿತಾಗಿ ಕಾಮವಾಂಛೆ ಆರಂಭ ವಾಗುತ್ತದೆ. ಆದರೆ ಆ ಯುವತಿ ಆತನ ಪ್ರೇಮವನ್ನು ಅಂಗೀ ಕರಿಸದೇ ಹೋದಾಗ ಯುವಕನಲ್ಲಿ ಕ್ರೋಧವು ಉದ್ಭವ ವಾಗುತ್ತದೆ. ಈ ಕೋಪದಿಂದ ಮೋಹವು ಉತ್ಪನ್ನವಾಗುತ್ತದೆ. ಮೋಹವೆಂದರೆ ಕತ್ತಲೆ ಕವಿಯುವುದೆಂದೇ ಅರ್ಥ. ಅಂಥ ವರಿಗೆ ಏನೂ ಕಾಣಿಸದು.ಇದರಿಂದ ಮತಿಭ್ರಮಣೆ ಯುಂಟಾ ಗುತ್ತದೆ. ಅಂದರೆ ಆ ವ್ಯಕ್ತಿಗೆ ತಾನ್ಯಾರೋ,ತನ್ನ ಭವಿಷ್ಯ ವೇನೋ,ತನ್ನ ಕುಟುಂಬ ಮರ್ಯಾದೆಗಳೇನೋ ಎಂಬುದೆಲ್ಲವನ್ನು ಮರೆತು ಬಿಡುತ್ತಾನೆ. ಅವೆಲ್ಲಾ ಮರೆತು ಹೋಗುವುದೇ 'ಮತಿಭ್ರಮಣೆ' ಈ ರೀತಿಯಾಗಿ ಮತಿ ಭ್ರಮಣೆಯಾಗುತ್ತಲೇ ಬುದ್ಧಿ ನಶಿಸುತ್ತದೆ. ಅಂದರೆ ವಿವೇಚನಾ ಶಕ್ತಿ ಹೊರಟು ಹೋಗುತ್ತದೆ. ಅಂದರೆ ತಕ್ಷಣವೇ ಆತನು ಹಿಂದೆ ಮುಂದೆ ನೋಡದೇ ಯಾವುದೋ ಘೋರವಾದ ಪಾಪವನ್ನೆಸಗುತ್ತಾನೆ. ಆ ಯುವತಿಯನ್ನು ಹತ್ಯೆ ಮಾಡುವು ದೊಂದೇ ಅಲ್ಲದೇ ಕುರೂಪಿಯನ್ನಾಗಿಸಿ ಜೈಲು ಸೇರುತ್ತಾನೆ. ಸಮಾಜದಿಂದಲೂ ಛೀ ಮಾರಿ ಹಾಕಿಸಿ ಕೊಳ್ಳುತ್ತಾನೆ.ಈ ವಿಧವಾಗಿ ಆಕರ್ಷಣೆಯಿಂದುಂಟಾದ ಕಥೆಯು ಕಡೆಗೆ ಸೆರೆಮನೆಯಲ್ಲಿ ಮುಕ್ತಾಯಗೊಳ್ಳುತ್ತದೆ.ಇದನ್ನು ಗೀತಾ ಚಾರ್ಯರು "ಬುದ್ಧಿನಾಶಾತ್ ಪ್ರಣಶ್ಯತಿ"ಎಂದಿದ್ದಾರೆ. ಆದ್ದರಿಂದ ಯುವಕ - ಯುವತಿಯರು ಆಕರ್ಷಣೆಗೆ ಒಳ ಗಾಗದೇ ಇದ್ದಲ್ಲಿ ಬುದ್ಧಿ ಸುರಕ್ಷಿತವಾಗಿರುತ್ತದೆ. ಅವರ ಆಕರ್ಷಣೆ ಕೇವಲ ಓದು ಮುಂತಾದ ಉನ್ನತ ಗುರಿಗಳ ಮೇಲೆಯೇ ಇರತಕ್ಕದ್ದು. ಅದು ಆತ್ಮ ವಿಶ್ವಾಸದಿಂದ ತುಂಬಿದ್ದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಯಾವಾಗ ಯುವಕರು ಆತ್ಮಬಲ ದಿಂದ ಉನ್ನತ ಗುರಿಗಳೆಡೆಗೆ ಸಾಗುತ್ತಾರೋ ಆಗ ನಿಶ್ಚಯವಾಗಿ ವಿಜಯದ ಮೇರು ಶಿಖರವನ್ನು ಸೇರಿಕೊಳ್ಳುತ್ತಾರೆ.

## ಪಾಠಕರಿಗೆ ವಿಜ್ಞಪ್ತಿ

ಸಪ್ತಗಿರಿ ಮಾಸಪತ್ರಿಕೆ ನಿಮಗೆ ಸಕಾಲದಲ್ಲಿ ತಲುಪದಿದ್ದರೆ ಪ್ರಧಾನ ಸಂಪಾದಕ ಕಾರ್ಯಾಲಯಕ್ಕೆ ಕೆಲಸದ ದಿನಗಳಲ್ಲಿ ಕರೆ ಮಾಡಬೇಕು. ನಂತರವೇ ನಿಮಗೆ ಮತ್ತೊಂದು ಪತ್ರಿಕೆಯನ್ನು ಕಳಿಸುತ್ತಾರೆ. ಕೆಳಗಿನ ವಿವರಗಳಲ್ಲಿರುವ ದೂರವಾಣಿ ಸಂಖ್ಯೆಗೆ ಕರೆ ಮಾಡಿ. ನಿಮ್ಮ ಚಂದಾ ನಂಬರ್, ಮತ್ತು ನಿಮ್ಮ ವಿಳಾಸ, ನಿಮ್ಮ ಊರಿನ ಪಿನ್‌ಕೋಡ್ ನಂಬರ್, ನಿಮ್ಮ ದೂರ ವಾಣಿ ನಂಬರ್ ಅನ್ನು ವಿವರವಾಗಿ ತಿಳಿಸಬೇಕು.....

**ಪ್ರಧಾನ ಸಂಪಾದಕರ ಕಾರ್ಯಾಲಯದ**
**ದೂರವಾಣಿ ಸಂಖ್ಯೆ : 0877-2264543**

# ಸು - ಭದ್ರಾ

- ಶ್ರೀಮತಿ. ಎಸ್. ಕಲ್ಯಾಣಿ

ಯಾವುದು ಮೊದಲಿತ್ತೋ, ಈಗಲೂ ಇದೆಯೋ, ಸದಾ ಇರುತ್ತದೋ ಅದು 'ಸತ್', ಯಾವುದನ್ನು ಕೇಳಲು ಹಿತವೋ, ಅಂತಹ ವೃತ್ತಾಂತವನ್ನು ಸಹ 'ಸತ್' ಎಂದೆನ್ನುತ್ತಾರೆ. ನಾವೀಗ ಇಂತದೊಂದು ಸತ್ಕಥೆಯನ್ನು ಸ್ಮರಿಸೋಣ, ಅದು ಜೀವನದ ಉತ್ತಮ ದರ್ಶನವಾಗಬಲ್ಲದು. ಅಲ್ಲದೆ ಅದರ ಆಧಾರದಿಂದ ಮಾನವನ ಬದುಕು ಪ್ರತಿಯೊಂದು ಸ್ಥಿತಿಯಲ್ಲಿಯೂ ಶಾಂತವಾಗಿ, ನಿರ್ಮಲವಾಗಿ ಹಾಗೂ ಪ್ರಗತಿಶೀಲವಾಗಿದ್ದು 'ಸ್ವ'ದಲ್ಲಿ ಕಲ್ಯಾಣಕಾರಿಯಾಗಿರಬಲ್ಲದೆಂದು ಸಿದ್ಧಗೊಳ್ಳುತ್ತದೆ. ವಸುದೇವನಂದನ,ಕಂಸ ಚಾಣೂರಮರ್ದನ, ದೇವಕೀ-ಪರಮಾನಂದ ಜಗದ್ಗುರು ಶ್ರೀ ಕೃಷ್ಣನ ಸಹೋದರಿ 'ಸುಭದ್ರಾ'ದೇವಿಯನ್ನು ದೋಗ್ಧಾ ಗೋಪಾಲನಂದನನ ಗೆಳೆಯ ವತ್ಸ ಪಾರ್ಥನಿಗೆ ಕೊಡಲ್ಪಟ್ಟಿತ್ತು.

ಪುತ್ರ ಅಭಿಮನ್ಯುವಿನ ಚಂದ್ರಲೋಕಗಮನದ ಸಮಾಚಾರ ಕೇಳಿ ಸುಭದ್ರಳ ಅಳುವನ್ನು ತಡೆಯಲು ಧರ್ಮರಾಯನಿಗೂ ಸಹ ಸಾಧ್ಯವಾಗಲಿಲ್ಲ. ಆಗ ನಂದ ನಂದನ- 'ಸಹೋದರಿ! ನೀನು ಯೋಗೇಶ್ವರಿಯ ಸಹೋದರಿಯಾಗಿದ್ದೂ ಅಳುವುದು ಶೋಭೆಯಲ್ಲ. ಆತ್ಮವನ್ನು ಯಾರೂ ನೋಡಿಲ್ಲ. ನೋಡಿದ ಶರೀರ ಈಗಲೂ ಇದೆ. ಯಾವ ಅಭಿಮನ್ಯು ಹುಟ್ಟಿದ ಮತ್ತದಾರು ಸತ್ತ! ತಿಳಿಸಿದರೆ ಸರಿ! ಎಂದ, ಹೀಗೆ ತತ್ವಜ್ಞಾನ ಹೇಳಿದ ಮೇಲೆಯೂ ಸಹ ಅಳು ನಿಲ್ಲಲಿಲ್ಲ. ಆಗ ಭಗವಾನ್ - ಸಹೋದರಿ ! ಯುದ್ಧಕ್ಕೆ ನೀನೇ ಅವನಿಗೆ ತಿಲಕವಿಟ್ಟು ಕಳುಹಿಸಿದ್ದೆ. ಸೋತ ಮುಖವನ್ನು ನನಗೆ ತೋರಿಸಬೇಡವೆಂದು ಹೇಳಿದ್ದೆ. ಗೆಲುವನ್ನು ಪಡೆದು ಬಂದರೆ ನನ್ನ ಮಡಿಲಿದೆ, ಇಲ್ಲವಾದರೆ ನೆಲದ ಮಡಿಲು ಹೀಗೆ ಧೈರ್ಯದ ಸಂದೇಶವನ್ನು ನೀಡುವವಳು ಅಳುವುದು ಸರಿಯಲ್ಲ' ಎಂದ.

ಅದಕ್ಕೆ ಸುಭದ್ರ - 'ಅಣ್ಣಾ ಸುಮ್ಮನಿರು, ಈಗ ಮಾತಾಡಬೇಡ, ನಿನ್ನ ಸಹೋದರಿ ಸುಭದ್ರಾ ಈಗ ಸು - ಭದ್ರವಾಗಿಯೇ ಇದ್ದಾಳೆ. ಪರಮಶಾಂತಳಾಗಿದ್ದಾಳೆ - ಎಂದೂ ಅಳಲಾರಳು. ಯುದ್ಧಕ್ಕೆ ಕಳುಹಿಸುವ ವೀರ ಪತ್ನಿ ಕ್ಷತಿಯಾಣಿಯಾಗಿದ್ದಳು, ಮತ್ತೆ ಅಳುವ ಮಗನ ತಾಯಿಯಾಗಿದ್ದಾಳೆ ಅಳಲಿ ಬಿಡಿ. ಹೋಗಿ, ನೀವು ಮೊದಲು ತಾಯಿಯಾಗಿ, ನಂತರ ಮಗ ಸತ್ತಾಗ ಅಳಬೇಡಿ, ಆಗ ನನಗೆ ಬಂದು ತಿಳಿಸಿ' ಎಂದು ಉತ್ತರಿಸಿದಾಗ ಭಗವಾನ್ ಶ್ರೀ ಕೃಷ್ಣ ಸುಮ್ಮನಾದ.

ಪ್ರತಿಯೊಬ್ಬ ಮನುಷ್ಯನ ಮನಸ್ಸಿನಲ್ಲಿ ಇಂತಹ ಒಂದು ಸುಭದ್ರಾ ವೃತ್ತಿ ಇರುತ್ತದೆ.ಭಗವಂತನ ಸಹೋದರಿಯಲ್ಲಿದ್ದಂತೆ. ಅದು ಸದಾ ಶಾಂತವಾಗಿದ್ದು ಜಗತ್ತಿನ ಎಲ್ಲ ಕರ್ತವ್ಯ ಕರ್ಮಗಳನ್ನು ನಿರ್ಲಿಪ್ತಭಾವದಿಂದ ಮಾಡುತ್ತದೆ. ಅದನ್ನು ಅರಿತು (ಪತ್ತೆ ಮಾಡಿ') ಸ್ವಧರ್ಮವನ್ನು ಪಾಲಿಸುವುದೇ ಜೀವನದ ಒಳ್ಳೆಯ ದರ್ಶನ : ಸ್ವಕರ್ಮಣಾ ತಮಭ್ಯರ್ಚಸಿದ್ಧಿಂ ವಿಂದತಿ ಮಾನವ॥

### ಪರೋಪಕಾರವೇ ಮಹಾನ್ ಧರ್ಮ

ದುರಾತ್ಮನಾದ ರಾವಣ ಮಾರೀಚನನ್ನು ಮಾಯಾ ಮೃಗವನ್ನಾಗಿ ಮಾಡಲು ಒತ್ತಡ ತಂದ. ಮಾಯೆಯಿಂದ ಸ್ವರ್ಣಮೃಗವಾದ ಮಾರೀಚನನ್ನು ವಧಿಸಲು ಶ್ರೀರಾಮ ಧನಸ್ಸು ಹಿಡಿದು ಅದರ ಹಿಂದೆ ಹೋದ.ಅದು ಶ್ರೀರಾಮನನ್ನು ಕಾಡಿನಲ್ಲಿ ಬಹುದೂರ ಕರೆದುಕೊಂಡು ಹೋಯಿತು.ಕೊನೆಗೆ ಅವನ ಬಾಣಕ್ಕೆ ಹತವಾಗಿ, ಸಾವಿನ ಅಂತ್ಯಕ್ಷಣದಲ್ಲಿ- 'ಹಾ ಲಕ್ಷ್ಮಣ!' ಎಂದು ಕೂಗಿ ವಂಚನೆಯ ಧ್ವನಿ ಮಾಡಿತು.ಆ ಆರ್ತಸ್ವರವನ್ನು ಕೇಳಿ ಜಾನಕಿ ದುಃಖಪಟ್ಟಳು. ಒತ್ತಾಯ ಪೂರ್ವಕ ಲಕ್ಷ್ಮಣನನ್ನು ಅಣ್ಣನ ಸಂಕಷ್ಟ ತಿಳಿಯಲು ಕಳುಹಿಸಿಕೊಟ್ಟಳು.ಪಂಚವಟಿಯಲ್ಲಿ ವೈದೇಹಿಯನ್ನು ಒಂಟಿಯಾಗಿ ಕಂಡ ರಾವಣ ಅಲ್ಲಿಗೆ ಬಂದು ಅವಳನ್ನು ಬಲವಂತವಾಗಿ ರಥದಲ್ಲಿ ಕುಳ್ಳಿರಿಸಿಕೊಂಡ.

ಅತಿವೇಗದಲ್ಲಿ ರಾಕ್ಷಸರಾಜ ಕರೆದುಕೊಂಡು ಹೋಗುವಾಗ ಮೈಥಿಲಿ ಆರ್ತಧ್ವನಿ ಮಾಡುತ್ತಿದ್ದಳು.ಈ ಧ್ವನಿಯನ್ನು ಪಕ್ಷಿರಾಜ ಜಟಾಯು ಸಹ ಕೇಳಿದ. ಜಟಾಯು ವೃದ್ಧ. ರಾವಣ



ವಿಶ್ವ ವಿಜಯಿ ಎಂದು ಅದಕ್ಕೂ ಗೊತ್ತು. ಅತ್ಯಂತ ಕ್ರೂರಿ ಎಂದೂ ಬ್ರಹ್ಮನ ವರಪ್ರಸಾದದಿಂದ ಪ್ರಭಾವಿ ಅಜೇಯನಾಗಿರುವುದೂ ತಿಳಿದಿತ್ತು.ತಾನು ರಾವಣನನ್ನು ಕೊಲ್ಲುವುದಾಗಲೀ, ಸೋಲಿಸುವುದಾಗಲೀ ಸಾಧ್ಯವಿಲ್ಲವೆಂದು ಜಟಾಯುವಿಗೆ ಗೊತ್ತಿತ್ತು.ಜಾನಕಿಯನ್ನು ಆ ಕ್ರೂರ ರಾಕ್ಷಸನಿಂದ ಬಿಡಿಸಿಕೊಳ್ಳುವ ಆಸೆಯೂ ಇರಲಿಲ್ಲ, ಅದು ಆಗುತ್ತಲೂ ಇರಲಿಲ್ಲ. ಅದಕ್ಕೆ ಬದಲಾಗಿ ರಾವಣನ ವಿರೋಧ ಕಟ್ಟಿಕೊಳ್ಳುವುದು ನಿಶ್ಚಿತವಾಗಿ ಸಾವನ್ನು ಆಹ್ವಾನಿಸಿದಂತೆ ಎಂದು ತಿಳಿದಿತ್ತು. ಆದರೆ ಸಫಲತೆ-ವಿಫಲತೆಗಳಲ್ಲಿ ಚಿತ್ತವನ್ನು ಸಮಾನವಾಗಿಟ್ಟು (ಸಮಾಧಾನ ಚಿತ್ತ) ಕೊಳ್ಳುವುದು ಜೀವಿಗಳ ಕರ್ತವ್ಯವೆಂದು ದೃಢ ನಂಬಿಕೆ ಇತ್ತು. ಅದನ್ನೇ ಜಟಾಯು ಮಾಡಿದ್ದು. ತನ್ನ ಶಕ್ತಿ ಮೀರಿ ರಾವಣನ ಮೇಲೆ ಜಟಾಯು ಎಗರಿತು.ಅವನ ರಥವನ್ನು ತನ್ನ ಹೊಡೆತದಿಂದ ಉರುಳಿಸಿತು. ಜತೆಗೆ ಉಗುರು ಮತ್ತು ಕೊಕ್ಕಿನ ತಿವಿತದಿಂದ ರಾವಣನ ಶರೀರಕ್ಕೆ ಗಾಯವನ್ನು,ನೋವನ್ನುಂಟು ಮಾಡಿತು.ಆದರೆ ಅಂತಿಮವಾಗಿ ರಾವಣ ತನ್ನ ಕತ್ತಿಯಿಂದ ಅದರ ರೆಕ್ಕೆಗಳೆರಡನ್ನು ಕತ್ತರಿಸಿದ. ಜಟಾಯು ನೆಲದ ಮೇಲೆ ಉರುಳಿತು. ರಾವಣ ಜಾನಕಿಯೊಂದಿಗೆ ಆಕಾಶಮಾರ್ಗವಾಗಿ ಹೊರಟುಹೋದ.

ಮಾರೀಚನನ್ನು ಕೊಂದು ಶ್ರೀರಾಮ ಹಿಂತಿರುಗಿದ ಲಕ್ಷ್ಮಣ ಅವನಿಗೆ ಮಾರ್ಗಮಧ್ಯದಲ್ಲಿಯೇ ಸಿಕ್ಕಿದ. ಕುಟೀರದಲ್ಲಿ ಜಾನಕಿ ಇಲ್ಲದ್ದನ್ನು ಕಂಡು ವ್ಯಾಕುಲಗೊಂಡರು. ನಾನಾ ರೀತಿಯಲ್ಲಿ ದುಃಖಿಸುತ್ತಾ ವೈದೇಹಿಯನ್ನು ಹುಡುಕಿಕೊಂಡು ಮುಂದೆ ಹೋದರು. ದಾರಿಯಲ್ಲಿ ಅವರ ನಿರೀಕ್ಷಣೆಯಲ್ಲಿದ್ದ ಜಟಾಯ ಅಂತಿಮ ಸ್ಥಿತಿಯಲ್ಲಿ ಮೃತ್ಯುವಿನ ಕ್ಷಣ ಗಣನೆ ಮಾಡುತ್ತಿತ್ತು. ಮರ್ಯಾದಾ ಪುರುಷೋತ್ತಮನಿಗೆ ಅದು ವಿದೇಹ ನಂದಿನಿಯ ವೃತ್ತಾಂತವನ್ನು ತಿಳಿಸಿತು. ಅಂದು ಶ್ರೀ ರಾಘವ ನರನಾಟ್ಯ ತ್ಯಜಿಸಿ - 'ಪಕ್ಷಿರಾಜ! ನಿನ್ನ ಶರೀರವನ್ನು ತ್ಯಜಿಸಬೇಕು. ನಾನು ಅದನ್ನು ಗುಣಪಡಿಸುತ್ತೇನೆ ಎಂದ.

ಜಟಾಯು ತಾನೆ ಇದನ್ನು ಹೇಗೆ ಒಪ್ಪಿಯಾನು ಶ್ರೀರಾಮನ ಎದುರು ನಿಂತಿರುವಾಗ ಮೃತ್ಯುವಿಗೆ ಇದಕ್ಕಿಂತ ಸೌಭಾಗ್ಯಯುತ ಘಳಿಗೆಯಾದರೋ ಪದೇ ಪದೇ ಬರುತ್ತದೇನು? ತ್ರಿಭುವನದ ಒಡೆಯ ಜಟಾಯುವನ್ನು ತೊಡೆಯ ಮೇಲೆ ಇಟ್ಟು ಕೊಂಡು ತನ್ನ ಜಟೆಯಿಂದಲೇ ಅದರ ರಕ್ತ ಶರೀರವನ್ನು ಒರಸುತ್ತಾ,ಕಣ್ಣೀರಿನಿಂದಲೇ ಸ್ನಾನಮಾಡಿಸುತ್ತಿದ್ದ. ಸರ್ವ ಸಮರ್ಥನಾಗಿದ್ದರೂ ತಾನು ಜಟಾಯುವಿಗೆ ಏನೂ ಕೊಡಲಾಗದುದು ಅವನ ಅನುಭವಕ್ಕೆ ಬರುತ್ತಿತ್ತು ಕಣ್ಣೀರಿನಿಂದ ತುಂಬಿದ ನೇತ್ರಗಳುಳ್ಳ ಶ್ರೀರಾಮ. 'ತಾತ ಕರ್ಮ ನಿಜ ತೇಂ ಗತಿ ಪಾ ಈ ' 'ಪರಹಿತ ಬಸ ಜಿನ್ಹ ಕೇ ಮನ ಮಾಹೀಂ। ತಿನ್ಹ ಕಹು ಜಗ ದುರ್ಲಭ ಕಛು ನಾಹೀಂ ಎಂದ 'ಜಟಾಯು! ನೀವಾದರೋ ನಿಮ್ಮ ಕರ್ಮದಿಂದಲೇ ಪರಮ ಗತಿಯನ್ನು ಹೊಂದಿದ್ದೀರಿ. ನೀವು ಸಂಪೂರ್ಣ ತೃಪ್ತಿ ಹೊಂದಿದ್ದೀರಿ. ನಿಮಗೆ ನಾನಾದರೋ ಏನೂ ಕೊಡಬಲ್ಲೆ".

ಶರೀರ ತ್ಯಜಿಸಿ ಜಟಾಯು ಚತುರ್ಭುಜ ದಿವ್ಯ ಭಗವತ್ಸಾರ್ಥದ ದೇಹದಿಂದ ವೈಕುಂಠಕ್ಕೆ ಹೋದಾಗ, ಶ್ರೀ ರಾಮ ತನ್ನ ಕೈಗಳಿಂದಲೇ ಅವನ ಆ ಪಕ್ಷಿ ದೇಹಕ್ಕೆ ಬಹಳ ಗೌರವದಿಂದ ಅಗ್ನಿ ಸಂಸ್ಕಾರ ಮಾಡಿದ.

### ಅಲೌಕಿಕ ಭ್ರಾತೃಪ್ರೇಮ

ಸರಯೂ ನದಿಯ ಸ್ವಚ್ಛ ದಡದಲ್ಲಿ ಚಕ್ರವರ್ತಿಗಳ ನಾಲ್ಕೂ ಮಕ್ಕಳೂ ಗೆಳೆಯರೊಡನೆ ಆಡಲು ಬಂದಿದ್ದರು. ಎಲ್ಲ ಬಾಲಕರನ್ನು ಎರಡು ಗುಂಪುಗಳಾಗಿ ವಿಭಜಿಸಲಾಯಿತು. ಒಂದು ಗುಂಪಿಗೆ ಶ್ರೀರಾಮನಾಯಕನಾದರೆ ಮತ್ತೊಂದಕ್ಕೆ ಭರತ ನಾಯಕನಾದ. ಶ್ರೀರಾಮನೊಂದಿಗೆ ಲಕ್ಷ್ಮಣ ಮತ್ತು ಭರತನೊಂದಿಗೆ ಶತ್ರುಘ್ನ ಸದಾ ಇರುತ್ತಿದ್ದರು. ಇಂದೂ ಹಾಗೆಯೇ ಇದ್ದರು.ಎರಡು ಗುಂಪುಗಳೂ ಸುಸಜ್ಜಿತವಾಗಿ ನಿಂತಿದ್ದವು.ಎರಡು ಗುಂಪುಗಳ ಮಧ್ಯೆ ವಿಶಾಲವಾದ ಸಮತಟ್ಟು ನೆಲ ನಡುವೆ ಗೆರೆ ಎಳೆಯಲಾಯಿತು. ಆಟ ಪ್ರಾರಂಭವಾಯಿತು. ಇಂದು ರಾಜಕುಮಾರರು ಕಬಡ್ಡಿ ಆಡುತ್ತಿದ್ದರು.

ಲಕ್ಷ್ಮಣನಿಗೆ ಇಂದು ಅತಿ ಉತ್ಸಾಹ, ಭರತನನ್ನು ಕುರಿತು ತಮ್ಮಾ!ಇವತ್ತು ಶ್ರೀರಾಮನೇ ಗೆಲ್ಲುವುದು ಎಂದು ಪದೇಪದೇ ಉದ್ರೇಕಿಸುತ್ತಿದ್ದ.

ಈ ಪ್ರೋತ್ಸಾಹ ಭರತನನ್ನು ಸಂತೋಷಗೊಳಿಸುತ್ತಿತ್ತು.ಅವನ ಗುಂಪಿನ ಬಾಲಕರು ಇಂದು ಸೋಲುತ್ತಿದ್ದರು.ಒಬ್ಬೊಬ್ಬರಾಗಿ ಅವರ ಕಡೆಯ ಸಂಖ್ಯೆ ಕಡಿಮೆಯಾಯಿತು. ಪ್ರತಿಸಲ ಲಕ್ಷ್ಮಣ ಬಂದಾಗಲೂ, ಒಬ್ಬಬ್ಬರು ಬಾಲಕರನ್ನು ಮುಟ್ಟಿಯೇ (ಔಟ್) ಹಿಂತಿರುಗುತ್ತಿದ್ದ. ಕೊನೆಗೆ ಶತ್ರುಘ್ನನೂ ಸೋತ. ಅವನ ಗುಂಪಿನಲ್ಲಿ ಉಳಿದುಕೊಂಡಿದ್ದು ಏಕಮಾತ್ರ ಭರತ.

'ಈಗ ಎಲ್ಲರೂ ಸುಮ್ಮನೆ ನಿಂತಿರುತ್ತೇವೆ. ಭರತ ಈಗ ನನ್ನನ್ನು ಮುಟ್ಟಿದರೆ ಗೆಲವು ಅವನದು, ಮುಟ್ಟದಿದ್ದರೆ ಗೆಲವು ನನ್ನದು ಎಂದು ಶ್ರೀರಾಮ ಆಟದ ನಡುವೆ ಒಂದು ಅದ್ಭುತ ತೀರ್ಮಾನದ ಘೋಷಣೆ ಮಾಡಿದ.

- 'ನೀವೂ ಪೂರ್ಣವೇಗವಾಗಿ ಓಡಿ' ಎಂದು ಲಕ್ಷ್ಮಣ ಅಣ್ಣನನ್ನು ಹುರಿದುಂಬಿಸಿದ. ಭರತ ಓಡುತ್ತಾ ಬಂದ, ಶ್ರೀರಾಮ ಮುಂದೋಡಿದ. ತನಗೆ ಓಡಲು ಬರುವುದಿಲ್ಲವೆಂಬಂತೆ ಓಡಿದ. ಹತ್ತು ಹೆಜ್ಜೆ ಮುಂದೊಡುವುದರಲ್ಲಿ ಭರತನ ಕೈ ರಾಮನನ್ನು ಸ್ಪರ್ಶಿಸಿತು.

ತಮ್ಮ ಭರತ ಗೆದ್ದ. ರಾಮನ ಕಮಲಮುಖ ಅರಳಿತು. ಚಪ್ಪಾಳೆ ತಟ್ಟಿದ. ಆದರೆ ಭರತ ತಲೆತಗ್ಗಿಸಿದ್ದ. ಅವನ ಮುಖದಲ್ಲಿ ಉತ್ಸಾಹದ ಬದಲು ನಾಚಿಕೆಯಭಾವ ಮೂಡಿತ್ತು. ತನ್ನಣ್ಣನ ಭ್ರಾತೃ ಸ್ನೇಹವನ್ನು ಸಾಕ್ಷಾತ್ ಕಂಡು ಭರತನ ಕಣ್ಣುಗಳು ತುಂಬಿ ಬಂದವು. 'ತಮ್ಮ ಭರತ ಗೆದ್ದ' ಎಂದು ಶ್ರೀರಾಮ ಚಪ್ಪಾಳೆ ತಟ್ಟುತ್ತಾ ಖುಷಿಯಿಂದ ಕುಣಿದಾಡುತ್ತಾ ಹೋಗುತ್ತಿದ್ದ.

ವೈಕುಂಠವು ವಿಷ್ಣು ನಿವಾಸ.  ಅದೇ ಭಗವದ್ಧಾಮವು "ಕುಂಠಿತ" ರಹಿತವಾದದ್ದೇ ವೈಕುಂಠ. ಅಂದರೆ ದುಃಖವಿಲ್ಲದ ಸ್ಥಾನವು. ಅಲ್ಲಿ ವೈಷಮ್ಯವಿರುವುದೇ ಇಲ್ಲ. ಅಲ್ಲಿರುವುದೆಲ್ಲಾ ಆಧ್ಯಾತ್ಮಿಕ ವೈವಿಧ್ಯಪೂರ್ಣವೇ ಆಗಿದೆ. ಆದರೆ ಅದಕ್ಕೆ ವ್ಯತಿರಿಕ್ತವಾಗಿ ನಾವಿರುವ ಭೂಲೋಕ ಕುಂಠಿತಲೋಕ ಅಂದರೆ ದುಃಖ ಪೂರ್ಣಲೋಕವು. ಆದರೆ ಸಮಸ್ಯೆಯೇನೆಂದರೆ, ಜಗತ್ತಿನಲ್ಲಿ ಕಂಡು ಬರುವ ವಿಷಯವೆಲ್ಲಾ ಸರ್ವೇ ಸಾಮಾನ್ಯವಾಗಿಯೂ, ಇಲ್ಲಿರುವುದೆಲ್ಲಾ ವೈವಿಧ್ಯಮಯವಾಗಿರುವುದಾಗಿಯೂ ಕಂಡು ಬರುತ್ತದೆ. ಆದರೆ ಗುರುಸಾಧು ಸಂತರ ಶಾಸ್ತ್ರ ವಚನಗಳ ಉಪದೇಶವು ದಿವ್ಯದೃಷ್ಟಿಯೇನಾದರೂ ನಮಗುಂಟಾದಲ್ಲಿ ಈ ಲೋಕದಲ್ಲಿನ ಲೋಪಗಳೂ, ಆಧ್ಯಾತ್ಮಿಕ ಜಗತ್ತಿನ ದಿವ್ಯತ್ವವು ನಮಗೆ ಅರ್ಥವಾಗುತ್ತವೆ. ಭೌತಿಕಜಗತ್ತಿನಲ್ಲಿ ದೋಷಗಳು ನಮಗೇ ನಿರಂತರವಾಗಿ ಕಾಣುತ್ತಿರುತ್ತಲೇ ಇರುತ್ತವೆ. ಸಹೋದರರ ಮಧ್ಯೆ ಕಲಹಗಳು, ಗಂಡ ಹೆಂಡಿರ ಮಧ್ಯೆ ಜಗಳಗಳು, ಬಂಧುಗಳ ಮಧ್ಯೆ ಭಿನ್ನಾಭಿಪ್ರಾಯಗಳು, ಕುಟಂಬಗಳ ಮಧ್ಯೆ ಗಲಭೆಗಳು, ವರ್ಣಗಳ ಮಧ್ಯೆಗಲಭೆಗಳು, ವರ್ಗಗಳ ಮಧ್ಯೆ ಹೋರಾಟಗಳು, ರಾಜ್ಯಗಳ ಮಧ್ಯೆ ಕದನಗಳು, ದೇಶಗಳ ಮಧ್ಯೆ ಸಂಗ್ರಾಮಗಳು ಕಾಣಸಿಗುತ್ತಲೇ ಇರುತ್ತವೆ, ಇವೆಲ್ಲವೂ ನಮಗೆ ಕಾಣುತ್ತಲೂ ಇರುತ್ತವೆ ಕೇಳುತ್ತಲೂ ಇರುತ್ತವೆ. ಆದ್ದರಿಂದಲೇ ಇವೆಲ್ಲವೂ ನಮಗೆ ಸಾಮಾನ್ಯವೆಂದೇ ಅನ್ನಿಸುತ್ತವೆ. ಆದರೆ ಈ ವಿಧವಾದ ವೈಷಮ್ಯಗಳು ಏತಕ್ಕಾಗಿ ಉಂಟಾಗುತ್ತಿವೆಯೆಂಬುದು ನಮಗೆ ಜ್ಞಾನವಿಕಸನದ ನಂತರವೇ ತಿಳಿದು ಬರುತ್ತದೆ.ಇಂತಹ ಯಾವುದೇ ವೈಷಮ್ಯಗಳಿರದ ಸ್ಥಾನವೇ ವೈಕುಂಠವು.ಭಗವಂತನೊಂದಿಗೆ ನಿತ್ಯ ಸಂಬಂಧವನ್ನು, ಪ್ರೇಮವನ್ನು ಬೆಳೆಸಿದವನು ಮಾತ್ರವೇ ತನ್ನ ಮರಣ ಸಮಯದಲ್ಲಿ ಭಗವಂತನನ್ನು ಸ್ಮರಿಸುತ್ತಾ ಭಗವದ್ಧಾಮಕ್ಕೆ ಪ್ರವೇಶ ಪಡೆಯುತ್ತಾನೆ. ಇದೇ ಗೀತಾ - ಭಾಗವತದ ಸಂದೇಶ.

ಬ್ರಹ್ಮದೇವರ ಸುಪುತ್ರರಾದ ಸನಕ, ಸನಾತನ, ಸನಂದನ,ಸನತ್ಕುಮಾರರು ಒಂದು ಬಾರಿ ಸಾಕಷ್ಟು ಸಂಚರಿಸಿ ವೈಕುಂಠಕ್ಕೆ ಸೇರಿಕೊಂಡಿದ್ದಾರೆ.ಈ ನಾಲ್ಕು ಕುಮಾರರು ಐದು ವರ್ಷದ ಬಾಲಕರ ರೂಪದಲ್ಲಿದ್ದು ನಗ್ನರಾಗಿ ಸಂಚರಿಸುತ್ತಿರುತ್ತಾರೆ. ಚಿಕ್ಕಮಕ್ಕಳು



# ವೈಕುಂಠ ದ್ವಾರಪಾಲಕರಿಗೆ ಶಾಪ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ: ಡಿ.ಎಸ್.ಬದ್ರಿನಾಥ್

ಬಟ್ಟೆಯಿಲ್ಲದೇ ಅಲ್ಲಿ ಇಲ್ಲಿ ತಿರುಗುವುದು ಸರ್ವೇಸಾಮಾನ್ಯವಲ್ಲವೇ ವೈಕುಂಠವನ್ನು ಸೇರಿಕೊಂಡ ಬ್ರಹ್ಮತನಯರಿಗೆ ಅಲ್ಲಿ ಎಲ್ಲರೂ ಭಗವತ್ಸೇವೆಯಲ್ಲಿ ನಿರತರಾಗಿರುವುದು ಕಂಡು ಬಂದಿದೆ. ಅಲ್ಲಿ ಪುರುಷರೆಲ್ಲರೂ ಚತುರ್ಭುಜಗಳೊಂದಿಗಿರುವುದು ಕಾಣಿಸುತ್ತದೆ. ಅವರೆಲ್ಲರೂ ಪೀತಾಂಬರಧಾರಿಗಳಾಗಿ ತಮ್ಮ ಸೇವೆಗೆ ಯಾವುದೇ ಪ್ರತಿಫಲ ಕೋರದಿರುವವರಾಗಿದ್ದಾರೆ. ಅವರೆಲ್ಲರೂ ತಮ್ಮ ಮಡದಿಯರೊಂದಿಗೆ ವಿಮಾನಗಳಲ್ಲಿ ವಿಹರಿಸುವವರಾಗಿದ್ದಾರೆ. ಆದರೆ ಅಂತಹ ಸಮಯದಲ್ಲೂ ಅವರು ಇಂದ್ರೀಯ ಭೋಗ ಗಳಲ್ಲದೇ ಹರಿಗುಣ ಸಂಕೀರ್ತನೆಯಲ್ಲಿ ನಿರತರಾಗಿದ್ದಾರೆ. ಸ್ತ್ರೀ ಪುರುಷರ ಮಧ್ಯೆ ಸಾಧಾರಣವಾಗಿ ಒಬ್ಬರಿಗೊಬ್ಬರು ಆಕರ್ಷಿತ ರಾಗಿರುವುದು ಅವರುಗಳ ಮಧ್ಯೆ ಕಾಮವಿಕಾರಗಳು ಉಂಟಾಗುವುದು ಸಹಜವೇ. ಆದರೆ ವೈಕುಂಠದ ಪ್ರಭಾವದಿಂದಾಗಿ ಸ್ತ್ರೀ ಪುರುಷರ ಏಕಾಂತದಲ್ಲೂ ಸಹಾ ಕಾಮಭಾವನೆಯೇ ಕಾಣಲಿಲ್ಲ.ಎಲ್ಲಾ ಜೋಡಿಗಳು ಸಂಪೂರ್ಣವಾಗಿ ಶ್ರೀಹರಿ ಸೇವೆಯಲ್ಲೇ ನೆಲೆಗೊಂಡಿದ್ದಾರೆ. ವೈಕುಂಠದಲ್ಲಿರುವವರಿಗೆ ಕಾಮವಿಕಾರಗಳು ಇಲ್ಲವೇ ಇಲ್ಲವೆಂದು ಭಾಗವತದಲ್ಲಿ ಹೇಳಲಾಗಿದೆ.ಅವರ ಹೃದಯಗಳೆಲ್ಲಾ ಕೃಷ್ಣಾಮೃತ ಚಿತ್ತಗಳಾಗಿರುವುದೇ ಇದಕ್ಕೆ ಕಾರಣವು.

ಸನಕಾದಿ ಕುಮಾರರಿಗೆ ವೈಕುಂಠದಲ್ಲಿ ಅಸಂಖ್ಯಾತವಾದ ಕಲ್ಪವೃಕ್ಷಗಳು ಕಂಡು ಬಂದಿವೆ. ಅಲ್ಲಿ ಎಲ್ಲಾ ವನಗಳಲ್ಲಿಯೂ ಕೋಗಿಲೆ,ನವಿಲುಗಳಂಥ ಎಷ್ಟೋ ಪಕ್ಷಿಗಳು ಕಂಡು ಬಂದಿವೆ. ದುಂಬಿಗಳು ಪುಷ್ಪ ಸುಗಂಧವನ್ನು ಆಸ್ವಾದಿಸುತ್ತಾ! ಝೇಂಕಾರವನ್ನು ಮಾಡಿವೆ.ವೃಕ್ಷಗಳೊಂದೇ ಅಲ್ಲದೇ ಅಲ್ಲಿ ಎಷ್ಟೋ ಬಗೆಯ ಹೂ ಬಳ್ಳಿಗಳೂ ಸಹ ಇವೆ. ಅಲ್ಲಿ ಎಷ್ಟೋ ಸೌಗಂಧಭರಿತ ಪುಷ್ಪಲತೆಗಳಿದ್ದರೂ ತುಳಸಿ ಗಿಡಕ್ಕೆ ಬಹಳ ಆದರವನ್ನೀಯುವುದು ಕಂಡು ಬಂದಿದೆ. ಅಂದರೆ ವೈಕುಂಠದಲ್ಲಿ ವೈಷಮ್ಯವೇ ಇಲ್ಲ, ವಾಸ್ತವದಲ್ಲಿ ಅಂತಹ ವೈಷಮ್ಯರಹಿತ ವಾತಾವರಣವೂ ಸಹಾ ಈ ಜಗತ್ತಿನ ಮೇಲಿರುವ ಸಾಧ್ಯವಿದೆ. ಎಳ್ಳಷ್ಟೂ ವೈಷಮ್ಯವನ್ನು ಪ್ರದರ್ಶಿಸದ ಕುಟುಂಬಕ್ಕೆ ಶಿವಪಾರ್ವತಿಯರ ಕುಟುಂಬವೇ ಸರಿಯಾದ ಉದಾಹರಣೆ. ಶಿವನ ವಾಹನವು ನಂದಿ - ಪಾರ್ವತಿ (ದುರ್ಗೆ) ಯ ವಾಹನವು ಸಿಂಹ. ನಿತ್ಯವೂ ಶಿವ - ಪಾರ್ವತಿಯರು ಭಗವದ್ಧ್ಯಾನದಲ್ಲಿರುವುದರಿಂದ ಸಿಂಹ- ನಂದಿಯರ ಮಧ್ಯೆ ವೈಷಮ್ಯವಿಲ್ಲ.ಶಿವನ ಕೊರಳಲ್ಲಿ ಹಾವಿದೆ. ಇನ್ನು ಶಿವ - ಪಾರ್ವತಿಯರ ಮಗನಾದ ಕುಮಾರಸ್ವಾಮಿ ವಾಹನವು ನವಿಲು. ಆದರೂ ಹಾವು - ನವಿಲಿಗೆ ಅಲ್ಲಿ ವೈಷಮ್ಯವಿಲ್ಲ. ಶಿವನ ಕೊರಳಲ್ಲಿರುವ ಹಾವಿಗೂ ಬೆನಕನ ವಾಹನವಾದ ಇಲಿಗೂ ಸಹಾ ವೈಷಮ್ಯವಿಲ್ಲ. ಈ ರೀತಿಯಾಗಿ ಸತತವಾಗಿ ಕೃಷ್ಣಸೇವೆ ಅಥವಾ ವಿಷ್ಣು ಭಕ್ತಿಯಲ್ಲಿ ನಿರತರಾದವರ ಮಧ್ಯೆ ಯಾವುದೇ ವೈಷಮ್ಯ ವಿರುವುದಿಲ್ಲ.

ಸನಕಾದಿ ಋಷಿಗಳಿಗೆ ಅಲ್ಲಿ,ಸುಂದರಾಂಗಿಯರು ವಯ್ಯಾರದಿಂದ ತಮ್ಮ ಕೈಗಳಲ್ಲಿ ಪದ್ಮಗುಚ್ಚಗಳಿಂದ ವೈಕುಂಠದ ನೆಲವನ್ನು ಶುಭ್ರಗೊಳಿಸುವುದು ಕಂಡಿದೆ ನಿಜದಲ್ಲಿ ಅಲ್ಲಿ ಧೂಳೆಂಬುದೇ ಇಲ್ಲ.ಆದರೆ ಭಗವಂತನ ಕೃಪೆಯನ್ನು ಹೊಂದಲು ಅವರು ಭಗವತ್ಸೇವೆಯಲ್ಲಿ ನಿರತರಾಗಿದ್ದಾರೆ.ಅಲ್ಲಿರುವ ಉದ್ಯಾನವನದಲ್ಲಿ ಲಕ್ಷ್ಮೀದೇವಿಯು ಶ್ರೀ ಮಹಾವಿಷ್ಣುವನ್ನು ತುಳಸಿದಳಗಳಿಂದ ಪೂಜಿಸುತ್ತಿದ್ದುದು ಕಂಡ ಬಂದಿದೆ. ಭಗವಂತನನ್ನು ಅರ್ಚಿಸುತ್ತಾ ಆಕೆ ತನ್ನನ್ನು, ತನ್ನ ಸೌಂದಯವನ್ನು ಸರೋವರದ ನಿಶ್ಚಲ, ನಿರ್ಮಲ ಜಲದಲ್ಲಿ ನೋಡಿಕೊಂಡಿದ್ದಾಗಿದೆ. ಆ ಸರೋವರದ ನಿರ್ಮಲ ನೀರಲ್ಲಿ ಆಕೆಯ ಸೌಂದರ್ಯ ಎಷ್ಟೋ ರಮ್ಯವಾಗಿ ಕಂಡು ಬಂದಿದೆ. ನಿಜದಲ್ಲಿ ಹೇಳಬೇಕೆಂದರೆ ಈ ಭೌತಿಕ ಜಗತ್ತು ಆಧ್ಯಾತ್ಮಿಕ ಜಗತ್ತಿನ ಪ್ರತಿಬಿಂಬವೇ ಆಗಿದೆ. ಆದ್ದರಿಂದಲೇ ಈ ಭೌತಿಕ ಜಗತ್ತಿನಲ್ಲಿ ಕಂಡು ಬರುವ ಪ್ರತಿಯೊಂದು ಪ್ರತೀತಿ ಆ ವೈಕುಂಠದಲ್ಲೂ ಕಾಣಿಸಿದೆ.

ಯೋಗ ಬಲದಿಂದ ವೈಕುಂಠವನ್ನು ತಲುಪಿದ ಸನಕಾದಿಗಳು ಅಲ್ಲಿಯ ಶೋಭೆಯನ್ನು ಕಣ್ಣಾರೆ ಕಂಡು ಆಸ್ವಾದಿಸುತ್ತಾ, ಆರು ದ್ವಾರಗಳನ್ನು ದಾಟಿ ಏಳನೇ ದ್ವಾರವನ್ನು ತಲುಪಿದ್ದಾರೆ. ವೈಕುಂಠದಲ್ಲಿ ಏಳು ದ್ವಾರಗಳಿವೆಯೆಂದು ಹೇಳಲಾಗುತ್ತದೆ. ಆದ್ದರಿಂದಲೇ ವೈಕುಂಠ ಏಕಾದಶಿಯಂದು ಭಗವಂತನ ಆಲಯದಲ್ಲಿ ಏಳು ಬಾಗಿಲುಗಳು ತೆರೆದು, ಭಕ್ತರೆಲ್ಲರೂ ವಿಶೇಷವಾದ ಸೇವೆ ಮಾಡುವುದು ಸರ್ವ ವಿಧಗಳಲ್ಲಿಯೂ ಮಂಗಳಕರವೇ. ಇನ್ನು ಏಳನೇ ದ್ವಾರ ದಾಟುತ್ತಲೇ ಶ್ರೀ ಮಹಾವಿಷ್ಣುನ ದರ್ಶನ ಲಭಿಸುತ್ತದೆಂದು. ಎಲ್ಲರೂ ಭಾವಿಸಿದ್ದಾರೆ. ಅವರು ಆರು ದ್ವಾರಗಳನ್ನು ದಾಟಿ ಬರುತ್ತಿರುವುದನ್ನು ಯಾರೂ ಗಮನಿಸದೇ ಹೋಗಿದ್ದಾರೆ. ವೈಕುಂಠದಲ್ಲಿ ತನ್ನ ಸ್ವಾಮಿಯ ದರ್ಶನ ಭಾಗ್ಯ ದೊರೆಯಬೇಕೆಂದು ಅವರು ಮನಸಾರೆ ಕೋರಿದ್ದಾರೆ. ವಯಸ್ಸಿನಲ್ಲಿ ಶಿವನಿಗಿಂತ ದೊಡ್ಡವರೇ ಆಗಿದ್ದರೂ, ಯೋಗಬಲದಲ್ಲಿ ಸಹಾ ಯಾವುದೇ ಕಾಮವಿಕಾರಗಳಿರದ ಐದು ವರ್ಷದ ಬಾಲರ ರೂಪದಲ್ಲಿದ್ದಾರೆ ಸನತಕಾದಿಗಳು.ಪರಮಾನಂದದಿಂದ ಅವರೆಲ್ಲರೂ ಏಳನೇ ದ್ವಾರವನ್ನು ದಾಟುತ್ತಲೇ ಅಲ್ಲಿದ್ದ ಇಬ್ಬರು

ದ್ವಾರಪಾಲಕುರು ಅವರನ್ನು ತಡೆಗಟ್ಟಿದ್ದಾರೆ ಅವರೇ ಜಯ ವಿಜಯರು. ಓಡೋಡುತ್ತಾ ಒಳಗೆ ಹೊರಟಿರುವ ಸಮಯದಲ್ಲಿ ಯಾರೋ ತಮ್ಮನ್ನು ಹೀಗೆ ತಡೆಗಟ್ಟದ್ದು ಅವರಿಗೆ ಕೋಪವನ್ನು ತರಿಸಿದೆ. ಆದರೆ 'ಋಷಿಗಳಿಗೆ ಕೋಪ ಬರುವುದೇನು? ಎಂದು ಹಲವರು ಪ್ರಶ್ನಿಸಬಹುದು. ಆದರೆ ಭಗವತ್ಸೇವೆಯಲ್ಲೇ ಆಗಲೀ, ಭಗವದ್ದರ್ಶನಕ್ಕೆ ಆಗಲೀ ಯಾರಾದರೂ ಈ ರೀತಿ ತಡೆ ಯುಂಟು ಮಾಡಿದರೆ ಎಂತಹ ಸಾಧು ಮಾನವರಿಗೂ ಕೋಪವನ್ನುಂಟು ಮಾಡುತ್ತದೆ.ಸಾಮಾನ್ಯವಾಗಿ ಜೀವರಿಗೆ ತಮ್ಮ ಇಂದ್ರಿಯ ಭೋಗದಲ್ಲಿ ಯಾರೇ ಆಗಲಿ ತಡೆಯುಂಟು ಮಾಡಿದರೇ ಕೋಪ ಬರುವುದುಂಟು ಅದಕ್ಕೆ ಕಾರಣ ಕಾಮ. ಆದರೆ ಭಗವತ್ಸೇವೆಗೆ ತಡೆಯುಂಟಾದಲ್ಲಿ ಬರುವ ಕೋಪಕ್ಕೆ ಕಾರಣ ಪ್ರೇಮ. ಅದೇ ಭಗವತ್ಪ್ರೇಮ ಅಂತಹ ವೈಷಮ್ಯ ತೋರಿಸುವವರಿಗೆ ವೈಕುಂಠದಲ್ಲಿ ಸ್ಥಾನವಿರಬಾರದೆಂದು ಭಾವಿಸಿ ಸನಕಾದಿಗಳು ಜಯ-ವಿಜಯರಿಗೆ ಶಾಪವನ್ನಿತ್ತಿದ್ದಾರೆ. ಅದೇ ವೈಕುಂಠದಿಂದ ಗಡಿಪಾರಾಗುವುದು.

ವೈಕುಂಠದೊಳಗೆ ಸ್ಥಿತ ವಿಷ್ಣುಮೂರ್ತಿಗೆ ತನ್ನ ಸೇವಕರು ಮಾಡಿದ ತಪ್ಪು ಕೂಡಲೇ ದಿವ್ಯದೃಷ್ಟಿಯ ಮೂಲಕ ಅರ್ಥವಾಗಿದೆ. ಕೂಡಲೆ ಲಕ್ಷ್ಮೀ ಸಮೇತನಾದ ಆ ದೇವದೇವನು ಹೊರಗಿನ ದ್ವಾರದವರೆಗೂ ಒಂದೇ ಬಿಟ್ಟಿದ್ದಾನೆ. ತಾವು ನೋಡ ಬಯಸಿದ ತಮ್ಮ ಸ್ವಾಮಿ ತಾನೇ ಸ್ವತಃ ಎದುರು ಬಂದು ದರ್ಶನ ಕೊಡುವುದು ಸನಕಾದಿ ಋಷಿಗಳಿಗೆ ಅದೆಷ್ಟೋ ಆನಂದ ತಂದಿದೆ. ಆ ಕ್ಷಣ ಅವರಿಗೆ ಸ್ವಾಮಿಯ ಸೌಂದರ್ಯ ಕಣ್ಣಿಗೆ ಹಬ್ಬವಾಗಿ ಕಂಡಿದೆ. ವಿಷ್ಣುಭಗವಾನನ ಕಣ್ನೋಟ ಹೃದಯವನ್ನು ಸೂರೆ ಗೊಂಡಿದೆ. ಆತನ ಕೊರಳಲ್ಲಿ ವೈಜಯಂತಿ ಮಾಲೆ ಓಲಾಡುತ್ತಿದೆ.ಶ್ಯಾಮಲವರ್ಣನಾದ ಆ ಸ್ವಾಮಿಯ ಹೃದಯದಲ್ಲಿ ಲಕ್ಷ್ಮಿದೇವಿಯ ಆವಾಸಸ್ಥಾನ ಕಂಡಿದೆ. ಆತನ ವಕ್ಷಸ್ಥಲದ ಮೇಲೆ ಕೌಸ್ತುಭಮಣಿ ಕಾಣಿಸಿದೆ.ಸ್ವಾಮಿಯ ದರ್ಶನದಿಂದ ಹೃನ್ಮನಗಳು ಪರಮಾನಂದವನ್ನು ಹೊಂದಿದೆ.ಅಪ್ರಯತ್ನವಾಗಿ ಆ ನಾಲ್ಕು ಕುಮಾರರ ಗಣ ಬಾಗಿ ಸ್ವಾಮಿಯ ಪಾದಾರವಿಂದಗಳಿಗೆ ನಮಸ್ಕರಿಸಿದೆ.ಸ್ವಾಮಿಯ ಪಾದ ಪದ್ಮಗಳ ಮೇಲಿರುವ ತುಳಸಿದಳದ ಸುಂಗಧ ತಮ್ಮ ನಾಸಿಕರಂಧ್ರಗಳಲ್ಲಿ ಪ್ರವೇಶಿಸುತ್ತಲೇ ಅವರೆಲ್ಲರೂ ಭಗವತ್ಪ್ರೇಮದಲ್ಲಿ ಮುಳುಗಿ ಹೋಗಿದ್ದಾರೆ.

ಸನಾಕಾದಿ ಋಷಿಗಳು ಈ ರೀತಿಯಾಗಿ ತನ್ಮಯತೆಯಲ್ಲಿ ಲೀನವಾಗಿರುವಾಗಲೇ ಶ್ರೀಮಹಾವಿಷ್ಣುವು ಬ್ರಾಹ್ಮಣರ ಮಹಿಮೆ ಯನ್ನು ಹಾಡಿ ಕೊಂಡಾಡಿದ್ದಾನೆ.ತನ್ನ ಸೇವಕರ ತಪ್ಪನ್ನು ಆ ದೇವದೇವನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ಅವರ ಪರವಾಗಿ ತಾನು ಕ್ಷಮಾಪಣೆಯನ್ನು ಕೋರುವುದಾಗಿ ಹೇಳಿದ್ದಾನೆ. ಆದರೆ ಶಾಪವಶಾತ್, ವೈಕುಂಠವನ್ನು ಬಿಟ್ಟು ಹೋಗಬೇಕಾಗಿ ಬಂದಿರುವ ತನ್ನ ಸೇವಕರಿಗೆ ತಿರುಗಿ ವೈಕುಂಠವನ್ನು ಸೇರುವ ಮಾರ್ಗವನ್ನು ಬೋಧಿಸಬೇಕೆಂದು ಆ ದೇವ ದೇವನು ಪ್ರಾರ್ಥಿಸಿದ್ದಾರೆ.

ಶ್ರೀ ಮಹಾವಿಷ್ಣುವು ಆಡಿದ ಮಾತುಗಳು ಸನಕಾದಿಗಳನ್ನು ಸ್ವಲ್ಪ ಧರ್ಮ ಸಂಕಟದಲ್ಲಿ ಬೀಳಿಸಿವೆ. ಅನವಶ್ಯಕವಾಗಿ ತಾವುಗಳು ವೈಕುಂಠ ದ್ವಾರಪಾಲಕರ ಮೇಲೆ ಶಾಪವನ್ನಿತ್ತಿದ್ದಾಗಿ ನೊಂದಿದ್ದಾರೆ ಸನಕಾದಿಗಳು. ಅವರ ಮಾನಸಿಕ ಕ್ಷೋಭೆ ಯನ್ನು ಪರಿಗಣಿಸಿದ ದೇವದೇವನು ಅಗತ್ಯವಿಲ್ಲವೆಂದೂ ಶೀಘ್ರದಲ್ಲೇ ತನ್ನ ಸೇವಕರು ಮರಳಿ ವೈಕುಂಠಕ್ಕೆ ಬರಲಿದ್ದಾರೆಂದು ತಿಳಿಸಿದ್ದಾನೆ.

ಸನಕಾದಿಗಳು ಇತ್ತ ಶಾಪದಿಂದಾಗಿ ಜಯ ವಿಜಯರು ವೈಕುಂಠದಿಂದ ಪತನಗೊಂಡು ಭೂಲೋಕಕ್ಕೆ ಬಂದಿದ್ದಾರೆ. ಅವರು ನೇರವಾಗಿ ಬಂದು ದಿತಿಯ ಗರ್ಭದಲ್ಲಿ ಪ್ರವೇಶಿಸಿದ್ದಾರೆ. ಆ ಕಡೆ ವೈಕುಂಠದಲ್ಲಿ ಸನಕಾದಿಗಳು ಶ್ರೀವಿಷ್ಣುವಿಗೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿದ್ದಾರೆ. ಅವರ ಸ್ತುತಿ ಸ್ಮರಣೆಗಳನ್ನು ಸ್ವೀಕರಿಸಿ ಶ್ರೀಮಹಾವಿಷ್ಣುವು ಒಳಗೆ ಹೊರಟು ಹೋಗಿ ದ್ದಾನೆ.ಸನಕಾದಿಗಳು ದೇವದೇವನ ಸಂತೃಪ್ತಿಯನ್ನು ಹೊಂದಿ ತಮ್ಮ ನಿಜ ಸ್ಥಾನಕ್ಕೆ ಬಂದಿದ್ದಾರೆ. ಆ ಜಯವಿಜಯರೇ ಮೊದಲ ಜನ್ಮದಲ್ಲಿ ಹಿರಣ್ಯಾಕ್ಷ - ಹಿರಣ್ಯ ಕಶಿಪುವಾಗಿ, ಎರಡನೇ ಜನ್ಮದಲ್ಲಿ ರಾವಣ-ಕುಂಭಕರ್ಣರಾಗಿ, ಮೂರನೇ ಜನ್ಮದಲ್ಲಿ ಶಿಶುಪಾಲ-ದಂತವಕ್ರರಾಗಿ ಜನಿಸಿ, ಭಗವಂತನಿಂದ ಮರಣ ಹೊಂದಿ ಕಡೆಗೆ ಮರಳಿ ವೈಕುಂಠಕ್ಕೆ ಹೊರಟು ಹೋಗಿದ್ದಾರೆ. ಈ ರೀತಿಯಾಗಿ ಅವರು ಮೂರೂ ಜನ್ಮಗಳಲ್ಲಿಯೂ ಸ್ವಾಮಿಯೊಂದಿಗೆ ಕಲಹವೆಸಗಿ,ಹೋರಾಡಿ ಆತನ ಕೈಗಳಿಂದಲೇ ಮರಣಿಸಿ ತಮ್ಮ ಮೇಲಿದ್ದ ಶಾಪ ವಿಮೋಚನೆಯಾಗಲು ವೈಕುಂಠವನ್ನು ಸೇರಿಕೊಂಡು ತಿರುಗಿ ದ್ವಾರಪಾಲಕರಾಗಿ ನೇಮಕಗೊಂಡಿದ್ದಾರೆ.

# ಭಾವಿಸಮೀರ ಶ್ರೀವಾದಿರಾಜರು

– ಶ್ರೀಮತಿ. ಕೆ.ವಿ. ಪದ್ಮಾವತಿ




ಕಾಮಧೇನುರ್ಯಥಾ ಪೂರ್ವಂ ಸರ್ವಾಭೀಷ್ಟಫಲಪ್ರದಾ।
ತಥಾಕಲೌ ವಾದಿರಾಜ ಶ್ರೀಪಾದೋಽಭೀಷ್ಟದಃ ಸತಾಂ॥

ಮಾಧ್ವ ಯತಿ ಪರಂಪರೆಯಲ್ಲಿ ಭಾವೀ ಸಮೀರ ಶ್ರೀ ಮಧ್ವಾದಿರಾಜರಿಗೆ ಅಗ್ರಸ್ಥಾನ. ಶ್ರೀ ರಾಜರು ಚತುಃಷಷ್ಠಿ ಕಲಾ ಪ್ರವೀಣರು. ಸಾಹಿತ್ಯ ಸೊಬಗಿನ ಲಲಿತ ಶೈಲಿಯಲ್ಲಿ ವೇದಾಂತ ಶಾಸ್ತ್ರದ ಆಳಗಲವನ್ನು ತುದಿಶಿಖರವನ್ನು ಮನೋಜ್ಞವಾಗಿ ಗುರುತಿಸಿದ ಗರಿಮೆ, ಹೃದಯ ಮುಟ್ಟಿ ತಟ್ಟಿ ಹೇಳುವ ಹಿರಿಮೆ ಇವರದ್ದಾಗಿದೆ. ಕನ್ನಡ ಸಾಹಿತ್ಯವೂ ಸಮೃದ್ಧಿಯ ಸೋಪಾನವನ್ನೇರಿ ಸಂಪದ್ಭರಿತವಾದದ್ದು, ಇವರ ಲೇಖನ ಸಿರಿಯಿಂದ.

ಸಾಮಾಜಿಕ ಪ್ರಜ್ಞೆಯ ಅಪಾರ ಕಳಕಳಿಯನ್ನು ತಮ್ಮ ಕೃತಿಗಳಿಂದ ಕಾರ್ಯಗಳಿಂದ ಮೆರೆದಿರುವ ಭಾವಿಸಮೀರ ಶ್ರೀವಾದಿರಾಜರು. ವಾಸ್ತವ ಪ್ರಜ್ಞೆಯೆಡೆಗೆ ಕರೆದೊಯ್ಯುವ ನಿಷ್ಣಾತರು. ಕ್ರಿ.ಶ. 15 ನೇ ಶತಮಾನದ ಅಂತ್ಯದಲ್ಲಿ ದ.ಕ. ಜಿಲ್ಲೆಯಲ್ಲಿ ಉತ್ತರ ಭಾಗದಲ್ಲಿರುವ ಕುಂದಾಪುರದ ಬಳಿಯ ಕುಂಭಾಸಿ ಕ್ಷೇತ್ರಕ್ಕೆ ಸಮೀಪದ ಹೂವಿನಕೆರೆ ಎಂಬ ಗ್ರಾಮದಲ್ಲಿ ಶ್ರೀವಾದಿರಾಜರ ಅವತಾರವಾಯಿತು. ರಾಮಾಚಾರ್ಯ, ಸರಸ್ವತಿದೇವಿ ಅವರ ತಂದೆ ತಾಯಿ.

ಒಟ್ಟು 120 ವರ್ಷಗಳ (1480 - 1600) ಸುದೀರ್ಘ ಕಾಲ ಬಾಳಿದ ವೈಷ್ಣವ ಯತಿಗಳು ಇವರೊಬ್ಬರೇ. ಬ್ರಹ್ಮಚರ್ಯದಿಂದ ನೇರವಾಗಿ ಸನ್ಯಾಸಾಶ್ರಮ ಸ್ವೀಕರಿಸಿದ ಇವರು ಸನ್ಯಾಸ ಜೀವನವೇ 112 ವರ್ಷಗಳಷ್ಟು ದೀರ್ಘವಾಗಿದೆ. ಶ್ರೀ ಮಧ್ವಮುನಿಗಳ ಸಹೋದರರಾದ ಮಹಾತಪಸ್ವಿಗಳಾದ ಶ್ರೀ ವಿಷ್ಣುತೀರ್ಥರನ್ನು ಪ್ರಥಮಾಧ್ಯಕ್ಷರನ್ನಾಗಿ ಹೊಂದಿದ ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೇ ಮಠವು ಶ್ರೀ ವಾದಿರಾಜರು ಅಲಂಕರಿಸಿದ ಗುರುಪೀಠ ತಪಶ್ಶಕ್ತಿ ಮಂತ್ರಸಿದ್ಧಿ ಮತ್ತು ತತ್ತ್ವಜ್ಞಾನಗಳ ತ್ರಿವೇಣಿ ಸಂಗಮದಂತಿದ್ದ ಇವರಿಗೆ ರಾಜಮಹಾರಾಜರು ತಲೆಬಾಗಿದರು.

ತುಳುನಾಡಿನಲ್ಲಿ ಸಂಸ್ಕೃತಕ್ಕೊಂದು ಮಹಾಕಾವ್ಯ 'ರುಕ್ಮಿಣೀಶ ವಿಜಯ' ನೀಡಿದ ಮೊದಲ ಯತಿ ವಾದಿರಾಜರು. ಇದು ಕರ್ನಾಟಕ ಮತ್ತು ಮಹಾರಾಷ್ಟ್ರದ ಹೆಮ್ಮೆಯ ಬೆಸುಗೆಯೂ ಹೌದು. ಸಂಭಾಷಣ ತಂತ್ರ ಇವರ ವೈಶಿಷ್ಟ್ಯ. ವಿಸ್ಮಯವೆಂದರೆ ಈ ಮಹಾಕಾವ್ಯ ರಚನೆಯಾದದ್ದು ಮಹಾರಾಷ್ಟ್ರ ನೆಲದ ಪುಣೆಯಲ್ಲಿ. ಪುಣೆಯ ಆಗಣ ಸಂಸ್ಕೃತ ಪಂಡಿತರ ಪಂಥಾಹ್ವಾನಕ್ಕೆ ಉತ್ತರವಾಗಿ ವಾದಿರಾಜರು ಈ ಮಹಾಕೃತಿಯನ್ನು ರಚಿಸಿದರಂತೆ.

**ವಾದಿರಾಜರ ಇನ್ನೊಂದು ಅಪೂರ್ವ ಕೊಡುಗೆ**

ತೀರ್ಥಪ್ರಬಂಧ. ಭಾರತದ ಎಲ್ಲ ತೀರ್ಥಕ್ಷೇತ್ರಗಳನ್ನು ಸಂಚರಿಸಿ, ತೀರ್ಥಕ್ಷೇತ್ರಗಳ ಮಹಿಮೆಯನ್ನು ಪೌರಾಣಿಕ-ಐತಿಹಾಸಿಕ ಹಿನ್ನೆಲೆಗಳನ್ನು ಸಂಚಾರ ಕಾಲದಲ್ಲಿ ತನ್ನ ಅನುಭವಗಳನ್ನು ದಾಖಲಿಸಿದ ಅಪೂರ್ವ ಪ್ರವಾಸ ಲೇಖನ; ಪದ್ಯ ರೂಪದಲ್ಲಿ ಕಾವ್ಯಮಯವಾಗಿ ರೂಪುಗೊಂಡ ಪುಟ್ಟ; ಸುಂದರ ಪ್ರವಾಸ ಸಾಹಿತ್ಯ.

ಅವರ 'ಯುಕ್ತಿ ಮಲ್ಲಿಕೆ' ಯಂತು ಮಾಧ್ವ ವಾಙ್ಮಯ ದಲ್ಲೊಂದು ಮೇರುಕೃತಿ. ಎಲ್ಲ ಶಾಸ್ತ್ರ ಪ್ರಮೇಯಗಳನ್ನು ಏಕತ್ರ ಪೋಣಿಸಿ, ಪಂಡಿತರೂ ಪಾಮರರೂ ಜತೆಯಾಗಿ ತಲೆದೂಗುವಂತೆ ರೂಪುಗೊಂಡ ಈ ಮಹಾನ್ ಕೃತಿ.

ತಾಯಿ ಹರಕೆಯಾದ 'ಲಕ್ಷಾಲಂಕಾರ' ಸೇವೆ ಪರ ಮಾತ್ಮನಿಗೆ ಸಮರ್ಪಣೆ ಮಾಡುವುದನ್ನು ಶ್ರೀಮನ್ಮಹಾಭಾರತ ದಲ್ಲಿನ ಒಂದು ಲಕ್ಷ ಕಠಿಣ ಶಬ್ದಗಳಿಗೆ ಬದರಿ ಕ್ಷೇತ್ರದಲ್ಲಿ ವಿವರಣೆಯನ್ನು ಬರೆದು ಆ ಮೂಲಕ ಹರಕೆ ಸಲ್ಲಿಸಿರುತ್ತಾರೆ. ನೇಪಾಳದ ಗಂಡಕಿ ನದಿಯಲ್ಲಿನ ಸಾಲಿಗ್ರಾಮಗಳನ್ನು ತಿರುಪತಿ ಕ್ಷೇತ್ರವನ್ನು ಮಂಡಿಯೂರಿ ಬೆಟ್ಟವನ್ನು ಹತ್ತಿ ಶ್ರೀನಿವಾಸನಿಗೆ ಸಮರ್ಪಿಸಿದ ಪರಮ ಭಾಗವತರಿವರು.

ವಾದಿರಾಜರು ಮಹಾನ್ ಕ್ರಾಂತಿಕಾರಿ ಯತಿಗಳು. ಅದ್ಭುತ ಸುಧಾರಣೆಗಳ ಹರಿಕಾರರು. ಅವರು ಉಡುಪಿಯಲ್ಲಿ, ಶ್ರೀ ಕೃಷ್ಣ ಮಂದಿರದಲ್ಲಿ ಬೆಳಗಿನಿಂದ ಸಂಜೆಯ ತನಕ ಬೇರೆ ಬೇರೆ ಪೂಜಾಕಾಲದಲ್ಲಿ ಸಂಸ್ಕೃತದ ಮಂತ್ರಗಳ ಜೊತೆ ಕನ್ನಡದ ಹಾಡುಗಳನ್ನು ಹಾಡುವ ಪದ್ಧತಿಯನ್ನು ಬಳಕೆಗೆ ತಂದರು.

ಅವರ ನಿರ್ಲಿಪ್ತತೆಯೂ ಅನನ್ಯವಾದುದು. ಉಡುಪಿಯ ಕೃಷ್ಣನ ಗುಡಿಯ ಮಾಡಿಗೆ ಚಿನ್ನದ ಹೊದಿಕೆ ಹೊದೆಸಲೆಂದು ಉತ್ತರದ ಮುಸ್ಲಿಂ ದೊರೆಯೊಬ್ಬ, ಅವರಿಗೆ ಚಿನ್ನದ ರಾಶಿಯನ್ನು ಅರ್ಪಿಸಿದರೆ ಅವರು ಅದನ್ನು ಬಳಸಲೇ ಇಲ್ಲ. ಏಕೆ ಮಾಡಿಗೆ ಚಿನ್ನ ಹೊದೆಸಬೇಕು? ಆಗ ಜನದ ಕಣ್ಣು ದೇವರ ಬದಲು ಮಾಡಿನತ್ತ ಹರಿಯುತ್ತದೆ. ದೇವರಿಗಿಂತ ಮಾಡು ಹೆಚ್ಚು ಇಷ್ಟವಾಗುತ್ತದೆ. ಹೀಗೆ ನಿರ್ಧರಿಸಿದ ವಾದಿ ರಾಜರು ಆ ಬಂಗಾರವನ್ನೆಲ್ಲ ಭೂಗತ ಮಾಡಿದರು. ಅದರ ಮೇಲೆ ನಾಗನನ್ನು ಸ್ಥಾಪಿಸಿದರು.

ಹೀಗೆ ಹರಿಯ ಪಕ್ಕದಲ್ಲಿ ಹರಿಯ ಹಾಸುಗೆಯಾದ ಶೇಷನೂ ಬಂದ. ರಾಮಾವತಾರದಲ್ಲಿ ಈ ಶೇಷನೇ ತಮ್ಮ ಲಕ್ಷ್ಮಣ; ಕೃಷ್ಣಾವತಾರದಲ್ಲಿ ಅವನೇ ಅಣ್ಣ ಬಲರಾಮ.ನರ-ನಾರಾಯಣವಾತಾರದಲ್ಲಿ ಅವನೇ ನರ.ನಾಗನ ಗುಡಿಗೆ ಹೀಗೊಂದು ಹೊಸ ಆಯಾಮ ಕೊಟ್ಟವರು ವಾದಿರಾಜರು.

ವಾದಿರಾಜರ ನಿರ್ಲಿಪ್ತತೆಗೆ ಇನ್ನೊಂದು ಮಹತ್ವದ ನಿದರ್ಶನ; ಅವರು ತಮ್ಮ ಹೆಸರಿನ ಜತೆಗೆ ಸಹಜವಾಗಿ ಸೇರಿ ಕೊಂಡಿರುವ ತೀರ್ಥ ಪದವನ್ನು ಎಂದೂ ಬಳಸು ವುದಿಲ್ಲ.'ತೀರ್ಥ'ಹಬ್ಬ ಪೀಠಾಧಿಪತ್ಯದ ಅಧಿಕಾರದ ಸಂಕೇತ. ಆಶ್ರಮ ಆದಾಗ ಬರಿಯ 'ವಾದಿರಾಜ' ವೇದಾಂತ ಸಾಮ್ರಾಜ್ಯದಲ್ಲಿ ಪಟ್ಟಾಭಿಷೇಕ ಆದಾಗ 'ವಾದಿರಾಜ ತೀರ್ಥ' ಹೀಗೆ ಪೀಠಾಧಿಪತ್ಯದ ಸಂಕೇತವಾದ 'ತೀರ್ಥ' ಶಬ್ದವನ್ನು ವಾದಿರಾಜರು ಇಷ್ಟಪಡಲಿಲ್ಲ.

ಆಚಾರ್ಯ ಮಧ್ವರು ರಚಿಸಿದ 'ಮಹಾಭಾರತ' ತಾತ್ಪರ್ಯ ನಿರ್ಣಯಕ್ಕೆ ವಾದಿರಾಜರು ಬರೆದ 'ಭಾವ ಪ್ರಕಾಶಿಕ' ಟೀಕೆಯ ಮಂಗಲಾಚರಣೆಯಲ್ಲಿ ಬಂದ ಈ ಶ್ಲೋಕದ ಭಾವ ಹೀಗಿದೆ. 'ಆಚಾರ್ಯ ಮಧ್ವರೇ ನಿಜವಾದ ವಾದಿ. ಅವರೇ ನನಗೆ ರಾಜ.ಆದ್ದರಿಂದ ನಾನು ವಾದಿರಾಜ. ಈ ಟೀಕೆಯೂ ಅವರ ಕರುಣೆಯ ಕೊಡುಗೆ; ನನ್ನ ಸ್ವಂತ ಶಕ್ತಿಯಲ್ಲ. ಅವರು ನುಡಿಸಿದಂತೆ ನುಡಿಯುವ ವೀಣೆ ನಾನು.

ವಿದ್ಯೆ - ವಿನಯಗಳ ಅಪೂರ್ವ ಸಂಗಮದ ಅನನ್ಯ ನಿದರ್ಶನ. ತೀರ್ಥ ಶಬ್ದವನ್ನು ಬಳಸದೇ ನಿರ್ಲಿಪ್ತತೆಯನ್ನು ಮೆರೆದ ವಾದಿರಾಜರ ಈ ಆದರ್ಶವನ್ನು ಮುಂದುವರೆಸಿದ ಮತ್ತೊಬ್ಬ ಯತಿಯೆಂದರೆ ಮಂತ್ರಾಲಯದ ರಾಘವೇಂದ್ರರು.

ಈಗ ನಾಡಿನ ಹಿರಿಯ ಹಬ್ಬ ಎಂಬಂತೆ ಜನಪ್ರಿಯ ವಾಗಿರುವ 'ಪರ್ಯಾಯ' ಉತ್ಸವದ ಮೂಲ ಕಲ್ಪನೆ ವಾದಿರಾಜರದು. ಪರ್ಯಾಯದ ಮೆರವಣಿಗೆ ದರ್ಬಾರಿನ ಸಭೆ, ಸಭೆಯಲ್ಲಿ ಯತಿಗಳು ಕೂಡಲು ಅರಳಿನ ಗದ್ದಿಗೆಯ ಸಿಂಹಾಸನ. ಎಲ್ಲವೂ ವಾದಿರಾಜರ ಕನಸಿನ ಕೂಸು.



ಉಡುಪಿಗೂ ಧರ್ಮಸ್ಥಳಕ್ಕೂ ನಿಕಟ ಬಾಂಧವ್ಯವನ್ನು ಬೆಸೆದವರೂ ವಾದಿರಾಜರೇ. ಆಗ ಧರ್ಮಸ್ಥಳದ ಹೆಸರು 'ಕುಡುಮ'. ಅಲ್ಲಿ ಜೀರ್ಣವಾಗಿದ್ದ ಶಿವಾಲಯವನ್ನು ಪುನಃ ಸ್ಥಾಪಿಸಿ ಶಿವಲಿಂಗದ ಮೇಲೆ ನೃಸಿಂಹಸಾಲಿಗ್ರಾಮ ಇಟ್ಟು ವೈಷ್ಣವ ಪೂಜಾಧಿಕಾರ; ಜೈನರಿಗೆ ಆಡಳಿತಾಧಿಕಾರ ನೀಡಿದ ಮಹಾಮಹಿಮರು. ಈ ಒಂದು ಸೌಹಾರ್ದದ ಪರಂಪರೆ ಇಂದಿಗೂ ಬೆಳೆದು ಬಂದಿದೆ. ಉಡುಪಿಯ ಶ್ರೀಪಾದರು ಪರ್ಯಾಯದ ಮುನ್ನ ಧರ್ಮಸ್ಥಳಕ್ಕೆ ಭೇಟಿ ನೀಡಿ, ಮಂಜು ನಾಥನ ದರ್ಶನ ಪಡೆದು ಬರುತ್ತಾರೆ. ಹೆಗ್ಗಡೆಯವರು ಉಡುಪಿಗೆ ಬಂದು ಪರ್ಯಾಯ ಸಭೆಯಲ್ಲಿ ಭಾಗ ವಹಿಸುತ್ತಾರೆ.

ವಾದಿರಾಜರ ಬಗೆಗಿರುವ ಪರಂಪರಾಗತ ಅಭಿ ಪ್ರಾಯಗಳನ್ನು ಅವಲೋಕಿಸಿದಾಗ ಅವರು ಮತೀಯ ವಿಷಯಗಳಲ್ಲಿ ಉದಾರಿಗಳು ಎಂಬ ಅಂಶ ಗಮನಕ್ಕೆ ಬರು ತ್ತದೆ.ದಕ್ಷಿಣ ಕನ್ನಡ ಜಿಲ್ಲೆಯ ಕೋಟೇಶ್ವರದ ಬ್ರಾಹ್ಮಣರು, ಮಟ್ಟಿಯ ಬ್ರಾಹ್ಮಣರು, ಚಿನೀವಾರರೇ ಮೊದಲಾದವರಿಗೆ ಮುದ್ರಾಧಾರಣೆ ಮಾಡಿ ತಮ್ಮ ಶಿಷ್ಯರನ್ನಾಗಿ ಸ್ವೀಕರಿಸಿ, ಆ ಮೂಲಕ ಮಠದ ಶಿಷ್ಯ ಸಂಪತ್ತನ್ನು ಬೆಳೆಸುವುದರೊಂದಿಗೆ ತಮ್ಮ ಹೃದಯ ವೈಶಾಲ್ಯವನ್ನು ಮೆರೆದಿರುವರು. ಶಾಪಗ್ರಸ್ತ ಬ್ರಾಹ್ಮಣನ, ಬ್ರಹ್ಮರಾಕ್ಷಸನ ಜನ್ಮವನ್ನು ಪರಿಹರಿಸಿ, ಅವರನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಭೂತರಾಜರೆಂಬ ಹೆಸರಿನಿಂದ ಅವರಿಂದ ಅದ್ಭುತ ಕಾರ್ಯವನ್ನು ಮಾಡಿಸಿ ದರು.

### ದಾರ್ಶನಿಕ ಧೃವತಾರೆ

'ಮೊದಲು ತೋರುತ್ತದೆ ಮಧುರ ವಿಷಯ ಸುಖ। ಕಡೆ ಯಲಿ ದುಃಖ ಅನೇಕ' ಇದು ಅವರು ಕಂಡ ಜೀವನಾನುಭವ; ಸಂಸಾರದ ಸವಿ.'ತಾಳುವಿಕೆತಗಿಂತ ತಪವು ಇಲ್ಲ', ಎಂಬುದು ವಾದಿರಾಜರ ಸಾರ್ವತ್ರಿಕ ಸಂದೇಶ. ಇದರ ವಾಙ್ಮಯ ನಿಧಿ ಬಹುಮುಖ ಪ್ರತಿಭೆಯ ಒಂದು ವಿಶಿಷ್ಟ ಪ್ರತಿಮೆ ಇದ್ದಂತೆ.ಸಕಲಶಾಸ್ತ್ರಗಳಲ್ಲಿಯೂ ಸವ್ಯ ಸಾಚಿ ಯಾಗಿದ್ದು, 125 ಕ್ಕಿಂತಲೂ ಹೆಚ್ಚು ಕೃತಿಗಳನ್ನು ರಚಿಸಿ ದ್ದಾರೆಂದು ತಿಳಿದುಬರುತ್ತದೆ.

ಈ ಹಿರಿಮೆಯ ಮಹಿಮೆ ಎನ್ನುವಂತೆ ವಿಜಯ ನಗರದ ಅರಸರಿಂದ 'ಪ್ರಸಂಗಾಭರಣತೀರ್ಥ' ರೆನ್ನುವ ಸರ್ವಜ್ಞತ್ವ ಸಮ್ಮಾನಕ್ಕೆ ಪಾತ್ರರಾಗಿದ್ದಾರೆ. ವಾದಿರಾಜರು ಭಕ್ತಿ ಪಂಥ ಪ್ರಸಾರಕ್ಕಾಗಿ, ಆಚಾರ್ಯ ಮಧ್ವರ ಸಿದ್ಧಾಂತದ ತಿರು ಳನ್ನು ಜನಸಾಮಾನ್ಯರೂ ಮುಟ್ಟಿಸುವುದಕ್ಕಾಗಿ ನೂರಾರು ಕೀರ್ತನೆ, ಹಾಡುಗಬ್ಬಗಳನ್ನು ರಚಿಸಿರುತ್ತಾರೆ.

ಕನ್ನಡದಲ್ಲಿ ತತ್ವಸಾರದ ಸೊಬಗಿನ ಸೊನೆಯೆನಿಸಿದ 'ವೈಕುಂಠ ವರ್ಣನೆ' ಯಲ್ಲಿ ಪರಮಾತ್ಮನ ಜಗತ್ಸೃಷ್ಟ್ಯಾದಿ ಪುರಾಣೋಕ್ತ ಪ್ರಮೇಯವು ಹೃದಯಂಗಮವಾಗಿ ವರ್ಣಿತ ವಾಗಿದೆ. ಸ್ವಾಧಿಯ ಅರಸನ ಅಳಿಯನನ್ನು ಬದುಕಿಸಲು ಹಾಡಾಲದ ಕೃತಿ ಎಂದು ಹೇಳಲ್ಪಡುವ 'ಶ್ರೀ ಲಕ್ಷ್ಮೀ ಶೋಭಾನೆ'ಯು ರಮಾನಾರಾಯಣರ ಸ್ವಯಂವರ ಕಥಾ ನಿರೂಪಣಾತ್ಮಕವಾಗಿದೆ. ಸಕಲ ಸುಮಂಗಲೆಯರ ನಾಲಿಗೆಯ ಮೇಲೆ ನಲಿದಾಡುವ ಈ ಕೃತಿಯು ಮುತ್ತೈದೆ ಯರ ಉಪನಿಷತ್ತು ಎಂದೇ ಖ್ಯಾತವಾಗಿದೆ. 'ಗುಂಡಕ್ರಿಯೆ' ಎಂತೂ ಕನ್ನಡ ಭಾಷೆಯಲ್ಲಿನ ಒಂದು ವಾದಗ್ರಂಥ ವೆಂದರೂ ತಪ್ಪಾಗಲಾರದು.

ಅಶ್ವಧಾಟಿ (ಕುದುರೆಯ ಓಟದ ರೀತಿ) ಯಲ್ಲಿರುವ ಅವರ ದಶಾವತಾರ ಸ್ತುತಿಯನ್ನು ಅನೇಕರು ರಾತ್ರಿ ದೇವರ ಪೂಜೆ ವೇಳೆಯಲ್ಲಿ ಸುಶ್ರಾವ್ಯವಾಗಿ ಹಾಡಿಕೊಳ್ಳುವ ಪದ್ಧತಿ

ಇದೆ. ಚಿಕ್ಕದಾದರೂ ಅವರ ನವಗ್ರಹ ಸ್ತೋತ್ರ ಪ್ರಭಾವಶಾಲಿ ಯಾಗಿದೆ.

ಹೀಗೆ ನಾನಾ ರೀತಿಯಲ್ಲಿ ಜನಸಾಮಾನ್ಯರಿಗೆ ನೀತಿ ಸಾರಿದ ವಾದಿರಾಜರ ಕೃತಿಗಳು ಪಾಮರರ ಪಾಲಿನ ಪಂಚಾಮೃತವಾಗಿದೆ. ಭುವನದ ಭಾಗ್ಯವಾಗಿದೆ, ಬಾಳಿನ ಬೆಳಕಾಗಿದೆ.

ಹರಿದಾಸ ಸಾಹಿತ್ಯದ ಬಾನಿನಲ್ಲಿ ಪ್ರಖರ ತೇಜಸ್ಸಿನ ಉಜ್ವಲ ನಕ್ಷತ್ರ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಸ್ತೋತ್ರ ಕೃತಿಗಳನ್ನು ಬರೆದಿರುವ ವೈಷ್ಣವ ಗ್ರಂಥಕಾರರೆಂಬುದು ಇವರ ಮತ್ತೊಂದು ಪ್ರಶಸ್ತಿ .

ಹಯಗ್ರೀವ ವಾದಿರಾಜರ ಇಷ್ಟದೈವ. ಮಠದ ಪರಂಪರೆಯಿಂದ ಬಂದ ಶ್ರೀ ಭೂವರಾಹದೇವರೊಂದಿಗೆ ಹಯಗ್ರೀವಮೂರ್ತಿಯನ್ನು ಪೂಜಿಸುತ್ತಿದ್ದರು. ಪ್ರತಿದಿನವೂ ಈ ದೇವರಿಗೆ 'ಮಡ್ಡಿ' ನೈವೇದ್ಯವನ್ನು ಸಮರ್ಪಿಸಿ ಆತನು ತಿಂದು ಬಿಟ್ಟುದ್ದನ್ನು ಪ್ರಸಾದವೆಂದು ಸ್ವೀಕರಿಸುತ್ತಿದ್ದರಂತೆ. ವಾದಿರಾಜರ ಅಶ್ವಧಾಟಿಯ ದಶಾವತಾರ ಸ್ತುತಿಯನ್ನು 'ಕುದುರೆ ಬಂದಿದೆ ಚೆಲ್ವ ಕುದುರೆ ಬಂದಿದೆ. ಅವ ಕಡೆಯಿಂದ ಬಂದೆ ವಾಜಿವದನನೆ! ಮೊದಲಾದ ಕೀರ್ತನೆಗಳನ್ನು ಅಭ್ಯಸಿಸಿದರೆ, ವಾದಿರಾಜರ ಹಯಗ್ರೀವ ಮೂರ್ತಿಯ ಪ್ರತ್ಯಕ್ಷ ದರ್ಶನವನ್ನು ಪಡೆಯಬಹುದು. ಅವರು 'ಹಯವದನ' ಎಂಬ ಅಂಕಿತದಿಂದಲೇ ಕನ್ನಡದಲ್ಲಿ ದೇವರ ಸ್ತುತಿ ಪದ್ಯಗಳನ್ನು ನೂರಾರು ಸಂಖ್ಯೆಯಲ್ಲಿ ರಚಿಸಿದ್ದಾರೆ.

ಇಂದಿಗೂ 'ಶ್ರೀ ಶ್ರೀಶಗುಣದರ್ಪಣ' ಕೃತಿಯನ್ನು ಪಠಿಸಿದವರ ದಾರಿದ್ರ್ಯ ಪರಿಹಾರವಾಗುವುದು. ಹರಿದಾಸ ಸಾಹಿತ್ಯದಲ್ಲಿ ಶ್ರೀ ಪಾದರಾಜರ ಪ್ರಸನ್ನತೆ, ಪುರಂದರದಾಸರ ಪ್ರಸಾದಯೋಗ, ವ್ಯಾಸರಾಯರ ಸಂಘಟನಾತ್ಮಕ ಮನೋಧರ್ಮ, ಕನಕದಾಸರ ತೀಕ್ಷ್ಣ ವಿಡಂಬನ - ಕವಿಗಳು ಎಂಬ ಹೆಗ್ಗಳಿಕೆ, ವಿಜಯದಾಸರ ವಿಚಾರಸರಣಿ ಹೀಗೆ ಒಂದೊಂದು ಗುಣ ವಿಶೇಷಗಳನ್ನು ಟಂಕಿಸುವಲ್ಲಿ ಶ್ರೀ ವಾದಿರಾಜರದ್ದು ವಾಗ್ವಿಲಾಸಗುಣ.

ಯತ್ಯಾಶ್ರಮದ ಪ್ರಕಾರ ಅಧ್ಯಯನ ಪೂರೈಸಿದ ನಂತರ ಶ್ರೀ ಪಾದರು, ತೀರ್ಥಕ್ಷೇತ್ರ ಪರ್ಯಟನೆಗೆ ಮೊದಲು ತಾಯಿಯನ್ನು ಕಂಡು ಆಕೆಯ ಆಶೀರ್ವಾದ ಪಡೆಯಲ ಪೇಕ್ಷಿಸಿದರು. 'ಮಾತೃದೇವೋಭವ' ಎಂದು ಶೃತಿಗಳು ಸಾರುತ್ತದೆ. ತಾಯಿಯಾದರೋ ಮಗನನ್ನು ದೀರ್ಘಕಾಲ ಹೇಗೆ ಆಗಲಿರುವುದು ಎಂಬುದಾಗಿ ತನ್ನ ದುಃಖ ತೋಡಿಕೊಂಡಳು. ವಾದಿರಾಜರು ತಮ್ಮದೊಂದು ಕಂಚಿನ ವಿಗ್ರಹ ಮಾಡಿಸಿ ಅಮ್ಮನಿಗೆ ಕೊಟ್ಟು ಯಾತ್ರೆಗೆ ಹೊರಟರು! ಈಗಲೂ ಆ ಪ್ರತಿಮೆ ಇದೆ. ಅಲ್ಲಿ ಇರುವ ಯೋಗದಂಡ, ಅಲ್ಲಿರುವ ಹಾವಿನ ಚಿತ್ರ, ಮುಂದೆ ಅವರು ಒಂದು ಹಾವು - ಇಲಿಯ ಜಗಳ ಬಿಡಿಸಿ, ಹಾವಿಗೆ ತಮ್ಮ ಯೋಗದಂಡದಲ್ಲಿ ಆಸರೆ ಯಿತ್ತಿದ್ದರ ದ್ಯೋತಕ!

ಹೀಗೆ ಗ್ರಂಥ ರಚನೆ, ಭಗವದ್ಭಜನೆ, ಸದಾಚಾರ ಪಾಲನೆ ಮೊದಲಾದ ವಿವಿಧ ರೂಪದಲ್ಲಿ ಮಧ್ವಮತ ಪ್ರಚಾರಕ್ಕಾಗಿ ದುಡಿದು, ಶಿರಸಿ ತಾಲ್ಲೂಕು ಸೋದೆ ಸಮೀಪದ ಶಾಲ್ಮಲಾ ನದಿತೀರದಲ್ಲಿ ಬಹುಕಾಲ ತಪೋವನದಲ್ಲಿದ್ದು ಅರಸಪ್ಪ ನಾಯಕನ ಅಪೇಕ್ಷೆಯಂತೆ ಬದರಿಯಿಂದ ಶ್ರೀ ತ್ರಿವಿಕ್ರಮ ದೇವರನ್ನು ತರಿಸಿ ಅಲ್ಲಿ ಪ್ರತಿಷ್ಠಾಪಿಸಿ, ಕ್ರಿ.ಶ. 1600 ರಲ್ಲಿ ಸಶರೀರ ಬೃಂದಾವನ ಪ್ರವೇಶ ಮಾಡಿದರೂ, ಆರ್ತರ ಸಂಕಷ್ಟವನ್ನು ವಾತ್ಸಲ್ಯದಿಂದ ಪರಿಹರಿಸುವ ಇವರು ಇನ್ನು ಆಶ್ರಯದಾಯಕರಾಗಿದ್ದಾರೆ ಎನ್ನಲು ಸೋದೆಯಲ್ಲಿ ಅವರ ಬೃಂದಾವನದ ಬಳಿ ಎಡೆಬಿಡದೆ ನೆರೆದಿರುವ ಭಕ್ತ ಸಮೂಹವೇ ಸಾಕ್ಷಿಯಾಗಿದೆ.

ಇಂದಿಗೂ ಗುರುರಾಜರ ಮಹಿಮೆ ವೈಭವೋಪೇತವಾಗಿ ವಿಜೃಂಭಿಸುತ್ತಾ ಭಕ್ತವೃಂದದ ಕಲ್ಪವೃಕ್ಷ ಎನಿಸಿದ್ದಾರೆ. ವಾದಿರಾಜರ ಪಾದೋದಕ, ಬೃಂದಾವನಸ್ಥ ಮೃತ್ತಿಕಾ ಸೇವನೆಗಳಿಂದ ವ್ಯಾಧಿಗಳು ಪರಿಹಾರವಾಗುತ್ತದೆ. ವಾದಿರಾಜರ ಕವಚ ಮೊದಲಾದ ಸ್ತೋತ್ರಗಳನ್ನು ಪಠಿಸಿದರೆ ವಿದ್ಯೆ, ಬುದ್ಧಿ, ಕೀರ್ತಿ ಹೀಗೆ ತಮತಮಗೆ ಬೇಕಾದ ಇಷ್ಟಾರ್ಥಗಳನ್ನು ಭಕ್ತರು ಪಡೆಯುತ್ತಿದ್ದಾರೆ. ಸಂಗ್ರಹವಾಗಿ ಹೇಳುವುದಾದರೆ ವಾದಿರಾಜರ ವೈಭವಗತಕಾಲದ ವೈಭವವಲ್ಲ, ಅದು ಸರ್ವ ಕಾಲಿಕ ಸರ್ವೋನ್ನತ.

ವಾದಿರಾಜರು ವಾದದಲ್ಲಿ ತರ್ಕದಲ್ಲಿ ಅಪರಿಮಿತವಾದ ಪಾಂಡಿತ್ಯವನ್ನು ಹೊಂದಿದ್ದ ಅಗ್ರಗಣ್ಯರು. ಅಷ್ಟೇ ಅಲ್ಲದೆ ವಾದಿ ರಾಜ ಗುರುಗಳು ಸಂಗೀತದ ಭಂಡಾರವೇ ಆಗಿದ್ದಾರೆ. ಅವರು ಹಾಡುವ ಒಂದೊಂದು ಸ್ವರದಲ್ಲೂ ದೈವಿಕತೆ, ಒಂದೊಂದು ಸ್ವರದಲ್ಲೂ ಸುನಾದದ ಪರಾಕಾಷ್ಠತೆ ಸೋದಾ ಕ್ಷೇತ್ರ, ಒಂದು ಪರಿಸರ ಸಂಪದ್ಭರಿತವಾದ ಸುಂದರ ತಾಣ ಗುರುಗಳ ತಪಸ್ಸಿನ ಮಹಿಮೆ ಇಂದಿಗೂ ಈ ತಾಣದಲ್ಲಿ ಕಂಡು ಬರುತ್ತದೆ.ಸಂಗೀತ ಸಾಧಕರಿಗೆ,ಚಿಂತಕರಿಗಂತೂ ಇದೊಂದು ಸಾಧನೆಯ ಕುಟೀರ.

## ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಶ್ರೀ ವೇಂಕಟೇಶ್ವರ ಅನ್ನದಾನ ಟ್ರಸ್ಟ್



ತಿರುಮಲೆ, ತಿರುಚಾನೂರಿನಲ್ಲಿ ಸಾವಿರಾರು ಭಕ್ತರಿಗೆ ನಿತ್ಯವೂ ಅನ್ನ ಪ್ರಸಾದ ವಿತರಣೆಯ ವಿಷಯವು ಭಕ್ತರಿಗೆ ತಿಳಿದಿದೆ! ಈಗ ತಿ.ತಿ.ದೇ. ಅನ್ನಪ್ರಸಾದ ಟ್ರಸ್ಟ್‌ಗೆ ಭಕ್ತರು, ದಾತರು ವಿರಾಳವನ್ನು ನೀಡಲು ಅವಕಾಶವನ್ನು ತಿ.ತಿ.ದೇ. ಕಲ್ಪಿಸುತ್ತಿದೆ. ಅದಕ್ಕೆ

**ಒಂದು ದಿನದ ವಿರಾಳ ಪಥಕ ಪ್ರವೇಶಿಸಲಾಗಿದೆ.**

ಅದು ಹೇಗೆಂದರೆ, ಒಂದು ದಿನಕ್ಕೆ ಆಗುವ ಖರ್ಚು

| | | | |
|---|---|---|---|
| 1) | ಅಲ್ಪಾಹಾರ | - | 6 ಲಕ್ಷಗಳು |
| 2) | ಮಧ್ಯಾಹ್ನ ಭೋಜನ | - | 10 ಲಕ್ಷಗಳು |
| 3) | ರಾತ್ರಿ ಭೋಜನ | - | 10 ಲಕ್ಷಗಳು |
| | ಮೊತ್ತ | - | 26 ಲಕ್ಷಗಳು |





ಈ ಮೊತ್ತವನ್ನು ದಾತರಿಂದ ಸಂಗ್ರಹಿಸಲು ಸಿದ್ಧವಾಗುತ್ತಿದೆ ತಿರುಮಲೆ ತಿರುಪತಿ ದೇವಸ್ಥಾನಗಳ ಅನ್ನಪ್ರಸಾದ ಟ್ರಸ್ಟ್.

ದಾತರು - ವ್ಯಕ್ತಿಗಳು / ಕಂಪನಿಗಳು/ ಸಂಸ್ಥೆಗಳು/ ಟ್ರಸ್ಟ್‌ಗಳು/ ಸಂಯುಕ್ತ ವಾಗಿಯೂ ಸಹ ಇರಬಹುದು.



ನೀವುಗಳು ಒಂದು ದಿನದ ಮೊತ್ತ ರೂ. 26 ಲಕ್ಷಗಳಾಗಲಿ / ಅಲ್ಪಾಹಾರ- 6 ಲಕ್ಷಗಳಾಗಲಿ /ಮಧ್ಯಾಹ್ನ ಭೋಜನ - 10 ಲಕ್ಷಗಳಾಗಲಿ/ ರಾತ್ರಿ ಭೋಜನ- 10 ಲಕ್ಷಗಳಾಗಲಿ ನೀಡಬಹುದು.



ದಾತರಿಗೆ ತಿ.ತಿ.ದೇ. ದೇವಸ್ಥಾನಗಳು ಕಲ್ಪಿಸುವ ಸೌಕರ್ಯಗಳು ಒಂದೇ ಮಾದರಿಯಲ್ಲಿ ಇರುತ್ತದೆ.

**ಮತ್ತಷ್ಟು ವಿವರಗಳಿಗೆ ಸಂಪ್ರದಿಸಿ :-**




ಸ್ಪೆಷಲ್ ಆಫೀಸರ್, ಶ್ರೀ ವೇಂಕಟೇಶ್ವರ ಅನ್ನಪ್ರಸಾದ ಟ್ರಸ್ಟ್,

ತಿ.ತಿ.ದೇ, ಆಡಳಿತ ಭವನ, ಕೆ.ಟಿ. ರೋಡ್, ತಿರುಪತಿ.

ದೂರವಾಣಿ ಸಂಖ್ಯೆ 0877-2264258,2264375,2264237

( **www.tirumala.org** ಈ ವೆಬ್‌ಸೈಟ್‌ನಲ್ಲಿ ಕೂಡ ವಿವರಗಳನ್ನು ಪಡೆಯಬಹುದು)





# ತಿರುಪತಿ ಶ್ರೀ ವೆಂಕಟೇಶ್ವರಸ್ವಾಮಿ

- ಡಾ|| ಬಿ. ಎನ್. ಶ್ರೀನಿವಾಸನ್

**(ಮುಂದುವರಿಯುವುದು)**

ತಿರುಮಲೆ ತಿರುಪತಿ ದೇವಸ್ಥಾನಗಳ ಸಂಗ್ರಹದ ಶಾಸನಗಳಲ್ಲಿ ಅತಿ ಪ್ರಾಚೀನವಾದ ಶಾಸನಗಳೆಂದರೆ ಶಾಸನ ಸಂಪುಟಗಳ ಮೊದಲನೆಯದರಲ್ಲಿ ಪ್ರಕಟವಾಗಿರುವ 8,9 ನೆಯ ಶಾಸನಗಳು.ಇವೆರಡೂ ಕ್ರಿ.ಶ. 600 ರಿಂದ ಕ್ರಿ.ಶ. 630 ರ ವರೆಗೆ ಆಳಿದ ಪಲ್ಲವ ಸಾಮ್ರಾಟನೂ, ವಾಸ್ತುಶಿಲ್ಪ ಶಾಸ್ತ್ರ ವಿಶಾರದನೂ ಆಗಿದ್ದ ಒಂದನೇ ಮಹೇಂದ್ರವರ್ಮ ಪಲ್ಲವನ ಆಡಳಿತದ ಹದಿನಾಲ್ಕನೆಯ ವರ್ಷದಲ್ಲಿ ಎಂದರೆ ಕ್ರಿ.ಶ. 614 ರಲ್ಲಿ ಹೊರಬಿದ್ದ ಶಾಸನಗಳು, ಪಲ್ಲವ ಪೆರ್ಗಡೆಯ ಮಗಳು ಕಾಡವನ ಮಹಾರಾಣಿ ಸಾಮವೈಯು ವೆಂಕಟೇಶ್ವರ ಸ್ವಾಮಿಯ ಪ್ರತಿರೂಪದ ಒಂದು ಬೆಳ್ಳಿಯ ಮೂರ್ತಿಯನ್ನು ಮಾಡಿಸಿ ಅದನ್ನು ಸಾಲಂಕೃತವಾಗಿ ಆಲಯದಲ್ಲಿ ಪ್ರತಿಷ್ಠಾಪಿಸಿ,ಅದರ ಮುಂದೆ ನಂದಾದೀಪವನ್ನಿಡಲೆಂದೂ ನಿವೇದನೆಗಳನ್ನು, ನಡೆಸಲೆಂದೂ ಶಾಶ್ವತವಾದ ನಿಧಿಯನ್ನು ಒದಗಿಸಿದ್ದೇ ಅಲ್ಲದೆ ಸೌರಮಾನದ ಪುರಟ್ಟಾಸಿ, ಮಾರ್ಗಳಿ ತಿಂಗಳುಗಳಲ್ಲಿ ಈ ವಿಗ್ರಹಕ್ಕೆ ಉತ್ಸವವನ್ನು ಏರ್ಪಡಿಸಲೂ ಸಹದಾನಗಳನ್ನು ನೀಡಿದ ವಿಷಯ ಈ ಶಾಸನಗಳಲ್ಲಿ ದಾಖಲೆಯಾಗಿದೆ.

ಪಲ್ಲವ ರಾಜ ವಿಜಯದಂತಿ ವಿಕ್ರಮವರ್ಮನ ಆಡಳಿತದ ಐವತ್ತೊಂದನೆಯ ವರ್ಷದಲ್ಲಿ ಎಂದರೆ ಕ್ರಿ.ಶ. 830 ರಲ್ಲಿ ಆತನ ಕೈಕೆಳಗಿನ ಅಧಿಕಾರಿಯಾದ ಚೋಳ ನಾಡಿನ ಚೋಳನೂರು ಉಲಗಪ್ಪರುಮಾನಾರನು ತಿರುವಿಳಂಕೋಯಿಲು ಪೆರುಮಾನಡಿಗಳ (ಬಾಲಾಲಯದ ದೇವರ ಪಾದ ಸನ್ನಿಧಿಯಲ್ಲಿ )ಮುಂದೆ ಒಂದು ನಂದಾದೀಪವನ್ನು ಹಚ್ಚಲು ಏರ್ಪಾಡು ಮಾಡಿದುದನ್ನು ಒಂದನೇ ಸಂಪುಟದ ಒಂದನೇ ಶಾಸನದಲ್ಲಿ ಕಾಣಬಹುದು. (ಈ ವಿಗ್ರಹ ಪ್ರಾಯಶಃ ವೆಂಕಟೇಶ್ವರ ಆಲಯದಲ್ಲಿ ಹೊಸದಾಗಿ ಪ್ರತಿಷ್ಠಿತವಾಗಿರಬೇಕು.)

ವಿಜಯದಂತಿ ವಿಕ್ರಮವರ್ಮನ - ಪ್ರಾಯಶಃ ಪಶ್ಚಿಮ ಗಂಗ ಸಾಮಂತನಾದ ಸಿಯಗಂಗನು ಏರ್ಪಡಿಸಿದ ದೀಪದ ಬಗೆ ಎರಡನೆಯ ಶಾಸನವು ತಿಳಿಸುವುದು.

ಮೂರನೆಯ ಶಾಸನವು ವಿಜಯದಂತಿ ವಿಕ್ರಮ ವರ್ಮನ ಮತ್ತೊಬ್ಬ ಸಾಮಂತನಾದ ಬಾಣರ ರಾಜಪುತ್ರ ವಿಜಯಾದಿತ್ಯ ಮಹಾಬಲಿ ಬಾಣರಾಯನು ಹುಟ್ಟಿದ ಸಂಗತಿಯನ್ನು ತಿಳಿಸುತ್ತದೆ.4 ನೆಯ ಶಾಸನವು ಮೂರು ದೇವರಿಗೆ ಎರಡು ಹೊತ್ತು ಮಾಡಬೇಕಾದ ನಿವೇದನೆಗಳ ಏರ್ಪಾಡುಗಳನ್ನು ವಿವರಿಸುವುದು.ಈ ಮೂವರು ದೇವರುಗಳೆಂದರೆ 1) ತಿರುವಿಳಂಕೋಯಿಲು ದೇವರು, 2) ತಿರುಮಂತ್ರ ಸಾಲೈ ಪೆರುಮಾನಡಿಗಳ್, 3) ತಿರುವೆಂಕಟತ್ತು ಪೆರುಮಾನಗಳ್, ಎಂದರೆ - 1) ಒಂದನೇ ಶಾಸನದಲ್ಲಿ ಕಂಡು ಬರುವ ಹೊಸದಾಗಿ ಸ್ಥಾಪಿತವಾದ ವಿಗ್ರಹ, 2) ವಿಶೇಷ ಪೂಜೆಯ ಉತ್ಸವಗಳ ಆರಂಭದಲ್ಲಿ ಯಜ್ಞಯಾಗಾದಿಗಳ ಆರಂಭದಲ್ಲಿ ಮಂತ್ರಪುರಸ್ಸರವಾಗಿ, ವೈದಿಕ ಶ್ಲೋಕಗಳಿಂದ ಪೂಜೆಗೊಳ್ಳುವ ವಿಶೇಷವಾದ ವಿಗ್ರಹ. 3) ಮುಖ್ಯದೇವರು ಅಥವಾ ಮೂಲಮೂರ್ತಿಯಾದ ಶ್ರೀ ವೆಂಕಟೇಶ್ವರಸ್ವಾಮಿ. ಸ್ವಲ್ಪ ಚಿನ್ನದ ಕಳಂಜನ್ನು ಠೇವಣಿಯನ್ನಾಗಿಟ್ಟು, ಆದರಿಂದ ಸ್ವಲ್ಪ ಭೂಮಿಯನ್ನು ಕೊಂಡು ಕೊಂಡು,ಆ ಭೂಮಿಯಲ್ಲಿ ಬೆಳೆತೆಗೆಯಲು ಕೃಷಿಕರಿಗೆ ಒಪ್ಪಿಸಿದ್ದು, ಅವರಿಂದ ಆಲಯದ ಅಧಿಕಾರಿಗಳು ಭತ್ತವನ್ನು ಪಡೆದು ದೇವರಿಗೆ ನಿತ್ಯ. ನಿವೇದನೆ ಮಾಡಬೇಕೆಂದು ಆತನು ಕಟ್ಟಳೆ ಮಾಡಿದನು. ಎರಡು ನಿವೇದನೆಗಳಲ್ಲಿ ಒಂದು 'ನಂದಿ ಏರಿ ತಿರುವಮುದು' - ನಂದಿ ಕೆರೆ - ಎಂಬ ಕೆರೆಯ

ನೀರಿನಿಂದ ತೆಗೆದ ಬೆಳೆಯಿಂದ ನೀಡಿದ ನಿವೇದನೆಯಾಗಿದ್ದಿತು.

ಐದನೆಯ ಶಾಸನವು ಗಂಗೈ ಗಂಗನ್ ರಣಸಿಂಗನು (ಬಹುಶಃ ಪಶ್ಚಿಮ ಗಂಗ ರಾಜಕುಮಾರ) ತಾನು ಠೇವಣಿಯಾಗಿಟ್ಟ ಚಿನ್ನದ ಮೇಲಿನ ಬಡ್ಡಿಯಿಂದ ಪ್ರತಿದಿನವೂ ಸ್ವಾಮಿಗೆ ಆಹಾರ ನಿವೇದನೆಯನ್ನು ಮಾಡಬೇಕೆಂದು ತಿಳಿಸುತ್ತದೆ.

ಆರನೆಯ ಶಾಸನವು ಇಬ್ಬರು ಬ್ರಾಹ್ಮಣರಿಗೆ ಶಾಶ್ವತವಾಗಿ ಪ್ರತಿದಿನವೂ ಉಚಿತ ಭೋಜನ ನೀಡಬೇಕೆಂದು ಗುಣವಾನ್ ಅಪರಾಜಿತನೆಂಬ ಇರುಂ ಗೋಲಕನು (ಇರುಂಗೋಲರ ರಾಜ) ಸ್ವಲ್ಪ ತೂಕದ ಚಿನ್ನವನ್ನು ಠೇವಣಿಯಾಗಿಟ್ಟ ಸಂಗತಿಯನ್ನು ತಿಳಿಸುವುದು.

7 ನೇ ಶಾಸನವು ಕ್ರಿ.ಶ. 898 ರ ಹೊತ್ತಿಗೆ ಸೇರಿದ ಶಕ 820 ರಲ್ಲಿ ಹೊರಬಿದ್ದು ತ್ರುಟಿತ ಶಾಸನ, ಒಂದು ಗ್ರಾಮದ ವಾರ್ಷಿಕ ಆದಾಯವನ್ನು ತಿರುವಿಳಂಕೋಯಿಲಿಗೆಂದು ಬಳಸುವಂತೆ ಹೇಳುತ್ತದೆ. ಪಲ್ಲವರ ಕೈಯಿಂದ ರಾಜ್ಯ ಚೋಳರ ಕೈಸೇರುತ್ತಿದ್ದ ಸಂಧಿಕಾಲವಾದದ್ದರಿಂದ ಚೋಳ ರಾಜನಾಗಲೀ ಪಲ್ಲವರಾಜನಾಗಲೀ ಹೆಸರಿಸಲ್ಪಟ್ಟಿಲ್ಲ. ಕಾರಣ ಈ ಪ್ರಾಂತ್ಯದಲ್ಲಿ ಆ ಹೊತ್ತಿಗೆ ಯಾವ ಆಡಳಿತವೂ ಸ್ಥಾಪಿತವಾಗಿರಲಿಲ್ಲ. ಸ್ಥಳೀಯ ಅಧಿಕಾರಿ ಈ ಆಜ್ಞೆಯನ್ನು ನೀಡಿರುವ ಸಾಧ್ಯತೆಯಿದೆ.

ಹೀಗಾಗಿ 7ನೇ ಶತಮಾನದಿಂದ ಆರಂಭವಾಗುವ ಪಲ್ಲವರ ಪರಿಪಾಲನೆಯ ಚಾರಿತ್ರಿಕ ಕಾಲದಲ್ಲಿ ಸ್ಥಳೀಯ ಆಡಳಿತಗಾರರು.ರಾಜ ಪುತ್ರ ಸಂತತಿಯವರು, ಪಲ್ಲವ ಸಾಮಂತರು ವೆಂಕಟೇಶ್ವರ ಸ್ವಾಮಿಯ ಆಲಯಕ್ಕೆ ಗೌರವ ಸಲ್ಲಿಸುತ್ತ, ಹೊಸ ಪೂಜೆ ಉತ್ಸವಗಳಿಗೆಂದು ಹೊಸ ವಿಗ್ರಹಗಳನ್ನು ಮಾಡಿಸುತ್ತ, ದೀಪ ಧೂಪಗಳ ನಿತ್ಯ ನೈವೇದ್ಯಗಳ ಶಾಶ್ವತ ಸೇವೆಗಳಿಗೆಂದು ಚಿನ್ನವನ್ನು ನೀಡಿ, ಆ ಧನದಿಂದ ಬೇಸಾಯದ ಭೂಮಿಗಳನ್ನು ಕೊಂಡು ಕೊಂಡು ಅದರಿಂದ ಬರುವ ಬೆಲೆಯ ಧಾನ್ಯವನ್ನು, ಸ್ವಾಮಿಯ ಪೂಜೆ ಉತ್ಸವಗಳಲ್ಲಿ ವೆಚ್ಚ ಮಾಡಲು ಬಳಸುತ್ತ ಇದ್ದದ್ದನ್ನು ಕಾಣುತ್ತೇವೆ. ಈ ಪಲ್ಲವರ ಕಾಲದಲ್ಲಿ ವೆಂಕಟೇಶ್ವರ ಸ್ವಾಮಿಯನ್ನು ಹೋಲುವ ಮೂರು ಮೂರ್ತಿಗಳ ಪ್ರತಿಷ್ಠಾಪನೆ ಆಯಿತು.

ತರುವಾಯ ಬಂದ ಚೋಳರ ಕಾಲದಲ್ಲಿ ಎಂದರೆ ಹತ್ತನೆಯ ಶತಮಾನದಲ್ಲಿ ಒಂದನೇ ಪರಾಂತಕನು ಆಳುತ್ತಿದ್ದಾಗ ಆತನ ಆಳ್ವಿಕೆಯ 29 ನೇ ವರ್ಷದಲ್ಲಿ (ಕ್ರಿ.ಶ. 936) ಮಲೈನಾಡಿನ ಒಬ್ಬಾನೊಬ್ಬ ಕೊಡುಂಗೋಲೂರಾನ್ ಎಂಬಾತನು ಆಲಯದಲ್ಲಿ ಒಂದು ದೀಪವನ್ನು ಹಚ್ಚಿಡಲು 40 ಕಳಂಜು ಚಿನ್ನವನ್ನು ನೀಡಿದುದಾಗಿಯೂ, ಅದೇ ಚೋಳ ರಾಜನ ಆಡಳಿತದ 20 ನೇ ವರ್ಷದಲ್ಲಿ (ಕ್ರಿ.ಶ. 927) ಮತ್ತೊಂದು ದೀಪದ ಏರ್ಪಾಡನ್ನು ಬೇರೊಬ್ಬರು (ಹೆಸರು ತ್ರುಟಿತವಾಗಿದೆ) ಮಾಡಿದರೆಂದು 13 ನೇ ಶಾಸನವು ತಿಳಿಸುತ್ತದೆ.

ಪ್ರಖ್ಯಾತನಾದ ರಾಜರಾಜಚೋಳನ ತಂದೆಯಾದ ಎರಡನೇ ಪರಾಂತಕ ಸುಂದರ ಚೋಳನ ಪಟ್ಟ ಮಹಿಷಿಯು ತನ್ನ ಮಲಮಗ ಒಂದನೇ ರಾಜ ರಾಜ ಚೋಳನ ಆಡಳಿತದ ಹದಿನಾರನೆಯ (ಕ್ರಿ.ಶ. 1001) ವರ್ಷದಲ್ಲಿ (ಈಕೆ ಚೇರ ರಾಜನ ಪುತ್ರಿ) ತಿರುವೆಂಕಟದೇವರಿಗೆ 6 ಮಾಣಿಕ್ಯ, 4 ವಜ್ರ ಹಾಗೂ 28 ಮುತ್ತುಗಳಿಂದ ಕೂಡಿದ 56 ಕಳಂಜು ತೂಕ ಚಿನ್ನದ ಪರಿವಟ್ಟ (ಕಿರೀಟದ ಆರಂಭದಲ್ಲಿ ದೇವರ ಹಣೆಗೆ ಕಟ್ಟುವ ಪಟ್ಟಿಕೆ) ಮಾಡಿಸಿ ಕೊಟ್ಟಿದ್ದು ದಾಖಲೆಯಾಗಿದೆ. (ಅದೇ 14 )

ಹದಿನಾರನೆಯ ಶಾಸನ ತ್ರುಟಿತವಾದದ್ದು. 'ನಂದ', 'ಉಲಗಮ', 'ಮುಡೈಯಾನುಕ್ಕು', 'ಇರುಪತ್ತೊಂಬದು' ಮುಂತಾದ ಪದಗಳನ್ನು ಬಟ್ಟು ಕೊಡುತ್ತದೆಯಾಗಿ ರಾಜರಾಜ ಚೋಳನ ರಾಣಿ ಉಲಗ ಮಾದೇವಿಯು ತಿರುವೆಂಕಟ ಮುಡೈಯಾನನ. ಮುಂದೆ ದೀಪ ಹಚ್ಚಿಡಲೆಂದು ತುಪ್ಪಕ್ಕಾಗಿ 29 ಹಸುಗಳನ್ನು (ಧನದಾನಕ್ಕೆ ಬದಲಾಗಿ) ತಿಳಿಯ ಬಹುದಾಗಿದೆ.

ಹದಿನೈದು ಹಾಗೂ ಹದಿನೇಳನೆಯ ಶಾಸನಗಳಲ್ಲಿ 15 ರಲ್ಲಿ ರಾಜರಾಜಚೋಳನ ಚಾರಿತ್ರಿಕ ವಿವರ ನೀಡಿದ ನಂತರ, ಚೋಳರಾಜ್ಯದ ಸೋಳನಾಡಿನ ರಾಜಾರಾಜ ಮುವೆಂದ ವೇಲನ್ (ರಾಜ ರಾಜನ ಜಿಲ್ಲಾಧಿಕಾರಿ) ಆದ ಅರುಳಾಕ್ಕಿ ಎಂಬುವವನು 40 ಕಳಂಜು ಚಿನ್ನವನ್ನು ನೀಡಿ ಒಂದು ದೀಪದ ಏರ್ಪಾಡು ಮಾಡಿದನೆಂದು ತಿಳಿಸಲಾಗಿದೆ.

ರಾಜರಾಜ ಚೋಳ 1 ನೇ ಮಗ ರಾಜೇಂದ್ರಚೋಳನ ಆಡಳಿತಕಾಲದಲ್ಲಿ (ಕ್ರಿ.ಶ. 1011 ರಿಂದ ಕ್ರಿ.ಶ. 1044 ) ಕೊತ್ತೂರಿನ ಬ್ರಹ್ಮನುರಾಯನ್ ಆದ ರಾಯನ್ ರಾಜೇಂದ್ರ ಚೋಳನು (ಕೊತ್ತೂರು ಗ್ರಾಮಾಧಿಕಾರಿ-ರಾಜೇಂದ್ರ ಚೋಳನ ಅಧಿಕಾರಿ) ತಿರುಪತಿಯ ಬೆಟ್ಟದ ತಪ್ಪಲಿನಲ್ಲಿ ಕಪಿಲೇಶ್ವರ ಸ್ವಾಮಿಯ ಗುಡಿಯನ್ನು ನಿರ್ಮಿಸಿದನೆಂದು 20 ನೆಯ ಶಾಸನವು ತಿಳಿಸುವುದು.

(- ಸಶೇಷ)

**ನಮ್ಮದೇವಾಲಯ**



# ತರಿಗೊಂಡ ಶ್ರೀ ಲಕ್ಷ್ಮೀನರಸಿಂಹಸ್ವಾಮಿ

- ಮೂಲ. ಗೋಪಿಕೃಷ್ಣ
- ಅನುವಾದ . ಶ್ರೀಮತಿ ಎಸ್. ಸುರೇಖ

'ಪೆರುಗುಕೊಂಡ, ಮಂಥಾದ್ರಿ'. ತರಿಗೊಂಡದಲ್ಲಿ ಕಾಣಿಸಿದ ತರಿಗೊಂಡ ಸಾಲಗ್ರಾಮ ನೃಸಿಂಹನು. ಒಂದು ಕಥೆಯ ಪ್ರಕಾರ - ರಾಯದುರ್ಗದಲ್ಲಿ ಬರಗಾಲ (ಅತಿವೃಷ್ಟಿ) ಬಂದಾಗ ಪಶುಗಳನ್ನು ಮೇಯಿಸಲು ಅವುಗಳ ಆಹಾರಕ್ಕಾಗಿ ವಲಸೆಯಾಗಿ ಬಂದ ರಾಮಾನಾಯನಿ ಎನ್ನುವ ಪಾಳೆಗಾರನು ಪ್ರತ್ತಿಮಿಟ್ಟ ಪಾಲಸೂಯಿ ಕೆರೆಯ ದಡದಲ್ಲಿ ಕನಸಿನಲ್ಲಿ ಕಾಣಿಸಿ, ತನಗೆ ಆಲಯವನ್ನು ನಿರ್ಮಿಸಬೇಕಾಗಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿಯವರು ಕೋರಿ ಆಲಯವನ್ನು ನಿರ್ಮಿಸಿಕೊಂಡರು. ಅದಕ್ಕೆ ಮುಂಚೆಯೇ ರಾಮಾರಾಯನ ಪತ್ನಿ ಲಕ್ಷ್ಮಿನರಸಮ್ಮ ಮಜ್ಜಿಗೆಯನ್ನು ಕಡೆಯುತ್ತಿರುವಾಗ ಆ ಮಡಿಕೆಯಲ್ಲಿ ಲಕ್ಷ್ಮಿನರಸಿಂಹನು ಸಾಲಗ್ರಾಮದ ರೂಪದಲ್ಲಿ ದೊರೆತ ಆ ಸಾಲಗ್ರಾಮವನ್ನು ದೇವಾಲಯದಲ್ಲಿ ಪ್ರತಿಷ್ಠಿಸಲು ಹೇಳಿದರು. ಸ್ವಾಮಿ ಕನಸಿನಲ್ಲಿ ಆದೇಶಿಸಿದ ಮೇರೆಗೆ ಗ್ರಾಮದ ದೊಡ್ಡವರು ಲಕ್ಷ್ಮಿನೃಸಿಂಹಸ್ವಾಮಿ ಆಲಯವನ್ನು ನಿರ್ಮಿಸಿ ವಿಗ್ರಹವನ್ನು ಭೂಮಿಯಿಂದ ಅಗೆದು ಪ್ರತಿಷ್ಠಾಪಿಸಿದರು.

> **ವಾಯಲ್ಪಾಡು (ವಾಲ್ಮಿಕೀಪುರಂ) ಯಿಂದ ಗುರಂ ಕೊಂಡಕ್ಕೆ ಹೋಗುವ ದಾರಿಯಲ್ಲಿ ಐದಾರು ಕಿ.ಮೀ.ನಲ್ಲಿಯೇ 'ತರಿಗೊಂಡ' ಇದೆ. ಈ ಗ್ರಾಮದಲ್ಲಿ ವೆಂಗಮಾಂಬ ಜನಿಸಿದರಿಂದ ಊರು ಹೆಸರು ತರಿಗೊಂಡ ಎಂದು ವ್ಯಾಪ್ತಿಗೆ ಬಂದಿತು.**

ವಾಯಲ್ಪಾಡು (ವಾಲ್ಮಿಕೀಪುರಂ) ಯಿಂದ ಗುರಂ ಕೊಂಡಕ್ಕೆ ಹೋಗುವ ದಾರಿಯಲ್ಲಿ ಐದಾರು ಕಿ.ಮೀ. ನಲ್ಲಿಯೇ 'ತರಿಗೊಂಡ' ಇದೆ. ಈ ಗ್ರಾಮದಲ್ಲಿ ವೆಂಗಮಾಂಬ ಜನಿಸಿದರಿಂದ ಊರು ಹೆಸರು ತರಿಗೊಂಡ ಎಂದು ವ್ಯಾಪ್ತಿಗೆ ಬಂದಿತು. ಈ ಆಲಯದಲ್ಲಿ ಮೂರು ಶಾಸನಗಳಿವೆ. ಮೊದಲನೆಯದು ಕ್ರಿ.ಶ.1559, ವಿಜಯನಗರ ಚಕ್ರವರ್ತಿ ಸದಾಶಿವದೇವ ಮಹಾರಾಯನದು. ರಾಜರ ಅನುಮತಿ, ಪಡೆದು ಮಹಾಮಂಡಲೇಶ್ವರ ರಾಮರಾಜದೇವ ಮಹಾರಾಯ ಅಂಗೀಕೃತದಿಂದ ಜಿಲ್ಲೆಲ ವೆಂಗಳರಾಜದೇವ ಮಹಾರಾಜ ಮಂಗಳಿಯವರು ಪನ್ನು (ಕಂದಾಯ) ಕಡಿಮೆಮಾಡಿಕೊಳ್ಳುವ ಬಗ್ಗೆ. ಅಂದರೆ ಆಲಯ ಕ್ರಿ.ಶ. 1559 ರಲ್ಲಿ ಇದೆ. ಎರಡನೇಯ ಶಾಸನ ಕ್ರಿ.ಶ. 1846 ವರ್ಷದಲ್ಲಿ ಹೋಮಶಾಲೆಯನ್ನು,

ಅಡುಗೆಶಾಲೆಯನ್ನು ಗುರುಭಾಸ್ಕರಾಚಾರ್ಯ ಶಿಷ್ಯನಾದ ಎರ್ರಪ್ಪ ನಿರ್ಮಿಸಿದನು. ಮೂರನೇಯ ಶಾಸನದಲ್ಲಿ ಕ್ರಿ.ಶ. 1862ರಲ್ಲಿ ಲಕ್ಷ್ಮೀನೃಸಿಂಹಸ್ವಾಮಿಗೆ ಕೃಷ್ಣಮಶೆಟ್ಟಿ ಕಲ್ಯಾಣ ಮಂಡಪವನ್ನು ನಿರ್ಮಿಸಿದರು. ಆಲಯ 16 ನೇ ಶತಾಬ್ದದಲ್ಲಿ ನಿರ್ಮಿಸಲಾಗಿದೆ ಎಂದು ಭಾವಿಸಬಹುದು.

ಎಲ್ಲಿಯ ರಾಯದುರ್ಗ, ಎಲ್ಲಿಯ ತರಿಗೊಂಡ. ಪಶು ಸಂರಕ್ಷಣೆಯ ಮೇಲೆ ವಲಸೆ ಬಂದು ಇಲ್ಲಿ ಸ್ಥಿರಹೊಂದಿದರು. ರಾಮಾನಾಯನಿಂನ ಪತ್ನಿ ಲಕ್ಷ್ಮೀನರಸಮ್ಮ ಮೊಸರು ಕಡೆಯುವಾಗ ಅದರಲ್ಲಿ ಸಾಲಗ್ರಾಮವು ಕಾಣಿಸಿತು, ಯಾಜಮಾನಿಗೆ ಸ್ವಪ್ನದಲ್ಲಿ ನರಸಿಂಹಸ್ವಾಮಿ ಕಾಣಿಸಿ ತನ ವಿಗ್ರಹವನ್ನು ಭೂಮಿಯಿಂದ ಅಗೆದು ಆಲಯವನ್ನು ನಿರ್ಮಿಸಿ ವಿಗ್ರಹವನ್ನು ಪ್ರತಿಷ್ಠಾಪಿಸಿ, ನಿರ್ಮಾಣ ಸಮಯದಲ್ಲಿ ಧನರಾಶಿ ಸಿಕ್ಕಿ ಆಲಯದ ಕೆಳ ಬಾವಿಯೊಂದಿಗೂ ಸಹ ಅದರಲ್ಲಿ ಲಕ್ಷ್ಮೀನರಸಿಂಹಸ್ವಾಮಿಯ ಜೊತೆಯಲ್ಲಿ ಪೂರ್ತಿಯಾಗಿ ಅವರ ಪಕ್ಕದಲ್ಲಿ,ಸಾಲಗ್ರಾಮವನ್ನೂ ಪ್ರತಿಷ್ಠಿಸಿ ತರಿಗೊಂಡ ಎಂಬ ಹೆಸರಿನಿಂದ ಗ್ರಾಮವು ಏರ್ಪಾಟ್ಟಿತು. ಸ್ವಾಮಿಯೂ ಕೂಡ ತರಿಗೊಂಡ ಲಕ್ಷ್ಮೀನರಸಿಂಹಸ್ವಾಮಿ ಎಂದು ಪ್ರಸಿದ್ಧಿ ಪಡೆದರು.

ಮತ್ತೊಂದು ದೈವ ಲೀಲೆ. ಈ ಗ್ರಾಮದಲ್ಲಿ ವಿದುಷಿಮಣಿ, ತರಿಗೊಂಡವೆಂಗಮಾಂಬ ಜನಿಸಲು ಲಕ್ಷ್ಮೀನರಸಿಂಹನ ದಯೆ



**ಹಯಗ್ರೀವ ನರಸಿಂಹ ಮಂತ್ರಗಳು ಆಕೆಗೆ ದಿಶೆ ಮಾರ್ಗವನ್ನು ತೋರಿಸಿತು.ಆಕೆ ಕಾವ್ಯರಚನೆಗೆ ಉಪಕ್ರಮಿಸಿದಳು.**

**ತರಿಗೊಂಡಕ್ಕೆ ಸೇರಿದ ಒಬ್ಬ ವೈಶ್ಯ ಪ್ರಮುಖನು 1940 ರಲ್ಲಿ ಆಕೆಯ ವಿಗ್ರಹವನ್ನು ತಯಾರು ಮಾಡಿಸಿ ಲಕ್ಷ್ಮೀ ನೃಸಿಂಹಾಲಯದಲ್ಲಿ ಪ್ರತಿಷ್ಠಿಸಿ ಪುನೀತನಾದನು. ಅಲ್ಲಿ ಆಕೆಗೆ ದಿನ ಪೂಜೆ ನಡೆಯುತ್ತದೆ. ಆಕೆಯ ಜನನವು ಕ್ರಿ.ಶ. 1730 ರಲ್ಲಿ ಮಹಾಸಮಾಧಿ ಕ್ರಿ.ಶ. 1817 ರಲ್ಲಿ.**

ಯಿಂದ ಆಕೆ ಅಂತಹ ಸ್ಥಾನವನ್ನು ಪಡೆದಳು.ಕಾನಾಲ ಕೃಷ್ಣಯ್ಯ,ಮಂಗಮ್ಮ ದಂಪತಿಗಳಿಗೆ ಆಕೆ ಅಪಾರ ಮೀರಾಬಾಯಿಯಾಗಿ ಜನಿಸಿದಳು. ಆಕೆಯ ಜೊತೆ ಭಕ್ತಿ ಹುಟ್ಟಿತು. ಭಕ್ತಿಯಲ್ಲಿಯೇ ಇದ್ದುಬಿಟ್ಟಳು.ಮದುವೆ ಮಾಡಿದರೆ ಭಕ್ತಿ ಯಿಂದ ದೂರ ಹೋಗಬಹುದು ಎಂದು ಚಿತ್ತೂರು, ನಾರ ಗುಂಟಪಾಳ್ಯಂ ಇಂಜೇಟಿ ವೆಂಕಟಾಚಲ ಪತಿಗೆ ಕೊಟ್ಟು ಮದುವೆ ಮಾಡಿದರು.ಆ ಹೊತ್ತಿಗೆ ಅವಳ ಮನಸ್ಸು ತಿರುಮಲೆ ವೆಂಕಟಾಚಲ ಪತಿಯ ಮೇಲೆ ಇದೆ. ಆ ಸಂಗತಿ ಈ ವೆಂಕಟಾಚಲ ಪತಿಗೆ ಹೇಳಿದಳು. ವಿಧಿವಶಾತ್ ವೆಂಕಟಾಚಲಪತಿ ಮರಣ ಹೊಂದಿದರು, ನನ್ನ ಪತಿ ತಿರುಮಲೇಶನೇ ಎಂದು ಮುತ್ತೈದು ಚಿಹ್ನೆಗಳನ್ನು ತೆಗೆಯದೇ ವೆಂಗಮಾಂಬ ಕಾಲವನ್ನು ಕಳೆದರು.

ಮದನಪಲ್ಲಿಯಲ್ಲಿ ರೂಪಾವತಾರ ಸುಬ್ರಹ್ಮಣ್ಯ ಗುರುವನ್ನು ಶರಣಾಗತ ಹೊಂದಿ ನನ್ನ ಮಗಳ ಜೀವನವನ್ನು ಚೆನ್ನಾಗಿ ಮಾಡಿ ಮೊರೆ ಹೊಕ್ಕಿದನು ಕಾನಾಲ ಕೃಷ್ಣಯ್ಯ. ಆತ ದಯೆಯಿಂದ ವೆಂಗಮಾಂಬಕ್ಕೆ ಮಂತ್ರ, ತಂತ್ರ ,ಯಂತ್ರ ರಹಸ್ಯಗಳನ್ನು ಯೋಗ ಸೋತ್ರಗಳನ್ನು ಬೋಧಿಸಿ ಇವು ಬುನಾದಿಗಳು ಮಾತ್ರವೇ. ಭವನಗಳು ನೀನೇ ನಿರ್ಮಿಸಿಕೊಳ್ಳಬೇಕಾಗಿ ಸಲಹೆಯನ್ನು ನೀಡಿದರು. ಹಯಗ್ರೀವ ನರಸಿಂಹ ಮಂತ್ರಗಳು ಆಕೆಗೆ ಮಾರ್ಗ ದರ್ಶನವನ್ನು ತೋಲಿಸಿತು.ಆಕೆ ಕಾವ್ಯ ರಚನೆಗೆ ಉಪಕ್ರಮಿಸಿದಳು. ವೆಂಕಟಾಚಲಪತಿಯನ್ನು ಹುಡುಕಿಕೊಂಡು ಕಾಡಿನ ಮಾರ್ಗವನ್ನು ಇಡಿದಳು. ದಾರಿಯಲ್ಲಿ ಮುಗಿಲಿ ಪೆಂಟ್ಟ ಅಂಜನೇಯಸ್ವಾಮಿ ಹತ್ತಿರ ಕೆಲವು ಸಾಧನೆಯನ್ನು ಮಾಡಿ ತಿರುಮಲೆ ಸ್ವಾಮಿಯ ಆಜ್ಞೆಯ ಮೇರೆಗೆ ವೆಂಕಟಾದ್ರಿಗೆ ಸೇಲಿದಳು. ಹಥೀರಾಮ್‌ಜೀ ಮಠಕ್ಕೆ ಸೇಲಿದ ಆತ್ಮರಾವ್‌ಜೀ ಮಹತ್ ತಿಳಿದುಕೊಂಡು ವರಾಹಸ್ವಾಮಿ ಆಲಯದ ಎದುರುಗಡೆ ಕಲ್ಲುತೇರು ಪಕ್ಕ

ಒಂದು ಗುಡಿಸಲು ಕಟ್ಟಿ ಆಕೆಯ ನಿವಾಸಕ್ಕೆ ಕೊಟ್ಟರು. ಆದರೆ ಆಕೆ ತುಂಬಾ ಕಾಲ ಅಲ್ಲಿ ಇರಲಿಲ್ಲ.

ಶೀಕಾರಣ್ಯಾಂನಲ್ಲಿ ತುಂಬುರುತೀರ್ಥಂ ಹರಿಯಿತು. ಅಲ್ಲಿ ಒಂದು ಗುಹೆ (ಈಗ ಅವರ ಹೆಸರಿನಲ್ಲಿ ತರಿಗೊಂಡ ವೇಂಗಮಾಂಬ)ಯಲ್ಲಿ ಪುಷ್ಕರ ಕಾಲದಲ್ಲಿ (12ವರ್ಷ) ತಪ್ಪಸ್ಸು ಮಾಡಿ ಮಹಾಯೋಗಿನಿಯಾಗಿ ದಿವ್ಯ ಶಕ್ತಿಯಿಂದ ತಿರುಗಿ ತಿರುಮಲೆ ಸೇರಿದಳು. ತಾಳ್ಳಪಾಕದವರು ಆಕೆಯ ದಿವ್ಯತ್ವವನ್ನು ಗ್ರಹಿಸಿ ತಮ್ಮ ಮನೆಯ ಪಕ್ಕದಲ್ಲಿಯೇ ಸ್ಥಳ ವನ್ನು ಕೊಟ್ಟರು. ತರಿಗೊಂಡ ವೆಂಗಮಾಂಬ ಮಠ ನಿರ್ಮಿಸ ಲಾಯಿತು. ವರಾಹಾಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಆಕೆಗೆ ಒಂದು ಹೂತೋಟ ಇತ್ತು. ಈಗ ಆಕೆಯ ಸಮಾಧಿ ಅಲ್ಲಿಯೇ ಇದೆ. ಆಕೆಗೆ ಬಂದ ದಾನವು ಸುಮಾರು 35. ಅದರಲ್ಲಿ ನಿತ್ಯ ಪೂಜೆಗೆ, ನರಸಿಂಹಜಯಂತಿಯನ್ನು ತುಂಬಾ ಅದ್ದೂರಿಯಿಂದ ಮಾಡುತ್ತಿದ್ದರು. ಕವಿತೆಗಳಿಂದ ಪದ್ಯಪಾಠ ಗಳಿಂದ, ನಾಟಕಗಳಿಂದ ಮುಖ್ಯವಾಗಿ ಯಕ್ಷಾಗಾನಗಳಿಂದ ಸ್ವಾಮಿಯನ್ನು ರಂಜಿಸುವುದೇ ಅಲ್ಲದೇ ಸೊಗಸಾದ ಹೂಮಾಲೆಗಳು ಆತ್ಮೀಯಾಪೂಜೆ ಪುನಸ್ಕಾರಗಳು, ಪಂಚ ಭಕ್ಷಪರಮಾನ್ನವು ಸ್ವಾಮಿಯನ್ನು ಮೈಮರಸಿ ಸಂತೋಷ ವನ್ನು ಕೊಡುತ್ತಿದ್ದರು. ಆದ್ದರಿಂದ ಆಕೆಗೆ ಸ್ವಾಮಿ ಏಕಾಂತ ಸೇವೆಯಲ್ಲಿ ಮುತ್ತಿನ ಹಾರತಿಯನ್ನು ಕೊಡುವ ಭಾಗ್ಯ ಆಕೆಗೆ ಒದಗಿತು. ಈಗ ಅವರ ವಂಶಸ್ಥರು ಅನುಭವಿಸುತ್ತಿದ್ದಾರೆ.

'ಅಷ್ಟಾಘಂಟಕಲ' ಎಂದು ಕರೆಯಲ್ಪಡುವ ಆಕೆಯ ರಚನೆಗಳನ್ನು ಬರಹಗಾರರು ಬರೆಯಲ್ಪಡುವ ಎಂಟು ಜನ ಯಾವತ್ತೂ ಆಕೆಯ ಪಕ್ಕದಲ್ಲಿ ಇರುವರು. ಆಕೆಯ ರಚನೆ ಯಲ್ಲಿ ಅವರು ತಾಳಪತ್ರಗಳಲ್ಲಿ ಬರೆದು ದೇಶದಲ್ಲೆಲ್ಲಾ ವ್ಯಾಪಿಸಿ ದರು. ಆದರೆ ಆಕೆ ಸ್ವತಃಕ್ಕೆ ಒಂದು ಕೂಡ ಇಲ್ಲದೆ ಮಾಡಿ ದರು.ಮೊತ್ತ ಆಕೆಯ ರಚನೆಗಳು 18ಕ್ಕೂ ಮೇಲೆ ಇದೆ. ಪ್ರತಿ ರಚನೆಗಳಲ್ಲಿ ತರಿಗೊಂಡ ಲಕ್ಷ್ಮೀನೃಸಿಂಹನು,ತಿರುಮಲೆ ವೆಂಕಟಾಚಲ ಪತಿಗೂ ಅಭೇದವಿಲ್ಲದೆ ನೋಡುತ್ತಿದ್ದರು. ಅದೇ ತರಹ ಆಕೆ ಇಂಚೆಟಿ ವೆಂಕಟಾಚಲಪತಿಯನ್ನು, ತಿರು ಮಲೆ ವೆಂಕಟಾಚಲಪತಿಯಾಗಿ ಅಭೇದವಿಲ್ಲದೆ ನೋಡು ತ್ತಿದ್ದರು.ಆಕೆಯ ಮಹಿಮೆಯನ್ನು ರಚನೆಯಲ್ಲಿ ಎಷ್ಟೋ ತೋರಿಸಿದರೂ ಸಾಲದು.



ತರಿಗೊಂಡಕ್ಕೆ ಸೇರಿದ ಒಬ್ಬ ವೈಶ್ಯ ಪ್ರಮುಖನು 1940 ರಲ್ಲಿ ಆಕೆಯ ವಿಗ್ರಹವನ್ನು ತಯಾರು ಮಾಡಿಸಿ ಲಕ್ಷ್ಮೀ ನೃಸಿಂಹಾಲಯದಲ್ಲಿ ಪ್ರತಿಷ್ಠಿಸಿ ಪುನೀತನಾದನು.ಅಲ್ಲಿ ಆಕೆಗೆ ದಿನ ಪೂಜೆ ನಡೆಯುತ್ತದೆ. ಆಕೆಯ ಜನನವು ಕ್ರಿ.ಶ. 1730 ರಲ್ಲಿ, ಮಹಾಸಮಾಧಿ ಕ್ರಿ.ಶ. 1817 ರಲ್ಲಿ.

ಸುತ್ತು ಎತ್ತರವಾದ ಪ್ರಕಾರವಾಗಿ ಮೂರು ಅಂತಸ್ತಿನ ರಾಜಗೋಪುರದಲ್ಲಿ ನೆಲಸಿದ ಶ್ರೀ ಲಕ್ಷ್ಮೀ ನೃಸಿಂಹಾಲಯದಲ್ಲಿ 9 ದಿನಗಳ ಕಾಲ ಬ್ರಹ್ಮೋತ್ಸವಗಳು ವೈಭವವಾಗಿ ನಡೆಯು ತ್ತದೆ.

ಸತ್ಯಪ್ರಮಾಣಗಳಿಗೆ ಹೆಸರುಗಳಿಸಿದ ಈ ಕ್ಷೇತ್ರ. ಈ ಆಲಯದಲ್ಲಿ ಬಲಿಪೀಠದ ಮುಂದೆ ನಿಂತು ಯಾರಾದರು ಸತ್ಯ ಪ್ರಮಾಣವನ್ನು ಮಾಡಿದರೆ ನ್ಯಾಯಸ್ಥಾನದ ಜೊತೆಗೆ ಎಲ್ಲರೂ ಕೂಡ ಅಂಗೀಕರಿಸಬೇಕಾದುದ್ದೆ.ಅಂತಹ ವಿಶ್ವಾಸ ಸತ್ಯದೇವ ನಾದ ಈ ಲಕ್ಷ್ಮೀ ನೃಸಿಂಹನ ಸ್ವಾಮಿಯ ಮೇಲಿದೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ



# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ :

(ಬಿಡಿಬಿಡಿ ಅಕ್ಷರಗಳಲ್ಲಿ ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ ಬರಿಯಿರಿ. ಪಿನ್ ಕೋಡ್ ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಓ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ :

ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳಿಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸು ವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂ ಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

**ಅ.** ತಾವು ಹಳೆಯ ಚಂದಾದಾರ ರಾಗಿದ್ದರೆ ಚಂದಾ ಪುನರುದ್ಧಾರ - ಪುರ್ನವೀಕರಿಸುವಾಗ ಇ. ಎಂ. ಓ / ಎಂ.ಓ ಮಾಡು ವಾಗ ಚಂದಾ ಕ್ರಮ ಸಂಖ್ಯೆ ಯನ್ನು ತಪ್ಪದೆ ನಮೂದಿಸು ವುದು.

**ಆ.** ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿಕೊಳ್ಳಬೇಕು.

**ಇ.** ನಿಮಗೆ ಬೇಕಾದ ಭಾಷೆ ಯನ್ನು ಖಚಿತವಾಗಿ ನಮೂದಿಸ ಬೇಕು.

ಇವೆಲ್ಲ ವಿವರಗಳನ್ನೂ ಸರಿ ಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇ ಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.

**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**


Edited and Published on behalf of T.T.Devasthanams by **Dr. K. Radha Ramana**, M.A., M.Phil., Phd., Chief Editor, T.T.D. and Printed at T.T.D. Press by **Sri R.V. Vijaya Kumar,** B.A., B.Ed., Dy. E.O. (Publications & Press), T.T.D. Press, Tirupati - 517 507.

## ತಿರುಮಲ ತಿರುಪತಿ ದೇವಸ್ಥಾನಗಳು

'ಸಪ್ತಗಿರಿ' ಆಧ್ಯಾತ್ಮಿಕ ಮಾಸಪತ್ರಿಕೆ (ಕನ್ನಡ, ತೆಲುಗು, ತಮಿಳು, ಇಂಗ್ಲೀಷ್, ಹಿಂದಿ, ಸಂಸ್ಕೃತ)

**ಮನೆಮನೆಗೂ 'ಸಪ್ತಗಿರಿ'!** **ಇದು ಸ್ವಾಮಿಯ ಅಕ್ಷರಸಿರಿ !**



**ಕಲಿಯುಗ ಪ್ರತ್ಯಕ್ಷ ದೈವನಾದ ಶ್ರೀವೇಂಕಟೇಶ್ವರನ ದಿವ್ಯ ವೈಭವ**
**ಪ್ರತಿತಿಂಗಳು ... 'ಸಪ್ತಗಿರಿ' ಪತ್ರಿಕೆಯಲ್ಲಿ ನೋಡಿರಿ... ಓದಿರಿ...**





ಭಗವಂತನನ್ನು ಸಂದರ್ಶಿಸಲು,
ದೇವದೇವನನ್ನು ಸೇರುವುದಕ್ಕೆ ಅನಂತ ಮಾರ್ಗಗಳು,
ಪದ್ಧತಿಗಳು.
ಅನಾಥರಕ್ಷಕನು, ಅಪದ್ರಕ್ಷಕನಾದ ಆ ಸಪ್ತಗಿರೀಶನನ್ನು
ಕೆಲವರು ಅಕ್ಷರಪುಷ್ಪಗಳಿಂದ ಆರಾಧಿಸುತ್ತಾರೆ.

ಸ್ವಾಮಿಯ ಅಕ್ಷರ ಪ್ರಸಾದವಾದ 'ಸಪ್ತಗಿರಿ'ಯನ್ನು
ಓದುವುದು, ಓದಿಸುವುದು ಕೂಡಾ ಅವನಿಗೆ ಮಾಡುವ ಉತ್ತಮ ಸೇವೆಯೇ.

ಪ್ರತಿ ತಿಂಗಳು........."ಸಪ್ತಗಿರಿ" ಓದಿರಿ... ನಿಮ್ಮ ಆತ್ಮೀಯರಿಂದ ಓದಿಸಿರಿ!
ಪ್ರತಿ ತಿಂಗಳು ಸ್ವಾಮಿಯನ್ನು ಈ ಮೂಲಕ ದರ್ಶಿಸಿ... ತಿರುಮಲೆಯ ವಿಶೇಷಗಳನ್ನು ತಿಳಿದುಕೊಳ್ಳಿ.

ಸಪ್ತಗಿರಿ ಅಭಿವೃದ್ಧಿಗೆ ಆಕಾಂಕ್ಷಿಸಿ
ಸಪ್ತಗಿರಿ ಮಾಸಪತ್ರಿಕೆಗೆ ಚಂದಾವನ್ನು ಕಟ್ಟಿ ಕಟ್ಟಿಸಿರಿ.





**ಚಂದಾ ವಿವರಗಳು**

| | | |
|---|---|---|
| ಬಿಡಿ ಪ್ರತಿ.... | ರೂ. | 5-00 |
| ವಾರ್ಷಿಕ ಚಂದಾ.... | ರೂ. | 60-00 |
| ಅಜೀವ ಚಂದಾ.... | ರೂ. | 500-00 |
| ವಿದೇಶಿ ವಾರ್ಷಿಕ ಚಂದಾ... | ರೂ. | 850-00 |

ಗಮನಿಸಿ - ಸಂಸ್ಕೃತ ಭಾಷೆಗೆ ಅಜೀವ ಚಂದಾ ಇಲ್ಲ.

ಕಾರ್ಯಾಲಯದ ಕೆಲಸದ ದಿನಗಳಲ್ಲಿ
'ಸಪ್ತಗಿರಿ' ಮಾಸಪತ್ರಿಕೆಗೆ ಸಂಬಂಧಿಸಿದ
ಪೂರ್ತಿ ವಿವರಗಳಿಗೆ
ಸಂಪ್ರದಿಸಬೇಕಾದ ದೂರವಾಣಿ ಸಂಖ್ಯೆಗಳು:
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

ನಮ್ಮ ವಿಳಾಸ
ಪ್ರಧಾನ ಸಂಪಾದಕರು,
'ಸಪ್ತಗಿರಿ' ಮಾಸಪತ್ರಿಕೆ ಕಾರ್ಯಾಲಯ
ತಿ.ತಿ.ದೇ. ಪ್ರೆಸ್ ಕಾಂಪೌಂಡ್
ಕೆ.ಟಿ.ರಸ್ತೆ, ತಿರುಪತಿ - 517 507.

ಸಲಹೆ/ಸೂಚನೆಗಳು/ದೂರುಗಳಿಗಾಗಿ ಸಂಪ್ರದಿಸಿ
**sapthagiri_helpdesk@tirumala.org**

SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams 25-02-2019
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

